ಲೇಖಕರು:

ಶ್ರೀ ಯು. ವಾಸುದೇವ ನಾಯಕ್,

ಕಡಿರುದ್ಯಾವರ.

ಪ್ರಕಾಶಕರು:

ಶ್ರೀ ಎಮ್. ಡಿ. ಅಧಿಕಾರಿ,

ಮೆನೇಜರ್, ವರಂಗ ಮಠ.

1969 ಬೆಲೆ: ರೂ. 1-25

1969

ಶ್ರೀ ಪದ್ಮಾವತಿದೇವೀ ಮಹಾತ್ಮ್ಯೆ

ಅ ಥ ವಾ

ಜಿನದತ್ತರಾಯ ಚರಿತೆ

ಲೇಖಕರು:

ಶ್ರೀ ಯು. ವಾಸುದೇವ ನಾಯಕ್,

ಕಡಿರುದ್ಯಾವರ.

ಪ್ರಕಾಶಕರು:

ಶ್ರೀ ಎಮ್. ಡಿ. ಅಧಿಕಾರಿಗಳು,

ಮೆನೇಜರ್, ವರಂಗ ಮಠ.

1969.

ಶ್ರೀ ಪದ್ಮಾವತಿದೇವೀ ಮಹಾತ್ಮ್ಯೆ

ಅಥವಾ

ಜಿನದತ್ತರಾಯ ಚರಿತೆ

ಪ್ರಥಮ ಮುದ್ರಣ: ೧೯೬೯.

ಪ್ರತಿಗಳು: ೧೦೦೦.

ಬೆಲೆ ರೂ. ೧-೨೫

ಮುದ್ರಕರು:

ಶ್ರೀ ಪದ್ಮಾಂಬಾ ಪ್ರಿಂಟರ್ಸ್,

ಮೂಡುಬಿದಿರೆ, ದ. ಕ.

ಸದ್ಗುರು ಆಶೀರ್ವಚನ ಮುನ್ನುಡಿ

ಶ್ರೀ ಕುಂದಕುಂದಾಚಾರ್ಯ ಬಾಲಬ್ರಹ್ಮಚರ್ಯಾಶ್ರಮ, ಕುಂದಾದ್ರಿ,
ಮು. ಪೋ: ಹುಂಚ. ಜಿಲ್ಲಾ: ಶಿವಮೊಗ್ಗ. (ಮೈಸೂರು)

श्री कुंदकुंदाचार्य बालब्रह्मचर्याश्रम, कुंदाद्रि
मु. पोः हुंमच. जिः शिमोगा. (मैसूर)

ಕಡಿರುದ್ಯಾವರ ಕವಿ ಶ್ರೀ ವಾಸುದೇವ ನಾಯಕ್, ಇವರು ಬರೆದ "ಶ್ರೀ ಪದ್ಮಾವತಿದೇವೀ ಮಹಾತ್ಮ್ಯ" ಅಥವಾ "ಜಿನದತ್ತರಾಯ ಚರಿತೆ"ಯ ಯಕ್ಷಗಾನ ಪ್ರಸಂಗವನ್ನು ನಮ್ಮ ಸಮ್ಮುಖ-ಶಿಷ್ಯ ವೃಂದದ ಮಧ್ಯೆ ಹಾಡಿ ತೋರಿಸಿದರು. ಸಾಂಸಾರಿಕ ವ್ಯವಹಾರಿಗಳು ಧಾರ್ಮಿಕ ಜೀವನವನ್ನನುಸರಿಸಿ, ಕೃತಾರ್ಥತೆಯನ್ನು ಪಡೆದ ನೈಜಸತ್ಯವನ್ನು ತೋರಿಸುವ ಈ ಕಥಾನಿರೂಪಣೆಯು ಜನಸಾಮಾನ್ಯರಿಗೂ ತಿಳಿಯುವಂತೆ ಸುಲಭ ರೂಪವಾಗಿ ಯಕ್ಷಗಾನದಲ್ಲಿ ಬರೆದು ಪ್ರಯತ್ನಿಸಿದ್ದಾರೆ.

ಧರ್ಮಪಥದಿಂದ ಬಹು ದೂರ ಸರಿಯುತ್ತಿರುವವರಿಗೂ, ಧರ್ಮಪಥದಿಂದಲೇ ಮುನ್ನಡೆಯುವವರಿಗೂ, ಉಭಯ ಪಂಥದವರಿಗೂ ನೀತಿ ಬೋಧಾತ್ಮಕವಾಗಿರುವ ತತ್ತ್ವಗಳನ್ನೂ ಜೀವನಾಚರಣೆಗಳನ್ನೂ ಬೋಧಿಸುವ ಜಾನಪದ ಕಲಾಕ್ಷೇತ್ರದಲ್ಲಿ ಯಕ್ಷಗಾನ ಕಲೆಗೆ ಇಂದು ನಾಡಿನಲ್ಲಿ ಉನ್ನತ ಸ್ಥಾನವಿದೆ.

ಹೊಂಬುಜ ಕ್ಷೇತ್ರ ಮಹಾತ್ಮೆಯು ಯಕ್ಷಗಾನ ರೂಪದಲ್ಲಿ ರಚಿಸಿದ ಇವರ ಈ ಕೃತಿಯು ಜನಾನುರಾಗ ಪಡೆದು, ಬಹು ಜನರಿಗೆ ಧರ್ಮಪಥ ತೋರಿ ಮುನ್ನಡೆಸಲಿ. ಶ್ರೀ ಜಿನೇಶ್ವರ ಪಾರ್ಶ್ವನಾಥ ಮಹಾಸ್ವಾಮಿಯೂ ಶ್ರೀ ಧರಣೇಂದ್ರ-ಪದ್ಮಾವತೀ ದೇವಿಯರೂ ಕವಿಗಳಿಗೂ, ಯಕ್ಷಗಾನ ಕಲಾಭ್ಯಾಸಿಗಳಿಗೂ, ಪ್ರೋತ್ಸಾಹಕ ಪೋಷಕರಿಗೂ, ಸರ್ವರಿಗೂ ಶುಭವನ್ನು ಉಂಟುಮಾಡಲಿ ಎಂದು ಹರಸುತ್ತೇವೆ.

ಇತಿ ಭದ್ರಂ

ಹುಂಚ ಜೈನಮಠ,
ತಾ. 2-7-1964.

श्री दे. स्वामीजी.

ಪ್ರಾರ್ಥನಾಸ್ತವನ

ಪೊರೆಗುಂ ಪಾರ್ಶ್ವೇಶ್ವರ ಶ್ರೀ ।
ವರ ನಾಗೇಂದ್ರಂ ಬಿಸುಮಯನನುಪಮಚರಿತಂ ॥
ಧರಣಿಯೊಳೀ ಸತ್ಕಾವ್ಯಂ ।
ಮೆರೆಯುವ ತೆರದಲಿ ಹರಸುತ ಕಾವುದು ನಿರುತಂ ॥೧॥

ಶ್ರೀ ಪಾರ್ಶ್ವ ಶ್ರೀನಾಥಂ ।
ಪಾಪವ ಹರಿಸುತ ಹರಸಲಿ ಕವಿಯಂ ಕೃತಿಯುಂ ॥
ಶ್ರೀಪಾದಂಗಳಿಗರ್ಪಿಸಿ ।
ನಾಂ ಪಾವನನಪ್ಪೆನು ಭಕುತಿಯ ಕಾಣಿಕೆಯಂ ॥೨॥

ವಂದನಾಸ್ತವನ

ರಾಗ—ಸುರುಟಿ—ಏಕತಾಳ

ಪದ್ಮಾವತಿ ತಾಯೇ । ಪಾಲಿಸು । ಸದಯೆ ಮಹಮ್ಮಾಯೇ । ಪದ
ವಿಧಿ ನಿರ್ಮಾಣ ಭವಾಂಡದಿ । ಸದಮಲ ಭಾವದಿ । ಮುದದಿಂ ಭಜಿಪ
॥೧॥ ಹೊಂಬುಜ ಕ್ಷೇತ್ರದಲೀ । ನೆಲಸುತ । ನಂಬಿದ ಭಕ್ತರಲಿ
ಸಂಭ್ರಮದಿಂದಲಿ । ಸೇವೆಯ ಪಡೆಯುತ । ಯಿಂಬನು ಕರುಣಿಪ । ಶಾಂಭ
ರೂಪೆ ॥೧॥ ಚರಣವ ದೃಢದಿಂದಾ । ನುತಿಪೆವು । ಪರಮಾದರದಿಂದಾ
ಕರುಣಿಸು ವರಗಳ । ಶಿರಗನು ನೀಡುವೆ । ವರದಾಂಬಕಿ ದಯ । ವಿರ
ನಮಾಮಿ ॥೩॥

ಆಶೀರ್ವಚನ

— ಶ್ರೀರಸ್ತು —

ಉತ್ಸಾಹಿ ತರುಣ ಕಲಾವಿದರು ರಚಿಸಿದ ಹುಂಬುಜ ಪದ್ಮಾವತೀ ಚರಿತೆ ಯಕ್ಷಗಾನವನ್ನು ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಶ್ರೀ ಹೆಗ್ಗಡೆಯವರ ಸುಪುತ್ರರ ಉಪನಯನ ಸಮಾರಂಭದಲ್ಲಿ ಆಡಿ ಅಭಿನಯಿಸಿದ್ದು ಮಕ್ಕಳು ಮುದುಕರೆಲ್ಲ ಅದೃಶ್ಯವಾದ ದೇವೀಶಕ್ತಿಯೆಂಬುದು ಇದೆ ಎಂದು ತಲೆಬಾಗಿದರು. ಧರ್ಮವೇ ಶರಣೆಂದರು.

ಇಂಥ ಪುಣ್ಯಪ್ರದ ಕಲಾಭಿಮಾನಿಗಳು ಇನ್ನಷ್ಟು ಜನಿಸಲಿ. ನಾಡು ಬೆಳಗಲಿ. ಧರ್ಮವೇ ವೃದ್ಧಿಯಾಗಲಿ.

ಭದ್ರಂ ಭೂಯಾದಿತ್ಯಾಶೀರ್ವಾದಃ

ಶ್ರೀ ಲಲಿತಕೀರ್ತಿಜೀ,
ಶ್ರೀ ದಾನಸಾಲಾ ಮಠ,
ಕಾರ್ಕಳ, ದ. ಕ.

ನನ್ನ ತೀರ್ಥರೂಪರಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಕಡಿರುದ್ಯಾವರದ ಯು. ವಾಸುದೇವ ನಾಯಕರಿಂದ ವಿರಚಿತ ಹೊಂಬುಜ ಕ್ಷೇತ್ರ ಮಹಾತ್ಮ್ಯೆ ಯಕ್ಷಗಾನ ಪ್ರಸಂಗವನ್ನು ಪ್ರೋತ್ಸಾಹಿಸಿ, ನಮ್ಮ ಮೇಳದಲ್ಲಿಯೇ ಪ್ರದರ್ಶನವನ್ನೇರ್ಪಡಿಸಿ ದೇವಿಯ ಚಾರಿತ್ರ್ಯವನ್ನು ಸರ್ವರೂ ಅರಿಯುವಂತೆ ಏರ್ಪಾಡು ಮಾಡಿದ್ದರು. ಸದರಿ ಚಾರಿತ್ರಿಕ ಪ್ರಸಂಗಕ್ಕೆ ನಮ್ಮ ಹಾರ್ದಿಕ ಶುಭಾಶಯಗಳು, ಹಾಗೂ ಆಶೀರ್ವಾದಗಳು

ಶ್ರೀ ವೀರೇಂದ್ರ ಹೆಗ್ಗಡೆಯವರು,
ಶ್ರೀಕ್ಷೇತ್ರ - ಧರ್ಮಸ್ಥಳ.

ಯಕ್ಷಗಾನವು ದಕ್ಷಿಣ ಕನ್ನಡ ಜಿಲ್ಲೆಯ ಒಂದು ವಿಶಿಷ್ಟ ಕಲೆಯಾಗಿದೆ. ಈ ಕಲೆಯ ಜೀವಾಳವಾಗಿರುವ ಯಕ್ಷಗಾನ ಪ್ರಬಂಧ ರಚನೆಯಲ್ಲಿ ಈ ಜಿಲ್ಲೆಯು ಅಗ್ರಸ್ಥಾನ ಪಡೆದಿದೆ. ಆ ಪರಂಪರೆಯು ಅಂದಿನಿಂದ ಇಂದಿನ ವರೆಗೂ ಹರಿಯುತ್ತ ಬಂದಿದೆ. ಆಧುನಿಕರೂ ಆ ಪರಂಪರೆಯನ್ನು ಮತ್ತೆ ಮುಂದುವರಿಸುತ್ತಿರುವುದು ಸ್ತುತ್ಯವಾದುದು. ಈ ಸ್ತುತ್ಯಕಾರ್ಯದಲ್ಲಿ ಶ್ರೀ ಕಡಿರುದ್ಯಾವರದ ವಾಸುದೇವ ನಾಯಕರೂ ತಮ್ಮ ಕೌಶಲ ತೋರಿದ್ದಾರೆ.

ನಾಟಕಾದಿ ಲಲಿತ ಸಾಹಿತ್ಯ ರಚನೆಯೊಂದಿಗೆ ಅವರು ಯಕ್ಷಗಾನ ಪ್ರಬಂಧಗಳನ್ನೂ ರಚಿಸಿ, ಕನ್ನಡ ಸಾಹಿತ್ಯಕ್ಕೆ ತನ್ನ ಸೇವೆ ಸಲ್ಲಿಸುತ್ತಿರುವರು. ಪ್ರಸ್ತುತ "ಶ್ರೀ ಪದ್ಮಾವತಿದೇವೀ ಮಹಾತ್ಮ್ಯ" ಅಥವಾ "ಜಿನದತ್ತರಾಯ ಚರಿತೆ"ಯು ಹೊಸ ಪ್ರಬಂಧವಾದರೂ ಪ್ರಯೋಗಕ್ಕೆ ಅನುಕೂಲವಾಗಿಯೇ ಇದೆ.

ಯಕ್ಷಗಾನಕ್ಕೆ ವಿಶಿಷ್ಟವಾದ ಕಂದ, ವೃತ್ತಗಳ, ಭಾಮಿನಿ, ತ್ರಿಪದಿ ಮುಂತಾದ ಛಂದಸ್ಸುಗಳು, ವಿವಿಧ ತಾಳಗಳಲ್ಲಿ, ಕಲ್ಯಾಣಿ, ಮುಖಾರಿ, ಸಾರಂಗ, ಭೈರವಿ ಮುಂತಾದ ರಾಗಗಳನ್ನು ಬಳಸಿಕೊಂಡಿದ್ದಾರೆ. ಪ್ರಬಂಧದ ಶೈಲಿಯೂ ಉತ್ತಮವಾಗಿದೆ. ಇಂತಹ ಕೃತಿಯನ್ನು ಕನ್ನಡಿಗರ ಮುಂದಿಟ್ಟದಕ್ಕೆ ಶ್ರೀ ನಾಯಕರನ್ನು ಅಭಿನಂದಿಸುತ್ತೇನೆ. ಅವರ ಈ ಕೃತಿಯು ಸಾರ್ಥಕವಾಗಿ "ಶ್ರೀ ಪದ್ಮಾವತಿದೇವೀ ಮಹಾತ್ಮ್ಯ"ಯು ಎಲ್ಲೆಲ್ಲೂ ಹಬ್ಬುತಿರಲೆಂದು ಹಾರೈಸುತ್ತೇನೆ.

ಡಿ. ಪುಟ್ಟಸ್ವಾಮಿ,
ಸಂಪಾದಕ: 'ವಿವೇಕಾಭ್ಯುದಯ'
ವೀರಕುಟೀರ, ಮಂಗಳೂರು.

ಶ್ರೀ ಪದ್ಮಾವತೀದೇವಿ ಮಹಾತ್ಮೆ ಯಕ್ಷಗಾನ ರೂಪದಲ್ಲಿ ಬಯಲಾಟ ಆಡಿದ್ದು ನಾನು ನೋಡಿದ್ದೇನೆ. ಆ ಯಕ್ಷಗಾನವು ಕಲಾ ರೂಪದಿಂದ ಕೂಡಿದೆ. ಸಾಮಾನ್ಯ ಜನರಿಗೆ ಆಕರ್ಷಣೆ ರೂಪದಿಂದಿದೆ. ಪಾತ್ರಧಾರಿಗರು ಜೈನತತ್ವ ಪುರಾಣಗಳ ಅನುಭವ ಪಡೆದಿದೆ. ಆಡಿದರೆ ಅಲ್ಲಲ್ಲಿ ತಪ್ಪು ಭಾವನೆಗಳುಂಟಾಗಲಿಕ್ಕೆ ಸಂಭವವಿದೆ. ಇದೇ ರೀತಿ ಅನೇಕ ಜಿನಕಥೆಗಳು ಯಕ್ಷಗಾನ ರೂಪಕ್ಕೆ ಬರಲೆಂದು ಹಾರೈಸುತ್ತೇನೆ.

ಕೆ. ಬಿ. ಜಿನರಾಜ ಹೆಗ್ಡೆ,
ಅಡ್ವಕೇಟ್, ರೆಂಜಾಳ.

ಧರ್ಮ, ಸದ್‌ಭಾವನೆ, ಮತ್ತು ಸದಾಚಾರ ಇತ್ಯಾದಿಗಳ ಪ್ರಚಾರಕ್ಕೂ ಮತ್ತು ಸತ್‌ಪುರುಷರ ಪ್ರಚಾರಕ್ಕೂ ಕವಿಗಳ ನಾನಾ ತರಹದ ಕೃತಿಗಳು ಬಹಳ ಸಹಾಯಕಗಳಾಗಿರುತ್ತವೆ.

ಹಾಗೆಯೇ ಹೊಂಬುಜ ಕ್ಷೇತ್ರದಲ್ಲಿ ವಿರಾಮಾನರಾಗಿರುವ ಶ್ರೀ ಪದ್ಮಾವತಿದೇವಿಯ ಮಹಾತ್ಮೆಯನ್ನು ನಾಟಕ ರೂಪದಲ್ಲಿಯೂ ಮತ್ತು ಯಕ್ಷಗಾನ ಬಯಲಾಟಕ್ಕೆ ಸರಿಯಾಗಿಯೂ ಬರೆದು ಶ್ರೀ ಯು. ವಾಸುದೇವ ನ್ಯಾಕರು ಶ್ಲಾಘನೀಯ ರೀತಿಯಲ್ಲಿ ಸಮಾಜಸೇವೆ ಮಾಡಿರುವುದು ಬಹು ಸಂತೋಷವಾದ ವಿಷಯ.

ಎಂ. ಕೆ. ದೇವರಾಜ್, ಎಂ.ಎ., ಬಿ.ಎಲ್.
ಅಡ್ವಕೇಟ್, ಮಂಗಳೂರು.

ರಸಿಕ ಕಲಾವಿದ ಕವಿಗಳಾದ ಕಡಿರುದ್ಯಾವರ ವಾಸುದೇವ ನಾಯಕರಿಗೆ—

ನೀವು ನಮ್ಮೆದುರು ಓದಿದ **"ಹೊಂಬುಜ ಕ್ಷೇತ್ರ ಮಹಾತ್ಮೆ"** ಬಹಳ ಉತ್ತಮವಾಗಿದೆ. ನೀವು ಇನ್ನೂ ಶ್ರಮವಹಿಸಿ ಇದಕ್ಕಿಂತಲೂ ಶ್ರೇಷ್ಠ ಜೈನ ಕಥೆ ಯಕ್ಷಗಾನ ಕೃತಿಗಳನ್ನು ರಚಿಸಿ ಬಹುಜನರ ಮೆಚ್ಚುಗೆಗೆ ಪಾತ್ರರಾಗಿ ಆ ಸರಸ್ವತಿದೇವಿಯ ಕೃಪಾಕಟಾಕ್ಷ ಆಶೀರ್ವಾದ ಪಡೆದು ಧನ್ಯರಾಗಿರೆಂದು ನಮ್ಮೆಲ್ಲರ ಹಾರ್ದಿಕ ಅಭಿಲಾಷೆಯಾಗಿರುವುದು.

ಇಂತಿ ನಮಸ್ಕಾರ,

ಎ. ಧರ್ಮಪಾಲ ಸೆಟ್ಟಿ,
ಅರಳ ಛತ್ರ.

ಮಾನ್ಯ ಲೇಖಕ ಶ್ರೀ ಯು. ವಾಸುದೇವ ನಾಯಕ್, ಕಡಿರುದ್ಯಾವರ, ಇವರು ನನಗೆ ಚಿರಪರಿಚಿತರು. ಇವರು ಸರ್ವಧರ್ಮಸಹಿಷ್ಣುತೆ ದೃಷ್ಟಿಯಿಂದ "ಶ್ರೀ ಪದ್ಮಾವತೀ ದೇವಿ ಮಹಾತ್ಮ್ಯೆ"ಯನ್ನು ಯಕ್ಷಗಾನ ಪ್ರಸಂಗ ರೂಪದಲ್ಲಿ ಬರೆದಿರುವ ಈ ಸಾಹಿತ್ಯದ ಹೊಸ ಸುಧಾರಣೆಗೆ ಶ್ರೀ ಭಗವಂತನು ಅವರನ್ನು ಹರಸಲಿ ಎಂದು ಪ್ರಾರ್ಥನೆ.

ರತನ್‌ಕುಮಾರ್ ಕಟ್ಟೆಮಾರ್, ಎಂ.ಎಲ್.ಎ.,
ಮಂಗಳೂರು-3.

ಬಂಗ್ವಾಡಿ ಕಡಿರುದ್ಯಾವರ ಗ್ರಾಮದ ನಿವಾಸಿಗಳಾದ ಉತ್ಸಾಹಿ ನವತರುಣರಾದ ಶ್ರೀ ವಾಸುದೇವ ನಾಯ್ಕರು ಸಹಜವಾಗಿ ಹುಟ್ಟು ಪ್ರತಿಭಾಶಾಲಿ ಕವಿಗಳೆಂಬುದು ಅವರ ಈ ಕೃತಿಗಳಿಂದ ಸ್ಪಷ್ಟವಾಗುವುದು. ರಸಿಕ ಕಲಾ ಪ್ರೇಮಿಗಳಿಗೆ ವಿಮರ್ಶಕರ ಸಹಾಯ ಪ್ರೋತ್ಸಾಹ ಅತ್ಯಗತ್ಯ. ಅವರ ಕೃತಿಗಳಲ್ಲಿ ಹೊಂಬುಜ ಮಹಾತ್ಮೆ ಯಕ್ಷಗಾನ ಪ್ರಸಂಗವನ್ನು ಇವರು ನಮ್ಮ ಸಮಕ್ಷಮ ಉತ್ತಮವಾಗಿ ಹಾಡಿ ಹೇಳಿದರು. ಯಕ್ಷಗಾನ ಕಲೆಯಲ್ಲಿಯೂ ಇವರು ನಿಷ್ಣಾತರೆಂಬುದು ಸ್ಪಷ್ಟವಾಗುವುದು. ನಾಡಿನ ಅಭ್ಯುದಯ ಸಾಧನೆಗಾಗಿ ದಿನ-ರಾತ್ರಿ ಪ್ರಮಾಣಿಕತನದಿಂದ ದುಡಿಯುವ ಕಡಿರುದ್ಯಾವರ ಹೈಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯ ರಾದ ಇವರಿಗೆ ಸಾಹಿತ್ಯ ಕಲಾಭಿಮಾನಿಗಳೆಲ್ಲರೂ ಸರ್ವ ಪ್ರೋತ್ಸಾಹನೀಡ ಬೇಕಾಗಿ ಪ್ರಾರ್ಥನೆ. ಇವರು ದೀರ್ಘಾಯುಷಿಗಳಾಗಿ ಬಾಳಿ ಇವರಿಂದ ಇತೋಪ್ಯತಿಶಯ ದಿವ್ಯ ಕಾವ್ಯಕೃತಿಗಳು ಮುಂದಕ್ಕೆ ಪ್ರಕಟವಾಗಿ ನಾಡಿನ ಅಭ್ಯುದಯ ಸಾಧನೆಗೆ ನೆರವಾಗಲೆಂದು ಶ್ರೀ ದೇವರಲ್ಲಿ ಹಾರ್ದಿಕ ಭಾವನೆ.

ಮಾ. ವರ್ಧಮಾನ ಹೆಗ್ಡೆ.
'ಅಂತರಾತ್ಮ'
ಶ್ರೀ ಮಹಾವೀರ ಸೇವಾ ಭಜನಾ ಮಂಡಳಿ,
ಅರಳ.

ನಾನು 1932ನೇ ಇಸವಿಯಿಂದ ಯಕ್ಷಗಾನ ಕ್ಷೇತ್ರದಲ್ಲಿ ಕಲಾಸೇವೆಯನ್ನು ಮಾಡುತ್ತಾ ಈ ವರೆಗೆ ಬಂದಿದ್ದೇನೆ. ಹಲವು ಪ್ರಸಂಗಗಳನ್ನು ನಾನು ನೋಡಿದ್ದೂ ಇದೆ. ಪ್ರಕೃತ ಶ್ರೀಯುತ ಉಜಿರೆ ವಾಸುದೇವ ನ್ಯಾಕರು ಜೈನಮತ ಸಂಪ್ರದಾಯದಂತೆ ಎಂದೋ ಸ್ಥಾಪಿತವಾದ ಹೊಂಬುಜ ಕ್ಷೇತ್ರದ ಮಹಿಮೆಯನ್ನು ಯಕ್ಷಗಾನ ರೂಪದಲ್ಲಿ ಸೃಜಿಸಿದ್ದಾರೆ. ಇದರಲ್ಲಿ ಮೂಲಕಥೆಗೆ ತೊಡಕು ಇಲ್ಲದ ರೀತಿ ಸರಾಗವಾಗಿ ಹಾಡಿ ಪ್ರದರ್ಶಿಸಲು ಅನುಕೂಲವಾಗುವಂತೆ ಬಹು ಜಾಗ್ರತೆಯಿಂದ ಬರೆದಿರುತ್ತಾರೆ. ಇದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಸಜ್ಜನ ವಿಧೇಯರಾದ ಶ್ರೀ ವಾಸುದೇವ ನ್ಯಾಕರಿಗೆ ಇಂತಹ ಕೃತಿಗಳನ್ನು ಮಾಡಲು ಭಗವಂತನು ಆರೋಗ್ಯಾದಿ-ಭಾಗ್ಯಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ನಾಟಿ ಶಾಂತಿರಾಜಯ್ಯ, ಪಾಣೆಮಂಗಳೂರು.

ಸನ್ಮಿತ್ರರಾದ ಶ್ರೀ ಯು. ವಾಸುದೇವ ನಾಯಕ್, ಇವರು ನನಗೆ ಚಿರಪರಿಚಿತರು. ಇವರು ಹಲವಾರು ಕೃತಿಗಳನ್ನು ರಚಿಸಿ, ವಿದ್ವಾಂಸರಾದಿ ಬಡವ-ಬಲ್ಲಿದ ಜನಾಂಗಕ್ಕೆ ತನ್ನ ಹುಟ್ಟುಗುಣ ವರಪ್ರತಿಭೆಯಿಂದ ಈ ಮೊದಲೇ ಪರಿಚಿತರಾಗಿರುವರು. ಇವರು ಈಗ ರಚಿಸಿರುವ ಯಕ್ಷಗಾನವು ವಿದ್ವತ್ಪೂರ್ಣವಾಗಿದೆಯೆಂಬುದು ಓದುಗರು ಓದಿಯೇ ತಿಳಿಯಬೇಕೆಂಬುದು ಅತಿಶಯೋಕ್ತಿಯಾಗಲಾರದು. ಶ್ರೀ ಮಹಾದೇವಿಯು ಇವರ ನಡೆ-ನುಡಿಗಳಿಗೆ ಸದಾ ಹರಸಲೆಂದು ಶ್ರೀ ಪದುಮಾಂಬೆಯನ್ನು ಪ್ರಾರ್ಥಿಸುವೆನು.

ಜ್ಯೋ| ಎಂ. ಜಗತ್ಪಾಲಯ್ಯ, ಅಳಿಯೂರು.

ಪ್ರಕಾಶಕರ - ಪ್ರಸ್ತಾವನೆ

ಕರ್ನಾಟಕದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಯಕ್ಷಗಾನ ಸಾಹಿತ್ಯಕ್ಕೆ ಒಂದು ವಿಶಿಷ್ಟಸ್ಥಾನವೂ ಬಹಳ ದಿನಗಳಿಂದ ಇದೆ. ಪೌರಾಣಿಕ ಹಾಗೂ ಐತಿಹಾಸಿಕ ಸಾಹಿತ್ಯಿಕ ಆಧಾರದ ಮೇಲೆ ಯಕ್ಷಗಾನ ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾದವರು ಕನ್ನಡನಾಡಿನಲ್ಲಿ ಬಹಳ ಜನ ಆಗಿಹೋಗಿದ್ದಾರೆ.

ತನ್ನ ಉಪಾಧ್ಯಾಯ ವೃತ್ತಿಯ ಮಧ್ಯದಲ್ಲಿ ಬಿಡುವುಮಾಡಿಕೊಂಡು ಯಕ್ಷಗಾನ, ನಾಟಕ, ಕವಿತೆ ಇತ್ಯಾದಿಗಳನ್ನು ರಚಿಸಲು ಮನಸ್ಸುಮಾಡಿರುವ ಶ್ರೀ ವಾಸುದೇವ ನಾಯಕ್ ಕಡಿರುದ್ಯಾವರ ಇವರ ಶ್ರಮವು ಶ್ಲಾಘನೀಯವಿದೆ. ಹಿಂದೆ ಇವರು ರಚಿಸಿದ ಹೊಂಬುಜ ಕ್ಷೇತ್ರ ಮಹಾತ್ಮ್ಯೆ ನಾಟಕವನ್ನು ನಾನು ಮೆಚ್ಚಿ ಪ್ರಕಾಶಕನಾಗಲು ಒಪ್ಪಿಕೊಂಡು ಪ್ರೋತ್ಸಾಹಿಸಿದ್ದೆ.

ಅಖಿಲಕರ್ನಾಟಕದಲ್ಲಿ ಪ್ರಸಿದ್ಧಿಯಿರುವ ಚಾರಿತ್ರಿಕ ಶ್ರೀ ಹೊಂಬುಜ ಕ್ಷೇತ್ರದ ಮಹಾತ್ಮ್ಯೆಯನ್ನು ಶ್ರೀಯುತರು ಯಕ್ಷಗಾನ ಪ್ರಸಂಗ ರೂಪದಲ್ಲಿ ನಾಲ್ಕು ಅಂಕಗಳಿಂದ ರಚಿಸಿರುತ್ತಾರೆ. ಈ ಕೃತಿಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇನೆ. ಮಾತ್ರವಲ್ಲದೆ, ಒಂದುಕಡೆ ಇದರ ಪ್ರಯೋಗ ರೂಪಾರ್ಥವಾಗಿ ನಡೆದ ಬಯಲಾಟವನ್ನು ನೋಡಿದ್ದೇನೆ.

ಈ ಕೃತಿಗೆ ಸದರಿ ಕ್ಷೇತ್ರದ ಪೀಠಾಧಿಕಾರಿಗಳಾದ ಸ್ವಸ್ತಿ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕರ ಮುನ್ನುಡಿ ದೊರೆತಿರುವುದು ಸೂಕ್ತವೇ ಆಗಿದೆ. ಈ ಗ್ರಂಥಕ್ಕೆ ಜನರ ಮೆಚ್ಚುಗೆ ಸಿಗುವುದರಲ್ಲಿ ಸಂಶಯವಿಲ್ಲ.

ಸದರಿ ಲೇಖಕರಿಗೆ ಸಾಹಿತ್ಯಾಭಿಮಾನಿಗಳ ಹಾಗೂ ಧರ್ಮಾಭಿಮಾನಿಗಳ ಸಂಪೂರ್ಣ ಸಹಕಾರ ಸಿಗಲೆಂದು ನನ್ನ ಕೋರಿಕೆ. ಈ ಕೃತಿಯನ್ನು ಈ ಮೂಲಕ ಪ್ರಕಾಶ ಪಡಿಸಲು ಸಂತೋಷಪಡುತ್ತೇನೆ. ಇದನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಪದ್ಮಾಂಬಾ ಪ್ರಿಂಟರ್ಸ್, ಮೂಡುಬಿದಿರೆ, ಇವರಿಗೆ ನನ್ನ ಕೃತಜ್ಞತೆಗಳು.

ವರಂಗ ಶ್ರೀ ಜೈನಮಠ.
ತಾ. 19-6-1968.

M. D. Adhikari.

ಕವಿಯ ಹೃದಯ

ಕಲಾಭಿಮಾನಿಗಳಾದ ಮಹಾಜನರ ಮುಂದೆ ಕೃತಿಕರ್ತನ ವಿಜ್ಞಾಪನೆಗಳು.

ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಬೆಳ್ತಂಗಡಿ ತಾಲೂಕಿಗೆ ಸಂಬಂಧಪಟ್ಟ ಪಶ್ಚಿಮ ಘಟ್ಟಗಳಲ್ಲಿ ಪ್ರಮುಖವಾದ ಕುದುರೆಮುಖ ಶಿಖರದ ತಪ್ಪಲಲ್ಲಿ ಮಲೆನಾಡಿನ ಮೂಲೆಯಾಗಿದ್ದರೂ ಅದ್ಭುತ ಪವಾಡಮಯ ಇತಿಹಾಸ ಪ್ರಸಿದ್ಧ ರಾಜಧಾನಿಯಾಗಿ ಮೆರೆದ ವಂಗನಾಡು ಅಥವಾ ಬಂಗವಾಡಿ ಎಂಬ ಪ್ರಾಮುಖ್ಯ ಕ್ಷೇತ್ರವಿದೆ.

ಇಲ್ಲಿ ಪುರಾತನ ಕಾಲದಿಂದಲೂ ಭವ್ಯ ಪರಂಪರೆಯಿರುವ ಶ್ರವಣ ಗುಂಡ, ಜಿನಚೈತ್ಯಾಲಯಗಳು, ಕೋಟೆ-ಕೊತ್ತಳಗಳು, ಅರಮನೆ, ಪೇಟೆ, ಸನಿಹದಲ್ಲಿ ನರಸಿಂಹಗಡ ಮೊದಲಾದ ಪ್ರೇಕ್ಷಣೀಯ ಹಾಗೂ ರಮಣೀಯ ಸುಂದರ ಸ್ಥಳ ಆಲಯಗಳಿವೆ.

ಈ ಬಂಗವಾಡಿಯ ತೀರದಲ್ಲಿ ನೇತ್ರಾವತೀ ನದಿ ಹರಿಯುತ್ತಿದೆ. ನದಿ ದಾಟಿದರೆ ಕಡಿರುದ್ಯಾವರ ಗ್ರಾಮ. ಈ ಗ್ರಾಮದ ಹೇಡಿಯಾ ಎಂಬುದೇ ನನ್ನ ವಾಸಸ್ಥಳ. ಇಲ್ಲಿಯ ಜೈನಮತೀಯ ಪ್ರಮುಖ ಶ್ರೀಗಳಾದ ನಮಿರಾಜ ಪಡಿವಾಳರು, ಬಂಗಾಡಿ ಪಂಚಾಯತ್ ಅಧ್ಯಕ್ಷ ಯುವರಾಜರು, ಬಂಗಾಡಿ ಅರಮನೆ ರವಿರಾಜ ಬಲ್ಲಾಳರು, ಅಧ್ಯಾಪಕರಾಗಿ ಈ ಊರಲ್ಲಿ ಕೆಲ ಕಾಲ ಸೇವೆ ಸಲ್ಲಿಸಿದ ಸೂಡ ಶಿರ್ಲಾಲ್ ಗುಣಪಾಲ ಹೆಗ್ಡೆಯವರು ಉತ್ತೇಜಿಸಿ, ಸ್ಫೂರ್ತಿಯಿತ್ತು, ಈ ಯಕ್ಷಗಾನ ಪ್ರಸಂಗವನ್ನು ರಚಿಸುವರೆ ಸಲಹೆ ನೀಡಿ ಪ್ರೋತ್ಸಾಹಿಸಿದರು. ಕೃತಿಕಾರ್ಯಕ್ಕೆ ಕಾರಣರೆನಿಸಿದ ಆತ್ಮೀಯ ಸಹೃದಯರಿಗೆ ನನ್ನ ಕೃತಜ್ಞತೆಗಳು.

ಶ್ರೀ ಹೊಂಬುಜ ಸನ್ನಿಧಾನವನ್ನು ಸೇರಿ ಶ್ರೀ ಪಾರ್ಶ್ವನಾಥಸ್ವಾಮಿ-ಶ್ರೀ ಪದ್ಮಾವತೀ ಮಾತೆಯ ದರ್ಶನ, ಪ್ರಸಾದಗಳನ್ನು ಪಡೆದು, ಹೊಂಬುಜ ಪೀಠಾಧಿಪತಿಗಳಾದ ಶ್ರೀ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮಿಗಳವರ ದರ್ಶನ ಮಾಡಿ, ಈ ಕೃತಿಯನ್ನು ಓದಿ ಹೇಳಿದುದಕ್ಕೆ ಮೆಚ್ಚಿ, ಗುರುಗಳು

ಈ ಕೃತಿಗೆ ಮುನ್ನುಡಿಯನ್ನಿತ್ತು ಆಶೀರ್ವಾದಪೂರ್ವಕ ಹರಸಿದ್ದಾರೆ. ತಪೋಧನರ ಕೃಪೆಗೆ ಪಾತ್ರನಾದ ನನ್ನ ಜನ್ಮವೇ ಧನ್ಯವೆಂದೂ, ಅವರ ಆಶೀರ್ವಚನವೇ ಕೃತಿಗೆ ಮಹಾಕವಚವಾಗಲೆಂದೂ ಪ್ರಾರ್ಥಿಸಿಕೊಂಡು ಈ ಮೂಲಕ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತೇನೆ.

'ಗುರುದೇವ' ಮಾಸ ಪತ್ರಿಕೆಯ ಮಾಜಿ ಸಂಪಾದಕರೂ ಪಂಡಿತರೂ ಆದ ಶ್ರೀಮಾನ್ ಭುಜಬಲಿ ಶಾಸ್ತ್ರಿಗಳು ನಾನೇ ಬರೆದು ಪ್ರಕಟವಾದ "ಪದ್ಮಾವತೀ ಪುರಾಣ" ವ "ಜಿನದತ್ತರಾಯ ಚರಿತ ನಾಟಕಂ" ಈ ಕೃತಿಯ ಮುನ್ನುಡಿಕಾರರಾಗಿಯೂ ಆಗಿರುವ ಶ್ರೀ ಪಂ. ಕೆ. ಭುಜಬಲಿ ಶಾಸ್ತ್ರಿಗಳು ಸಂಗ್ರಹಿಸಿದ ಸಂಶೋಧನೆಗಳಿಂದ ತಿಳಿಸಿದಂತೆ ಸಾಕಾರ ಮಹಾರಾಜನು "ಉಗ್ರ"ವೆಂಬ ಕ್ಷತ್ರಿಯ ಕುಲಕ್ಕೆ ಸೇರಿದವನು. ಕ್ರಿ. ಶ. ಎಂಟು-ಒಂಬತ್ತನೆಯ ಶತಮಾನದಲ್ಲಿ ಸಾಕಾರ ಮಹಾರಾಜ– ಜಿನದತ್ತ ಮಹಾರಾಜರ ವೈಭವದ ಉಲ್ಲೇಖಗಳಿವೆ. ಉತ್ತರ ಮಧುರೆ ಎಂಬುದು ಆಗ್ರಾ ನಗರಕ್ಕೆ ಸಮೀಪವಿರುವ ಒಂದು ರಾಜಧಾನಿ. ಕ್ರಿ. ಶ. ಒಂದನೆಯ ಶತಮಾನದಲ್ಲಿ ಆ ಕೇಂದ್ರವು ಜೈನ ಮತೀಯರ ವೈಭವಪೂರ್ಣವಾದ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ.

ಶ್ರೀ ಶಾಸ್ತ್ರಿಗಳು ಸೂಕ್ತ ಸಲಹೆಗಳನ್ನು ಕೊಟ್ಟು, ಉಪಯುಕ್ತ ವಿಷಯಗಳನ್ನು ಸೂಚಿಸಿ ಸಹಕರಿಸಿದ್ದಾರೆ. ತಮ್ಮ ಪತ್ರಿಕೆಯಲ್ಲಿ ಪ್ರಸಂಗದ ಕೆಲವಂಶವನ್ನು ಪ್ರಕಟಪಡಿಸಿ, ಹಲವು ಮಹನೀಯರ ಗಮನಕ್ಕೆ ಈ ಕೃತಿಯನ್ನು ತರಲು ಉಪಕಾರ ಮಾಡಿದ್ದಾರೆ. ಅವರ ಉಪಕಾರ ಸ್ಮರಣೆ ಮಾಡುತ್ತಾ ಈ ಮೂಲಕ ವಂದನೆಗಳನ್ನರ್ಪಿಸುತ್ತೇನೆ. ಉಪಯುಕ್ತ ಸಲಹೆ ನೀಡಿದ ಮಿತ್ರವರ್ಯ ಶ್ರೀ ಕೆ. ಎನ್. ಭಟ್, ವಿದ್ವಾನ್, ಶಿರಾಡಿ ಪಾಲ್‌ರವರ ಉಪಕಾರಕ್ಕಾಗಿ ಕೃತಜ್ಞತೆಗಳು. ಆಶೀರ್ವಾದಾಭಿಪ್ರಾಯಗಳನ್ನಿತ್ತು ಮುನ್ನಡೆಸಿದ ಸ್ವಾಮೀಜಿಯವರಿಗೂ ನಾಡಿನ ಪ್ರಮುಖ ಹಿರಿಯರಿಗೂ ನನ್ನ ಪ್ರಣಾಮಗಳು.

ಈ ಕೃತಿಯ ಪ್ರಕಟಣೆಗೆ ಧನ ಸಹಾಯವಿತ್ತ ಧರ್ಮಾತ್ಮರೆಲ್ಲರನ್ನೂ ತುಂಬು ಹೃದಯದಿಂದ ವಂದಿಸಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಸಲಹೆ

ಗಳನ್ನು ಕೊಟ್ಟು ಸಹಕರಿಸಿದ 'ಗುರುದೇವ' ಪತ್ರಿಕೆಯ ಸಂಪಾದಕರಾದ ಶ್ರೀ ಪಂ. ಬಿ. ದೇವಕುಮಾರ ಜೈನ, ಇವರನ್ನು ಕೃತಜ್ಞತೆಯಿಂದ ಅಭಿನಂದಿಸುತ್ತೇನೆ.

ಈ ಕೃತಿಯನ್ನು ಆಮೂಲಾಗ್ರವಾಗಿ ಓದಿ ನೋಡಿ ಆತ್ಮೀಯತೆಯಿಂದ ಪ್ರಕಾಶನದ ಹೊಣೆ ಹೊತ್ತು ನನ್ನ ಭಾರವನ್ನು ಕಡಿಮೆ ಮಾಡಿ ಕರುಣೆ ತೋರಿದ ವರಂಗ ಜೈನಮಠದ ಮೆನೇಜರ್ ಶ್ರೀ ಎಂ. ಡಿ. ಅಧಿಕಾರಿಯವರಿಗೆ ನಾನು ಋಣಿಯಾಗಿರುವೆನು.

ಶ್ರೀ ಧರ್ಮಸ್ಥಳ ಕ್ಷೇತ್ರಾಧಿಕಾರಿಗಳಾದ ಶ್ರೀಮಾನ್ ಧರ್ಮಮೂರ್ತಿ ರತ್ನವರ್ಮ ಹೆಗ್ಗಡೆಯವರು ತಮ್ಮ ಆಡಳಿತೆಯ ಶ್ರೀ ಮಂಜುನಾಥೇಶ್ವರ ಯಕ್ಷಗಾನ ದಶಾವತಾರ ಮೇಳದವರಿಂದ ಈ ಪ್ರಸಂಗವನ್ನು ರಂಗಮಂಟಪದಲ್ಲಿ ಯಶಸ್ವಿ ಪ್ರಯೋಗಗೊಳಿಸಿ, ಶ್ರೀ ದೇವಿಯ ಪರವಾದ ನನ್ನ ಅಳಿಲ ಸೇವೆಗೆ ಪ್ರೋತ್ಸಾಹ ನೀಡಿ, ಕೃತಿಯನ್ನು ಬಹು ಜನರು ಮೆಚ್ಚಿ ಹರಸುವ ಸದವಕಾಶವನ್ನು ಒದಗಿಸಿ ಕೊಟ್ಟುದಲ್ಲದೆ ಇದನ್ನು ಅಚ್ಚು ಹಾಕಿಸುವರೆ ಅವರ ಚಿರಂಜೀವಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರು ಧನಸಹಾಯವನ್ನೂ ಕರುಣಿಸಿ ಕೃಪೆದೋರಿದ್ದಾರೆ. ಅವರ ಅನಂತ ಉಪಕಾರವನ್ನು ಸ್ಮರಿಸುತ್ತಾ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಯಕ್ಷಗಾನ ಕಲಾಪ್ರದರ್ಶನದ ರಂಗಮಂಟಪದ ಯಶಸ್ವೀ ಪ್ರಯೋಗದಲ್ಲಿ ಪರಿಪೂರ್ಣ ಶ್ರದ್ಧೆಯಿಟ್ಟು ಸಹಕರಿಸಿದ ಭಾಗವತ ಶ್ರೀ ಕಡತೋಕ ಮಂಜುನಾಥ ಭಾಗವತರು, ಶ್ರೀಗಳಾದ ಹರಿದಾಸ ಕೇಣಿ ಗೋಪಾಲಕೃಷ್ಣ ಭಟ್ಟರು, ಪುತ್ತೂರು ನಾರಾಯಣ ಹೆಗ್ಡೆಯವರು, ಪಾತಾಳ ವೆಂಕಟ್ರಮಣ ಭಟ್ಟರು, ವಿದೂಷಕ ಜೋಯಿಸರು, ಕಡಬ ಸಾಂತಪ್ಪನವರು ಮೊದಲಾದ ಮೇಳದ ಎಲ್ಲಾ ಕಲಾವಿದ ಸೇವಕರನ್ನು ಮನಸಾರೆ ವಂದಿಸುತ್ತೇನೆ. ಮೆನೇಜರ್ ನಾರಾಯಣ ಕಾಮತ್‌ರ ಉಪಕಾರಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು.

ಅಲ್ಲದೆ ಶ್ರೀ ರತ್ನವರ್ಮ ಹೆಗ್ಗಡೆಯವರ ಚಿರಂಜೀವಿಗಳಾದ ಶ್ರೀ ವೀರೇಂದ್ರಕುಮಾರರ ಉಪನಯನಸಂಸ್ಕಾರ ಕಾಲದಲ್ಲಿ ಈ ಪ್ರಸಂಗವನ್ನು ಬಹಿರಂಗ ಪ್ರದರ್ಶನವೇರ್ಪಡಿಸಿ, ಆಗಮಿಸಿದ ಮೈಸೂರು ರಾಜ್ಯದ ಪ್ರತಿಷ್ಠಿತ

ಮಹಾಜನರ ಹಾಗೂ ಗುರುವರೇಣ್ಯರ ಸಮ್ಮುಖದಲ್ಲಿ ದೇವಿಯ ಮಹಾತ್ಮೆಯ ಪವಾಡಗಳನ್ನು ಎಲ್ಲರೂ ಗ್ರಹಿಸುವಂತೆ ಸೇವೆ ಮಾಡಿಸಿದ ಶ್ರೀ ಖಾವಂದರ ಉಪಕಾರವನ್ನು ಎಂದೆಂದೂ ಮರೆಯಲಾರೆ. ಶ್ರೀ ಖಾವಂದರು ಕೆಲವು ದಿನಗಳಿಂದ ಅನಾರೋಗ್ಯದಲ್ಲಿದ್ದು, ತಾ. 12-10-1968ರಂದು ಸಲ್ಲೇಖನ ವ್ರತಪೂರ್ವಕ ಸಮಾಧಿಮರಣವನ್ನು ಪಡೆದರು. ಇದಕ್ಕಾಗಿ ಬಹಳವಾಗಿ ಸಂತಾಪಪಡುತ್ತೇನೆ. ಈ ಪ್ರಸಂಗವನ್ನು ಪ್ರಥಮವಾಗಿ ರೆಂಜಾಳದಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಎಡ್ವಕೇಟ್, ಇವರ ದಿಗ್ದರ್ಶನದಲ್ಲಿ ಪ್ರದರ್ಶಿಸಲಾಯಿತು. ಪ್ರಸಂಗದ ವೈವಿಧ್ಯಗಳ ಕಡೆಗೆ ಸೂಕ್ಷ್ಮ ಮತ್ತು ಸೂಕ್ತ ಸಲಹೆಗಳನ್ನಿತ್ತು ಆಶೀರ್ವದಿಸಿದ ಸನ್ಮಾನ್ಯ ಹೆಗ್ಡೆಯವರ ಉಪಕಾರಕ್ಕೆ ಈ ಮೂಲಕ ವಂದನೆಗಳನ್ನು ಅರ್ಪಿಸುತ್ತೇನೆ.

ಕಥಾನಕದಲ್ಲಿ ಯಕ್ಷಗಾನ ಬಯಲಾಟಕ್ಕೆ ಅನುಕೂಲವಾಗುವಂತೆ ಮೂಲಕಥೆಗೆ ದೋಷ ಬಾರದಂತೆ ಕೆಲವು ಸನ್ನಿವೇಶಗಳಲ್ಲಿ ರೌದ್ರ-ಬೀಭತ್ಸ-ಹಾಸ್ಯ ಇತ್ಯಾದಿ ರಸಪೋಷಣೆಗಳಿಗೆ ಅವಶ್ಯ ಉಳ್ಳ ಬದಲಾವಣೆಗಳನ್ನು ಯಕ್ಷಗಾನ ತಜ್ಞರ ಹಾಗೂ ಕಲಾತಪಸ್ವಿಗಳ ಸೂಚನೆಯಂತೆ ಮಾಡಬೇಕಾಯಿತು. ಹಾಗೆಯೇ ಮಾಡಲಾಗಿದೆ. ಹಿರಿಯರ ಹಾಗೂ ಜ್ಞಾನಿಗಳ ಸೂಚನೆ-ಸಲಹೆಗಳಿಗೆ ಸದಾ ಸ್ವಾಗತವಿದೆ. ಇದನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟ ಮೂಡುಬಿದಿರೆ ಶ್ರೀ ಪದ್ಮಾಂಬಾ ಪ್ರಿಂಟರ್ಸ್, ಇದರ ಮಾಲಿಕರಾದ ಶ್ರೀ ಎಂ. ಜಯವರ್ಮ ಇಂದ್ರರಿಗೆ ನನ್ನ ಹಾರ್ದಿಕ ವಂದನೆಗಳನ್ನು ಅರ್ಪಿಸುತ್ತೇನೆ.

ಇನ್ನೂ ಜ್ಞಾನಾರ್ಜನೆ, ವಿದ್ಯಾರ್ಜನೆಗಳಲ್ಲಿ ವಿದ್ಯಾರ್ಥಿಯಾದ ನನ್ನ ಈ ಕಲಾಸೇವೆಯನ್ನು ಕಲಾಪ್ರೇಮಿಗಳು ಮನಗಂಡು, ನ್ಯೂನಾತಿರಿಕ್ತ ದೋಷಗಳನ್ನು ತಿದ್ದಿ ಮುಂದರಿಯುವಂತೆ ಸಹಕಾರ ನೀಡಬೇಕಾಗಿ ಕೇಳಿಕೊಂಡು, ಕರ್ನಾಟಕದ ಬಂಧು-ಭಗಿನಿಯರ ಮುಂದೆ ಈ ಕೃತಿಯನ್ನು ಶ್ರೀ ಪಾರ್ಶ್ವನಾಥಸ್ವಾಮಿಯನ್ನು ಸ್ಮರಿಸಿ, ಶ್ರೀ ಪದ್ಮಾವತಿ ಮಾತೆಯ ಚರಣಕಮಲಗಳಲ್ಲಿ ಭಕ್ತಿಯಿಂದ ಅರ್ಪಿಸುತ್ತಿದ್ದೇನೆ.

ಕಡಿರುದ್ಯಾವರ,
ತಾ. 25–12–1965.

ಯು. ವಾಸುದೇವ ನಾಯಕ್.

ಪ್ರಕಾಶನಕ್ಕೆ ಧನ ಸಹಾಯವಿತ್ತ ಧಾರ್ಮಿಕ ಮಹಾನುಭಾವರ ಶುಭನಾಮಗಳು

ಶ್ರೀಯುತರುಗಳಾದ

ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆಯವರು (ವೀರೇಂದ್ರ ಹೆಗ್ಗಡೆಯವರಿಂದ)	೧೦೦-೦೦
ಅರಳ ಧರ್ಮಪಾಲ ಸೆಟ್ಟರು	೧೦೦-೦೦
ಎಂ. ಕೆ. ದೇವರಾಜರು	೫೦-೦೦
ಕಟ್ಟೆಮಾರು ರತನ್‌ಕುಮಾರರು	೪೫-೦೦
ಕೆ. ಬಿ. ಜಿನರಾಜ ಹೆಗ್ಡೆಯವರು	೩೦-೦೦
ಸಿಪ್ಪಳ್ಳಿ ಅನಂತಯ್ಯ ಅರಿಗರು	೩೦-೦೦
ಪಿ. ಎಸ್. ರಾಜ ಹೆಗ್ಡೆಯವರು, ಪಟೇಲ್, ಬೆಳ್ತಂಗಡಿ	೨೫-೦೦
ವೈನಾಡ್ ಜಿನಚಂದ್ರನ್‌ರವರು	೨೫-೦೦
ಕೆ. ಶ್ರೀನಿವಾಸ ಬಲ್ಲಾಳರು	೨೫-೦೦
ಡಿ. ಪುಟ್ಟಸ್ವಾಮಿ, ಎಡ್ವೋಕೇಟ್	೨೦-೦೦
ಎಂ. ಸುನಂದ ಪಡಿವಾಳರು	೧೫-೦೦
ನಡಗುತ್ತು ಚಂದಯ್ಯ ಅಜ್ರಿಯವರು	೧೦-೦೦
ಬಂಗಾಡಿ ಯುವರಾಜ ಅಜ್ರಿಯವರು	೧೦-೦೦
ಬಂಗಾಡಿ ಅರಮನೆ ರವಿರಾಜ ಬಲ್ಲಾಳರು	೧೦-೦೦
ಬೈರನ್‌ಕೋಟೆ ನೇಮಣ್ಣ ಸೆಟ್ಟರು	೧೦-೦೦
ಜೈನ ಸಂಘ, ಎಳಸೀರು	೧೫-೦೦
ಮಚ್ಚಳೆ ರಾಮಕೃಷ್ಣಯ್ಯ	೧೦-೦೦
ಕೆದಿಹಿತ್ಲು ಕೃಷ್ಣ ಭಟ್ರು	೧೦-೦೦
ಗುಣಪಾಲ ಮಾಸ್ಟ್ರ, ಸೂಡ-ಶಿರ್ಲಾಲು	೧೦-೦೦
ಮಾರ್ನಾಡುಗುತ್ತು ಜಿನ್ನಪ್ಪ ಪೂಂಜರು	೫-೦೦
ಇಜತೊಟ್ಟು ಜಿನರಾಜ ಹೆಗ್ಡೆಯವರು	೫-೦೦
ಸುರಕೆ ಎಲ್ಯಣ್ಣ ಯಾನೆ ಪದ್ಮಯ ನ್ಯಾಕರು	೫-೦೦

ವೇಣೂರು ಧರಣಪ್ಪ ಅಧಿಕಾರಿಯವರು	೫-೦೦
ಕಳಿಯ ಪಟೇಲ್‌ರವರು	೫-೦೦
ದೇವಣ ಜೆ. ಗೋಪಾಲ ಭಟ್ಟರು	೫-೦೦
ಪಡ್ಲಾಡಿ ಆದಿರಾಜ ಕಡಂಬರು	೫-೦೦

ಇನ್ನೂ ಸಹಕಾರವಿತ್ತ ಮಹನೀಯರ ಹೆಸರುಗಳನ್ನು ಮುಂದೆ ಕ್ರಮವಾಗಿ ಪ್ರಕಟಿಸಲಾಗುವುದು. ಸ್ಥಳಾಭಾವದಿಂದ ಹೀಗಾದುದನ್ನು ವಾಚಕರೂ, ಧರ್ಮಾಭಿಮಾನಿಗಳೂ ಮನ್ನಿಸಬೇಕಾಗಿ ವಿನಂತಿ.

ಕಥಾಸಾರ—

ಉತ್ತರ ಭಾರತದಲ್ಲಿ ಮೆರೆಯುತ್ತಿದ್ದ ಉತ್ತರ ಮಥುರಾ ಪಟ್ಟಣದ ಅರಸನಾದ ಸಾಕಾರ ಮಹಾರಾಜನು ಶ್ರೀ ಪದ್ಮಾವತೀ ದೇವಿಯ ಪೂರ್ಣ ಭಕ್ತ. ಆತನು ಪತ್ನಿ ಶ್ರೀಯಲಾದೇವಿಯೊಡನೆ ವ್ರತಿಶ್ರೇಷ್ಠ ಸಿದ್ಧಾಂತ ಕೀರ್ತಿ ಮುನಿಗಳ ಆದೇಶದಂತೆ ವ್ರತ, ನಿಯಮ, ನೋಂಪಿಗಳನ್ನು ನೋಂತು ಮುದ್ದಿನ ಮೂರು ಹೆಣ್ಣು ಮಕ್ಕಳನ್ನೂ ಜಿನದತ್ತನೆಂಬ ಸುಕುಮಾರನನ್ನೂ ಪಡೆದು ಸಂತೋಷದಿಂದಿದ್ದು, ದಿಗ್ವಿಜಯದಲ್ಲಿ ಹೂಣ ರಾಜನ ಗರ್ವವನ್ನು ಭಂಗಿಸಿ, ಪುರಾಭಿಮುಖನಾಗಿ ಬರುತ್ತಾ ಕಾಡಿನಲ್ಲಿ ಕಂಡ ಕೌತುಕದಿಂದ ಮೋಹಪಟ್ಟು ಬೇಡರ ಕನ್ಯೆ ಪದ್ಮಿನಿಯನ್ನು ವರಿಸಿ, ಆಕೆಯ ಮಗನಿಗೆ ರಾಜ್ಯ ಕೊಡುವುದಾಗಿ ವಚನವಿತ್ತು, ಅರಮನೆಯನ್ನು ಸೇರಿ ಕೇಳೀವಿಲಾಸ ದಲ್ಲಿ ಮಗ್ನನಾಗುತ್ತಾನೆ.

ಕೆಲವು ದಿನ ಕ್ರಮಿಸುವಾಗ ಪದ್ಮಿನಿಗೆ ಮಾರಿದತ್ತನೆಂಬ ಕುಮಾರನು ಜನಿಸುವನು. ಯುವರಾಜನಾದ ಜಿನದತ್ತನಿಗೆ ರಾಜ್ಯದ ಅಧಿಕಾರವನ್ನು ರಾಜನು ಜಾಹೀರುಪಡಿಸಲು ಪದ್ಮಿನಿಯು ತನ್ನ ಮಗನಾದ ಮಾರಿದತ್ತನೇ ಅರಸನಾಗಬೇಕೆಂದೂ, ಜಿನದತ್ತನನ್ನು ಕೊಲೆಗೈದು ಕೊಟ್ಟ ಭಾಷೆಯನ್ನು ತೀರಿಸಬೇಕೆಂದೂ ಛಲಬದ್ಧಳಾಗಲು, ನರಮಾಂಸದ ರುಚಿಯಿಂದ ಭ್ರಾಂತ ನಾದ ರಾಜನು ಅವಿವೇಕಿಯಾಗಿ ಮೋಹಾಂಧತೆಯಿಂದ ಸಂಕೇತರೂಪವಾಗಿ ನಿಂಬೂಫಲವನ್ನು ಕೊಟ್ಟು ಮಗನಾದ ಜಿನದತ್ತನನ್ನು ವಧಿಸಲಿಕ್ಕಾಗಿ ಪಾಕಶಾಲೆಗೆ ಕಳುಹಿ ಕೊಡುವನು. ಅದೃಷ್ಟವಶಾತ್ ಮಧ್ಯದಾರಿಯಲ್ಲಿ ಬೇಟೆಯಾಡಿ ಮರಳುತ್ತಿದ್ದ ಮಾರಿದತ್ತನು ಜಿನದತ್ತನನ್ನು ಸಂಧಿಸಿ, ಆತ ನಿಂದ ನಿಂಬೂಫಲವನ್ನು ತಾನು ಪಡೆದು ಪಾಕಶಾಲೆಯಲ್ಲಿ ವಿಧಿಸಿದ ಸಂಕೇ ತಾನುಸಾರವಾಗಿ ಅಕಾಲ ಮರಣಕ್ಕೆ ತುತ್ತಾಗುತ್ತಾನೆ.

ಗಂಡಾಂತರ ಒದಗಿದ ಪರಿಸ್ಥಿತಿಯರಿತು ಗುರುಗಳಾದ ಸಿದ್ಧಾಂತ ಕೀರ್ತಿ ಮುನಿಗಳ ಆಣತಿಯಂತೆ ಶ್ರೀಯಲಾದೇವಿಯು ಶ್ರೀ ಪದ್ಮಾವತೀ ದೇವಿಯ ಮೂಲಬಿಂಬವನ್ನು ರಕ್ಷಣೆಗಿತ್ತು ಜಿನದತ್ತನನ್ನು ಹರಸಿ ದೇಶಾಂ ತರಕ್ಕೆ ಗುಪ್ತವಾಗಿ ಕಳುಹಿಸುತ್ತಾಳೆ.

ಮಾರಿದತ್ತನ ಅಕಾಲ ಮರಣವನ್ನರಿತ ಪದ್ಮಿನಿಯು ಅರಸನನ್ನು ಹಂಗಿಸಿ, ಟೀಕಿಸಿ ಕೆರಳಿಸಲು ಭೂಪಾಲ ಸಾಕಾರ ರಾಜನು ಜಿನದತ್ತನನ್ನು ಬಂಧಿಸಿ ತರುವಂತೆ ಸೇನೆಗೆ ಆಜ್ಞಾಪಿಸುತ್ತಾನೆ. ಸೇನೆಯು ಜಿನದತ್ತನನ್ನು ನಾಲ್ಕೂ ದಿಕ್ಕುಗಳಲ್ಲಿ ಅರಸಲು ಅಕಸ್ಮಾತ್ ಸಿಕ್ಕಿಬೀಳುತ್ತಾನೆ. ಆದರೆ ಶ್ರೀ ಪದ್ಮಾವತೀ ದೇವಿಯ ಪ್ರಭಾವದಿಂದ ಸೇನಾವಾಹಿನಿಯನ್ನು ಸೋಲಿಸಿ ಬೆರಗುಗೊಳಿಸಿದ ಜಿನದತ್ತನ ಪುಣ್ಯಸಂಪನ್ನತೆಗೆ ಸೇನಾಧಿಕಾರಿಯು ಶರಣಾಗತನಾಗಿ ಆತನನ್ನೇ ಹೊಂದಿಕೊಳ್ಳುತ್ತಾನೆ.

ಪ್ರಶಾಂತವಾದ ವಾತಾವರಣದ ಕಾಡಿನಲ್ಲಿ "ನೆಕ್ಕಿ"ಯ ಗಿಡದಲ್ಲಿ ಜಿನದತ್ತನಿಂದ ಇಡಲ್ಪಟ್ಟ ದೇವಿಯ ಬಿಂಬವು ಸ್ಥಿರವಾಗುತ್ತದೆ. ಜಿನದತ್ತನು ಮರುಗುತ್ತಿರಲು ದೇವಿಯು ಕನಸಿನಲ್ಲಿ ಜಿನದತ್ತನಿಗೆ ಅಭಯವಿತ್ತು, 'ಈ ಕಾಡು ನಾಡಾಗಲಿ; ರಾಜಧಾನಿಯಾಗಲಿ; ಕಬ್ಬಿಣ ತಂದು ವಿಗ್ರಹಕ್ಕೆ ಸೋಂಕಿಸಿದರೆ ಚಿನ್ನವನ್ನಾಗಿ ಮಾರ್ಪಡಿಸುತ್ತೇನೆ, ಹೆದರಬೇಡ' ಎಂದು ಅನುಗ್ರಹಿಸಲು, ನೆರೆಯ ಅಸಂಖ್ಯಾತ ಬೇಡರ ಸಹಕಾರದಿಂದ ಜಿನದತ್ತನು ದೇವಿಯು ಅನುಗ್ರಹಿಸಿದ ಅಪಾರ ಚಿನ್ನದ ಬಲದಿಂದ ಕಾಡನ್ನೆಲ್ಲಾ ಕಡಿದು 'ಹೊಂಬುಜ'ವೆಂಬ ಮಹಾನಗರವನ್ನೇ ನಿರ್ಮಿಸಿ, ಶ್ರೀ ದೇವಿ ಮಂದಿರ, ಜಿನಾಲಯಗಳೇ ಮೊದಲಾದುವುಗಳನ್ನು ನಿರ್ಮಿಸಿ, ದೇವಿಯ ಚರಣದಾಸನಾಗಿ ವಿರಾಜಮಾನನಾಗುತ್ತಾನೆ. ಗುರುಗಳನ್ನೂ ಮಾತೆಯನ್ನೂ ಹಿರಿಯರನ್ನೂ ಮಧುರಾ ಪಟ್ಟಣದಿಂದ ಹೊಂಬುಜಕ್ಕೆ ಕರೆಸಿಕೊಳ್ಳುತ್ತಾನೆ.

ಶ್ರೀಯಲಾದೇವಿಯು ಭಾರತದ ದಕ್ಷಿಣದ ಪ್ರಧಾನ ರಾಜ್ಯವಾದ ಮಧುರೆಯರಸ ವೀರಪಾಂಡ್ಯ, ಚಂದ್ರಪಾಂಡ್ಯರ ಖಾಸಾ ಸಹೋದರಿಯಾಗಿದ್ದುದರಿಂದ, ಅವರ ಮಗಳಂದಿರಾದ ಮನೋರಾಥಿನಿ-ಪದ್ಮಿನಿಯರನ್ನು ತನ್ನ ಮಗನಾದ ಜಿನದತ್ತನು ವಿವಾಹವಾಗುವಂತೆ ಕೇಳಿಕೊಳ್ಳಲು ಉತ್ತೇಜನ ನೀಡುವಳು. ಜಿನದತ್ತ ಮಹಾರಾಜನು ಆಪ್ತನಾದ ಅನುಕೂಲ ನಾಯಕನನ್ನು ಉಚಿತ ಉಡುಗೊರೆಗಳ ಸಮೇತ ಪತ್ರವನ್ನು ಕೊಟ್ಟು ಮಾವನ ರಾಜಧಾನಿಗೆ ಕಳುಹಿಸಿ ಕೊಡುತ್ತಾನೆ.

ವೀರಪಾಂಡ್ಯ ಮಹಾರಾಜನು ಜಿನೇಶ್ವರ ಸ್ವಾಮಿಯನ್ನು ಅನನ್ಯ ಭಕ್ತಿಯಿಂದ ಪೂಜಿಸುವ ಪರಿಪಾಠವಿಟ್ಟುಕೊಂಡುದರಿಂದ ಪ್ರೀತರಾದ

ಸ್ವಾಮಿಯ ಯಕ್ಷಿಯರು ಸುರಲೋಕದಿಂದ ಸುಮಗಳನ್ನು ತಂದು ನಿತ್ಯವೂ ಅರ್ಚನೆಗೆ ಅರ್ಪಿಸುತ್ತಿದ್ದರು. ರಾಜನ ದರ್ಶನಾಕಾಂಕ್ಷಿಯಾದ ಅನುಕೂಲ ನಾಯಕನು ಪಟ್ಟಣದಲ್ಲಿ ಕೆಲ ದಿನವಿದ್ದು, ಅರಸನ ಭೇಟಿಯಾಗದೆ ಬೇಸರ ದಿಂದ ಮರುಗಿ ಮಾತೆ ಶ್ರೀ ಪದ್ಮಾವತೀ ದೇವಿಯನ್ನು ಪ್ರಾರ್ಥಿಸಲು, ದೇವಿಯು ಮಾಯೆಯಿಂದ ಸುಮಗಳು ಬಾರದಂತೆ ತಡೆ ಹಾಕಲು (ಪರಿವಾರ ದೇವತೆಗಳು ಸುರಲೋಕದಿಂದ ಬರುವ ಪುಷ್ಪಗಳಿಗೆ-ಯಕ್ಷಿಯರಿಗೆ ಯುದ್ಧ ವಾಗುವುದು) ರಾಜನಿಗೆ ಪೂಜೆಗೆ ಆತಂಕ ಬಂದೊದಗುವುದು.

ರಾಜನು ಅನಿರೀಕ್ಷಿತವಾಗಿ ಒದಗಿ ಬಂದ ಈ ಸಮಸ್ಯೆಯಿಂದ ವಿಸ್ಮಿತ ನಾಗಿ ಕಾರಣವರಿಯಲು ಓಲಗ ಕೊಡುವನು. ಆಗಂತುಕರ ಪರಿಶೀಲನೆ ಬಗ್ಗೆ ನಗರದ ಪರಿಚಯುದವರಿಂದ ತನಿಖೆ ನಡೆಸುವಾಗ ಹೊಂಬುಜ ಕ್ಷೇತ್ರ ದಿಂದ ಬಂದ ಅನುಕೂಲ ನಾಯಕನ ಬರವರಿತು ಸಭೆಗೆ ಬರಮಾಡಿಸಿ, ವಿಚಾರಣೆ ನಡೆಸುವನು. ಅನುಕೂಲ ನಾಯಕನು ಓಲೆ ಉಡುಗೊರೆಗಳ ನ್ನೊಪ್ಪಿಸಿ, ಜಿನದತ್ತ ಮಹಾರಾಜನ ಮದುವೆಯ ಪ್ರಸ್ತಾಪವೆತ್ತಲು ರಾಜನು ಸಂತೋಷಗೊಂಡರೂ ಮಹಾರಾಣಿ ಚಿತ್ರಿನಿಯು ಜಿನದತ್ತನನ್ನು ಹೀನೈಸಿ, ಹೆಣ್ಣು ಕೊಡದಂತೆ ಆತಂಕಿಸುವಳು.

ಅನುಕೂಲ ನಾಯಕನು ಹೊಂಬುಜಕ್ಕೆ ಬಂದು ವಾರ್ತೆಯರುಹಲು, ಅವಮಾನಪಟ್ಟ ಜಿನದತ್ತನು ದೇವಿಯು ಕರುಣಾಕವಚದ ಧೈರ್ಯದಿಂದ ಮಧುರೆಗೆ ದಂಡೆತ್ತಿ ಹೋಗುವನು. ಯುದ್ಧವು ಘನಘೋರವಾಗಲು, ಅಶರೀರವಾಣಿಯು 'ಕ್ರಾಂತಿಯು ಧರ್ಮದ ನಾಶವೆಂದೂ, ಶಾಂತಿ-ಸಂತೋಷಗಳೇ ಜೀವನದ ಬೆಳಕೆಂದೂ ಸಾರಿದುದನ್ನು ಕೇಳಿ, ವೀರ ಪಾಂಡ್ಯನು ಷೋಡಶ ಕನ್ಯಾಮಣಿಗಳ ಮಧ್ಯದಲ್ಲಿರುವ ಮಗಳು ಪದ್ಮಿನಿ ಯನ್ನು ಪರೀಕ್ಷಿಸಿ ಬಂದಿಶಾಸ್ತ್ರ ಮುಗಿಸುವಂತೆ ಅನುಕೂಲ ನಾಯಕನೊಡನೆ ಸಂಧಿಯ ಶರ್ತವನ್ನೊಡ್ಡಿ ಶಕ್ತಿಪರೀಕ್ಷೆ ಮಾಡುವನು.

ಈ ಪರೀಕ್ಷಾ ಪ್ರಯೋಗದಲ್ಲಿ ಮಹಾತಾಯಿ ಪದ್ಮಾವತೀ ದೇವಿಯ ಕೃಪೆಯಿಂದ ಅನುಕೂಲ ನಾಯಕನು ಸರಸ್ವತೀ ಮಾತೆಯ ಅನುಗ್ರಹವನ್ನು ಸಂಪಾದಿಸಿ, ಬಂದಿಶಾಸ್ತ್ರ ಮುಗಿಸಿ ಉತ್ತೀರ್ಣನಾಗುತ್ತಾನೆ.

ವೀರಪಾಂಡ್ಯನು ಜಿನದತ್ತನಿಗೆ ಕನ್ಯೆಯರನ್ನು ಕೊಟ್ಟು ವೈಭವದಿಂದ ಪರಿಣಯುವನ್ನು ನಡೆಸುತ್ತಾನೆ. ಆ ಮೇಲೆ ಪತ್ನೀ ಸಮೇತನಾದ ಜಿನದತ್ತನು ಹೊಂಬುಜ ಪುರದಲ್ಲಿ ವೈಭವಭರಿತನಾಗಿ ಮಾತೆಯೊಂದಿಗೆ ಗುರುಗಳ ದಿಗ್ದರ್ಶನದಿಂದ ಸುಖವಾಗಿ ದಿನ ಕಳೆಯುತ್ತಾನೆ.

ಪಾಪದ ಲೇಪದಿಂದ ಭಯಂಕರ ರೋಗಗ್ರಸ್ತಳಾಗಿ ಸಾಕಾರ ರಾಜನ ಪ್ರೇಯಸಿ-ಪದ್ಮಿನಿ ಮಡಿಯುತ್ತಾಳೆ. ಸಾಕಾರ ಮಹಾರಾಜನು ವಿಪರೀತ ರೋಗಗಳಿಂದ ನರಳಿ ಸಾಯುತ್ತಾನೆ. ಪ್ರಜೆಗಳು ಈ ವಾರ್ತೆಯನ್ನು ಜಿನದತ್ತನಿಗೆ ವರದಿ ಮಾಡಲು ಶ್ರೀಯಲಾದೇವಿಯು ಜಿನದೀಕ್ಷೆ ಕೈಗೊಳ್ಳು ತ್ತಾಳೆ. ಜಿನದತ್ತನಿಗೆ ವ್ಯಸನವಾವರಿಸುತ್ತದೆ. ಎರಡು ರಾಜ್ಯಗಳ ಮಹಾ ರಾಜನಾದರೂ ಬೇಸರವು ಆತನನ್ನು ಘಾಸಿಮಾಡುತ್ತದೆ.

ಬೇಸರ ಕಳೆಯಲು ಜಿನದತ್ತನು ಮೃಗಬೇಟೆಗೆ ಹೊರಡುತ್ತಾನೆ. ಸಂಸಾರಿಯಾಗಿ ವೈಭವಪೂರಿತನಾದ ಮಹಾರಾಜ ಜಿನದತ್ತನ ಮನಸ್ಸನ್ನರಿ ಯಲು ದೇವಿ ಪದ್ಮಾವತಿ ಕೆರೆಯಲ್ಲಿ ಎರಡು ಮುತ್ತುಗಳನ್ನು ನಿರ್ಮಿಸು ತ್ತಾಳೆ. ಒಂದು ಮುತ್ತು ಮಾಸಿಕೊಂಡೂ ಮತ್ತೊಂದು ಜ್ವಲಿಸಿಕೊಂಡೂ ಕಾಣಿಸುತ್ತವೆ.

ಕಾಲದ ಲೀಲೆಯ ಮಹಿಮೆಯಿಂದಾಗಿ ರಾಜನೇ ಮೋಹದ ಮಾಯಾ ವರಣಕ್ಕೆ ಸಿಲುಕಿ ಉತ್ತಮ ಮುತ್ತಿನಿಂದ ಮಡದಿಗೆ ಮೂಗುತಿ ಮಾಡಿಸಿ, ಕಂದಿದ ಮುತ್ತಿನ ಮೂಗುತಿಯನ್ನು ದೇವಿಗೆ ಒಪ್ಪಿಸುತ್ತಾನೆ. ಈ ಘಟನೆ ಯಿಂದ ಚಿಂತಿಸಿದ ದೇವಿ ಪದ್ಮಾವತಿಯು ಮಾಯೆಯಿಂದ ಉತ್ತಮ ಮುತ್ತಿನ ಮೂಗುತಿಯನ್ನು ಹೊಂದುತ್ತಾಳೆ.

ಇದು ತಿಳುವಳಿಕೆಗೆ ಬಂದ ಜಿನದತ್ತನು ತನ್ನ ಅಜ್ಞಾನಕ್ಕಾಗಿ ಮಗುವಿ ನಂತೆ ಅಳುತ್ತಾ ಅಪರಾಧವನ್ನು ಕ್ಷಮಿಸಿ ಕಾಪಾಡಬೇಕೆಂದು ಮಹಾ ತಾಯಿಯ ಮುಂದೆ ಮೊರೆಯಿಡುತ್ತಾನೆ. ಪರಿಪರಿಯಾಗಿ ಪ್ರಾರ್ಥಿಸಿ ಹೊರಳಿ ಬೇಡುತ್ತಾನೆ. ಕಾಲಮಾನದಲ್ಲಿ ವ್ಯತ್ಯಾಸ ಹೊಂದುತ್ತಿರುವ ಲೀಲಾಸ್ವರೂಪವನ್ನು ಅರಿತ ಶ್ರೀ ದೇವಿ ಪದ್ಮಾವತಿಯು ಜಿನದತ್ತನನ್ನು ಎಚ್ಚರಿಸಿ, ಸಾಂತ್ವನಗೊಳಿಸಿ ಪರುಷದ ಮಹಾಶಕ್ತಿಯನ್ನು ರಸಬಾವಿಗಿಳಿಸು

ತ್ತಾಳೆ. ದಾರುಣವಾದ ಶೋಕವು ರಾಜಮನೆತನದಲ್ಲಿ ಹಬ್ಬಿರಲು, ಭಕ್ತರನ್ನು ಅನವರತವೂ ಕಾಪಾಡುವುದಾಗಿಯೂ, 'ಎಷ್ಟು ಕಾಲದ ವರೆಗೆ ಲಕ್ಕಿಯು ಮರವು ಅಮರವಾಗಿರುತ್ತದೆಯೋ, ಎಷ್ಟರ ವರೆಗೆ ಮುತ್ತಿನ ಕೆರೆಯು ಜಲಮಯವಾಗಿರುತ್ತದೆಯೋ, ಎಷ್ಟರ ವರೆಗೆ ಭಕ್ತರಿಗೆ ಗಂಧೋದಕವು ಹೊರಕುತ್ತದೆಯೋ ಅಷ್ಟರ ವರೆಗೆ ಈ ಕ್ಷೇತ್ರವು ಉಜ್ಜ್ವಲವಾಗಿರುವುದರಲ್ಲಿ ಸಂದೇಹ ಪಡಬೇಡ' ಎಂಬುದಾಗಿಯೂ ಅಭಯವಿತ್ತು ಅದೃಶ್ಯವಾಗಲು, ಸಮಸ್ತರೂ ಮಹಾಮಾತೆಯನ್ನು ಪೂಜಿಸಿ, ಮಂಗಳಾರತಿ ಎತ್ತಿ, ಮಂಗಳ ಹಾಡಿ, ಅನಂತಕಾಲದ ವರೆಗೂ ಕೈ ಬಿಡದೆ ಕಾಪಾಡಿ ಮುನ್ನಡೆಸೆಂದು ಬೇಡಿಕೊಳ್ಳುತ್ತಾರೆ.

— ಕಥಾಭಾಗ ಸಂಪೂರ್ಣಂ —

ಪಾತ್ರ ಪರಿಚಯಃ

ಸಾಕಾರ ಮಹಾರಾಜ	—	ಮಧುರಾ ರಾಜ್ಯದ ದೊರೆ.
ಶ್ರೀಯಲಾದೇವಿ	—	ಸಾಕಾರ ರಾಜನ ಪಟ್ಟದರಸಿ.
ಶ್ರೀ ಸಿದ್ಧಾಂತಕೀರ್ತಿ ಮುನಿ	—	ಗುರುಗಳು.
ಬುದ್ಧಿಮತಿ	—	ಸಾಕಾರ ರಾಜನ ಮಂತ್ರಿ.
ಚಿತ್ರತೇಜ	—	ಸೇನಾಧಿಕಾರಿ.
ವಿಷಧ್ವಜ	—	ಹೂಣರ ರಾಜ.
ಸಿಂಹಧ್ವಜ	—	ಹೂಣರ ನಾಯಕ.
ಚಾಕರ	—	ಸಾಕಾರ ರಾಜನ ದೂತ.
ಕಿರಾತಪತಿ	—	ಬೇಡರೊಡೆಯ.
ಜಿನದತ್ತ	—	ಯುವರಾಜ.
ಪದ್ಮಿನಿ	—	ಸಾಕಾರ ರಾಜನ ಉಪಪತ್ನಿ.
ಬಾಣಸಿಗ	—	ಪಾಕಾಚಾರ್ಯ.
ಮಾರಿದತ್ತ	—	ಪದ್ಮಿನಿಯ ಮಗ.
ಅನುಕೂಲ ನಾಯಕ	—	ಜಿನದತ್ತನ ರಾಯಭಾರಿ.
ವೀರಪಾಂಡ್ಯ	—	ಮಧುರೆಯ ದೊರೆ.
ಚಂದ್ರಪಾಂಡ್ಯ	—	ದೊರೆಯ ಸಹೋದರ.
ಯಕ್ಷಿಣಿಯರು	—	ಜಿನೇಶ್ವರನ ಕಿಂಕರರು.
ಪರಿವಾರ ದೇವತೆ	—	ಪದ್ಮಾವತೀ ದೇವಿಯ ಕಿಂಕರರು.
ಚಿತ್ರಿನಿ	—	ವೀರಪಾಂಡ್ಯನ ಪತ್ನಿ.
ಅಗ್ನಿದತ್ತ	—	ವೀರಪಾಂಡ್ಯನ ಸೇನಾನಿ.
ಪದ್ಮಿನಿ-ಮನೋರಾಧಿನಿಯರು	—	ಜಿನದತ್ತನ ಮಡದಿಯರು.
ಶ್ರೀ ಪದ್ಮಾವತೀ ದೇವಿ	—	ಕ್ಷೇತ್ರ ದೇವಿ.

ಚಾರಕರು, ಸಖಿಯರು, ಸೈನಿಕರು, ಪುರಜನರು, ಬೇಡರು, ಶಿಲ್ಪಿ, ಇತ್ಯಾದಿ....

ಸ್ವಸ್ತಿಶ್ರೀಜಿನರಾಜಮಾರ್ಗಕಮಲೇ । ಪ್ರದ್ಯೋತ ಸೂರ್ಯಪ್ರಭೇ ।
ಸ್ವಸ್ತಿಶ್ರೀ ಫಣಿನಾಯಕೀ । ನರಸುರಾರಾಧ್ಯೇ ಜಗನ್ಮಂಗಲೇ ॥
ಸ್ವಸ್ತಿಶ್ರೀ ಕನಕಾದ್ರಿ ಸನ್ನಿಭ ಮಹಾ ಸಿಂಹಾಸನಾಲಂಕೃತೇ ।
ವಿದ್ಯಾನಾಮಧಿದೇವತೇ ಪ್ರತಿದಿನಂ ಮಾಂ ರಕ್ಷ ಪದ್ಮಾವತೀ ॥೧॥

(ಮೂಲಕೃತಿ)

ಭಾಮಿನಿ

ಧರಣಿಯೊಳು ಧರ್ಮಾಭಿಮಾನವ । ಶಿರದಿ ಧರಿಸುತ ಕರ್ಮವೆಸಗುವ । ಸುರನರೋರಗ ಸಿದ್ಧ ಸಾಧ್ಯರ ಹಿರಿಯರನು ನೆನೆವೇ ॥ ಕರ ಮುಗಿವೆ ಜಿನನಾಥ ಮೊದಲಾ । ಗಿರುವ ಮನು ಮುನಿ ಗುರು ಗಣೇಶರ ಚರಣಕೆರಗುತಲೊರೆಯುವೆನು ಮುಂದಣ ಕಥಾಂತರವಾ ॥೧॥

॥ ಶ್ರೀ ಪಾರ್ಶ್ವನಾಥಾಯ ನಮಃ ॥
॥ ಶ್ರೀ ಪದ್ಮಾವತೀದೇವ್ಯೈ ನಮಃ ॥

ಶ್ರೀ ಪದ್ಮಾವತಿದೇವೀ ಮಹಾತ್ಮ್ಯೆ

ಅಥವಾ

ಜಿನದತ್ತರಾಯ ಚರಿತೆ

೧ನೆಯ ಅಂಕ

(ಸಾಕಾರ ಮಹಾರಾಜನ ಓಲಗ—
ಮಂತ್ರಿ ಮತ್ತು ಮಹಾರಾಣಿ ಶ್ರೀಯಲಾದೇವಿ- ಇರುವರು)

ವಾರ್ಧಿಕ್ಯ

ಧಾರುಣಿಯೊಳತಿ ಮುದವ ಬೀರಿ ಮೆರೆಯುತಲಿರುವ ।
ಭೂರಿ ಕೀರ್ತಿಯು ಶಿಖರ ಉತ್ತರಾ ಮಥುರೆಯೊಳು ।
ಧಾರುಣಿಪ ಸಾಕಾರ ನೃಪನಿರ್ದನತಿ ಶೂರ ಶರಧಿ ಸಮ ಗಂಭೀರನೂ ॥
ಸೇರಿ ಸೌಭಾಗ್ಯವತಿ ಶ್ರೀಯಲಾದೇವಿಯೊಡ- ।
ನೇರಿ ಕೇಸರಿ ಪೀಠದಲಿ ವಿರಾಜಿಸಲಂದು ।
ಭೂರಿ ಭಕ್ತಿಯೊಳಖಿಲ ಸಾಮಂತ ನೃಪವರರ ಕಪ್ಪ ಕೈಗೊಳಲಿಕೆನುತಾ ॥೧॥

ರಾಗ—ಭೈರವಿ—ಝಂಪೆತಾಳ

ಸಚಿವ ಶೇಖರ ಕೇಳು । ವಚಿಸುವೆನು ನಿನ್ನೊಡನೆ । ಖಚಿತ ಪೌರುಷ ವಿಂದು । ಪ್ರಚುರ ಪಡಿಸಿದೆನೂ ॥೧॥ ಶೀಲ ಮುನಿಗಳ ದಯದಿ । ಭೂಲಲಾಮರ ದರ್ಪ । ಕೋಳುಗೊಂಡೆವು ವಿಭವ । ಮೂಲೋಕದೊಳಗೇ ॥೨॥ ಜಿನನಾಥನನು ಭಜಿಸಿ । ಗುಣಿಗಳಾಗಿಹರೆ ಜನ । ಜನತತಿಯು ಸಹಕಾರ । ಎನಗೊರೆಯಬೇಕೂ ॥೩॥ ಇಂದು ಬರಲಿದೆ ಕಪ್ಪ । ಚಂದದಲಿ ಕಾಣಿಕೆಯು । ಕುಂದದದ ಸ್ವೀಕರಿಸಿ । ಮಂದಿರದೊಳಿರಿಸೂ ॥೪॥

ಭಾಮಿನಿ

ಮಣಿದು ಮಂತ್ರಿ ಹಸಾದವೆನುತಿರ । ಲನಿತರೊಳು ಸಿದ್ಧಾಂತ ಕೀರ್ತಿಯು । ಘನ ಪದಾಬ್ಜಕೆ ಮಣಿದು ಬಹೆನೆಂದೆನುತ ಯೋಚಿಸುತಾ ॥ ವಿನಯದಲಿ ತಾ ಸತಿಯು ಜತೆಯೊಳು । ಚಿನುಮಯೋಪಮಗೆರಗೆ ಬಂದಾ । ನನುನಯದಿ ವಂದಿಸಲು ಕಂಡಾ ವ್ರತಿಯು ಮಿಗೆ ನುಡಿದಾ ॥೧॥

ರಾಗ—ಸಾರಂಗ—ಅಷ್ಟತಾಳ

ಉತ್ತರೋತ್ತರವಾಗಲೀ । ಸೌಭಾಗ್ಯವು । ನಿತ್ಯ ಶೋಭಿಸುತಿರಲೀ ॥ ಚಿತ್ತ ಶುದ್ಧದಿ ಭಾವ-ಭಕ್ತಿಯೊಳಖಿಲ ಸು । ವಸ್ತುವಿಂದಧಿಕ ವಿರಕ್ತರು ಹರಸಲಿ ॥೧॥ ಜಿನನಾಥನನು ಭಜಿಸೂ । ಭಾವದೊಳನ್ಯ ಘನದಾಶೆಗಳ ತ್ಯಜಿಸೂ ॥ ವಿನಯದಿ ಪೂಜ್ಯ ಭವಾದ್ಯರ ಸ್ಮರಿಸಯ್ಯ । ಜನುಮಾಂತರದ ಪಾಪ ಹನನವಪ್ಪುದು ನಿಜ ॥೨॥

ಭಾಮಿನಿ

ಕೇಳಿ ಹರುಷದೊಳಾಗ ನೃಪವರ । ಬಾಳ ಭಾಗ್ಯವು ತಮ್ಮ ಚರಣದ । ಮೂಲ ಕೃಪೆ ಹೊರತಿಲ್ಲ ವ್ರತಿ ವರ ಪೇಳಲಳವಲ್ಲಾ ॥ ಶೀಲವತಿ ಪದಕೆರಗಿ ಮಣಿದು ಸು । ಶೀಲ ಸದ್ಗುರುವರನೆ ಧನ್ಯಳು । ಬಾಲ ಜಿನದತ್ತನನು ತವ ಕೃಪೆಯಿಂದ ಪಡೆದೆ ದಿಟಾ ॥೧॥

ರಾಗ—ಕಲ್ಯಾಣಿ—ತ್ರಿವುಡೆತಾಳ

ಮುನಿವರ್ಯ ಶರಣೆಂಬೆನೂ । ಪಾದಕೆ ನಮೋ । ಮುನಿವರ್ಯ ಶರಣೆಂಬೆನೂ ॥ಪ॥ ಚಿನುಮಯಾತ್ಮಕ ರೂಪ ಗುರುವರ । ನೆನೆದ ಮಾತ್ರದಿ ವರವನೀವುತ । ಮನದ ಬಯಕೆಯ ಪೂರ್ತಿಗೊಳಿಸಿದೆ । ಘನ ಕೃಪಾಕರ ಪೇಳಲೇನೈ ॥೧॥ ಪದುಮಾವತಿಯ ಭಜಿಸೀ । ನಿನ್ನಯ ದಿವ್ಯ । ವದನದ ವರ ಧರಿಸೀ ॥ ಮುದದಿ ಪೊಂದಿದೆ ಮೂರು ಶಿಶುಗಳ । ನಿಧಿ ಸ್ವರೂಪನ ನಿಂದು ಪಡೆದೆನು । ಸುದತಿಯರೊಳತಿ ಧನ್ಯಳಾದೆನು । ವಿಧಿ-ವಿಧಾನದೊಳರ್ಚಿಸುವೆ ಪದ ॥೨॥

ವಾರ್ಧಿಕ್ಯ

ಜಿನ ಪಾದಾಬ್ಜದ ದಯಾರಸದೇವಿ ವರದಿಂದ । ಘನತರದ ಹರಕೆಗಳ ಸಂಗಮದ ಫಲದಿಂದ । ಮನಸಿಜ ಸುರೂಪನಂ ಪಡೆದಿರುವೆ ಪೋಡಶಾಂತರಕೆ ಘಾತಕವಿರ್ಪುದಾ ॥ ನೆನೆದು ಚೇತನದಿ ಭವದೊಳು ಜೀವಿಸುವ ಸಕಲ । ನೆನಕೆ ಗೈದನುಪಮದ ತ್ಯಾಗ ಯೋಗಂಗಳಿಂ । ಘನತರದ ಸೌಭಾಗ್ಯ ಶೋಭೆಯಿಂ ಮೆರೆಯೆಂದು ಹರಸೆ ಮುನಿವರನು ಬಳಿಕಾ ॥೧॥

ಭಾಮಿನಿ

ಭರದಿ ಧರಣಿಯ ಚರಿಸಿ ಭೂಪರ । ನೆರವಿಯನು ಸಂಧಿಸುತ ಪೊಗದಿಯ । ಹೊರಿಸಿ ಬರಲಾ ಹೂಣರಧಿಪನು ಜರೆದು ಭಂಗಿಸಲೂ ॥ ಕೊರಗಿ ಮನದಲಿ ಹಿರಿಯ ನಾಯಕ । ದೊರೆಗೆ ಬೆಸಸುತ ಹೂಣರಧಿಪನ । ಪರಿಭವಿಸದಿರಲಾರೆನೆನುತ್ತೈ ತಂದನಾ ಕಡೆಗೇ ॥೧॥

ರಾಗ—ಮುಖಾರಿ—ಏಕತಾಳ

ಸಲಾಮು ಸಲಾಮು ಜೀಯಾ । ಸಾಕಾರಾ ರಾಯಾ । ಸಲಾಮು ಸಲಾಮು ಜೀಯಾ ॥ಪ॥ ಧರಣೀಪರೆಲ್ಲರಿಂದು ತಮ್ಮ । ಸತ್ಕೀರ್ತಿ ಕೇಳಿ । ಭವದಿಂದ ಕಪ್ಪ ಹೊರಿಸಿ ನಮ್ಮ ॥ ವರ ಭಂಡಾರಕೆ ನೀಡುತ ಮಣಿವರು । ದುರುಳ ಹೂಣರುಪಟಳ ಕೇಳ್ ಸ್ವಾಮಿ ॥೧॥ ಕಪ್ಪವ ಕೊಡೆನೆಂದು ಭರದೀ । ಹೂಣಾಧಿಪ ತಾನು । ದರ್ಪವ ಬೀರ್ವನಿಂತು ಮದದೀ ॥ ಛಪ್ಪನ್ನಾಧಿಪ ಧೈರ್ಯ ಸಮುದ್ರ ತಪ್ಪಿದ ಮೂರ್ಖರ ಒಪ್ಪವ ಗೊಳಿಸೂ ॥೨॥

ಭಾಮಿನಿ

ಕೇಳಿ ಕಿಡಿಕಿಡಿಯಾಗಿ ಭೂವರ । ತಾಳಿ ರೋಷವ ಹಲುಮೊರೆದು ಕಂ । ಕಾಲರುದ್ರನ ತೆರದಿ ಘರ್ಜಿಸಿ ಮೊರೆಯುತಿಂತೆಂದಾ ॥ ಕಾಲ ಬಂದಿದೆ ಹೂಣರಧಿಪಗೆ । ಗೋಳು ಗುಡಿಸದೆ ಬಿಡೆನು ಭಲರೇ । ಬಾಳಿ ಫಲವೇನಕಟ ಬಂದಪಮಾನ ಸಹಿಸುವರೇ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಗರುಡನಿದಿರಲಿ ಉರಗ ಮೊತ್ತವು । ಕರಿಯೊಡನೆ ಕುರಿ ಮಂದೆ ಮೆರೆವುದೆ । ನರಿಯು ಬದುಕುವುದುಂಟೆ ರಣ ಕೇಸರಿಯ ಕೆಣಕೀ ॥೧॥ ತರಣಿ ತೇಜದಿ ಜೀವಿಪುದೆ ತಮ । ಸರಸವೇ ಧಳ್ಳುರಿಯು ಪುಷ್ಪಕೆ । ಮರಣ ಬಗೆದನು ಹೂಣಪತಿ ನಾ । ನೊರೆಯಲೇನೂ ॥೨॥ ಕರುಣಿಸಪ್ಪಣೆ ಗುರು ವರನೆ ದು । ರ್ಧರ ಧುರದಿ ಜಯವಾಗುವಂತೆನೆ । ಹರಸಿ ನುಡಿದನು ಬಳಿಕಲಾ ಮುನಿವರನು ವ್ಯಥಿಸೀ ॥೩॥

ರಾಗ— ಪೂರ್ವಿ—ರೂಪಕತಾಳ

ಧರಣಿಪಾಲಾ ಧನ್ಯನಯ್ಯ ಶೌರ್ಯಸಾಗರ । ಶರಣಪಾಲ ಕದನ ಲೋಲ ಕೀರ್ತಿ ಭಾಸುರ ॥ ಧುರದೊಳಿಂದು ಜಯವು ನಿನಗೆ ಯಿತ್ತೆ ನೀ ವರ । ಮರಳಿ ಬರುವ ಪಥದಿ ಕೇಡು ಕೇಳು ಭೂವರ ॥೧॥ ಪಥದಿ ನೀನು ಪೊಸತ ಕಂಡು ಮತಿಯ ಮರೆತರೇ । ವ್ಯಥೆಯನಾಂತು ಗತಿಯೊಳಳುವೆ ಧೃತಿಯ ತೊರೆದರೆ ॥ ಹಿತವ ಬಿಟ್ಟು ಹಿತದ ಗೈಯ್ಯೆ ಕುಲಕೆ ಘಾತವೂ । ಸ್ಥಿತಿಯು ಕೆಡದ ತೆರದಿ ಗೈವುದತಿ ವಿಲಾಸವು ॥೨॥

ಭಾಮಿನಿ

ಧಾರುಣಿಪಯೋಚಿಸಿದ ವ್ರತಿ ನುಡಿ । ಕಾರಣಿಕ ದಿಟ ಮಾಳ್ಪುದೇ ನಿಂ । ದಾರಣಾಗ್ರದಿ ಹೂಣರಧಿಪನ ಗೆಲದೆ ಸುಮ್ಮನಿರೇ ॥ ಶೂರತೆಗೆ ಕುಂದಿಹುದು ಪೋದರೆ । ಭೂರಿ ಘಾತಗಳಪ್ಪುದೆಂಬರು । ವೀರುವರೆ ಯಾರಳವು ವಿಧಿ ವೈಚಿತ್ರ್ಯ ಭುವನದೊಳೂ ॥೧॥

ರಾಗ—ಸೌರಾಷ್ಟ—ತ್ರಿವುಡೆತಾಳ

ಆದುದಾಗಲೆನುತ್ತ ಭೂವರ । ಮೋದದಿಂದಾ ಚಿತ್ರತೇಜನ । ಸಾಧಿಪೆಂದನು ಭೂರಿ ಬಲಗಳ । ಆದರದಲೀ ॥೧॥ ಸೇನೆಯಧಿಪತಿ ಚಿತ್ರತೇಜನು । ಕ್ಷೋಣಿಯೊಳು ಡಂಗುರವ ಸಾರಲು । ತಾನೆ ಬಂದುದು ಸೇನೆ ಶರಧಿ ಪ್ರ । ಮಾಣದಿಂದಾ ॥೨॥ ತೇರು ಹಯಗಜ ಸೈನ್ಯವೆರಸುತ । ಶೂರ ಮಂತ್ರೀಶ್ವರನ ಜೊತೆಯೊಳು । ಧಾರುಣಿಯು ಕಂಪಿಸುವ ತೆರದಲಿ । ಏರಿ ಕರಿಯಾ ॥೩॥ ತೇಜ ಸಾಕಾರಾಖ್ಯ ಬರುತಿರೆ । ಮೂಜಗವು ಕಂಪಿಸಲು ದಿಗ್ಗಜ । ಗಳೋಜೆಯೊಳು ತಳಮಳಿಸೆ ಹೂಣರು । ಸಾಜ ಬೆದರೇ ॥೪॥

ಭಾಮಿನಿ

ಭೇರಿ ಡಂಕ ನಗಾರಿ ಕಹಳೆಗ । ಳೇರಿ ಗರ್ಜಿಸೆ ಹೂಣ ಜಾಲವು । ಮಾರಿ ಬಂದುದೊ ಎನುತ ನಡುಗಿದರಲ್ಲಿ ಮರ ಮರುಗೀ ॥ ಕಾರಣವದೇನೆನುತ ಪರಿಕಿಸಲಾ ಧರೇಶ್ವರ ಸಭೆಗೆ ಬರಲಾ । ಚಾರಕರು ಕಂಗೆಟ್ಟು ಬಂದೆರಗುತ್ತ ಪೇಳಿದರೂ ॥೧॥

ರಾಗ—ಮುಖಾರಿ—ಏಕತಾಳ

ಲಾಲಿಸಬೇಕು ನಮ್ಮ ದೊರೆಯೇ । ಸೌಭಾಗ್ಯದ ಸಿರಿಯೇ ॥ ಪ ॥ ಕಾಲನ ತೆರದಲಿ । ಖೂಳರು ನಮ್ಮೊಳು । ಕಾಳಗಕೆನುತಲಿ । ಜಾಲವ ನೆರಹೀ ॥೧॥ ಎತ್ತ ನೋಡಿದಡತ್ತ ಬಂದೂ । ಬಹು ಸೈನ್ಯವಿಂದು । ಮುತ್ತಿದೆ ಕೋಟೆಯೆಡೆಗೈ ತಂದೂ ॥ ಮತ್ತತೆಯೊಳು । ಮುಂದೊತ್ತಿ ಬರುತಲಿದೆ । ಚಿತ್ತೈಸಿಂದಾ ಪತ್ತ ನಿವಾರಿಸು ॥೧॥

ರಾಗ—ಸೌರಾಷ್ಟ—ತ್ರಿವುಡೆತಾಳ

ಚರರ ನುಡಿಗಳ ಕೇಳಿ ಧರಣಿಪ । ಪರಿಕಿಸುವೆ ಬಂದಿರುವ ಸುಭಟರ । ನೆರಹಿಸೈ ಮಂತ್ರೀಶ ಬಲಗಳ । ಧುರಕೆ ಬೇಗಾ ॥೧॥ ಹೊಡೆಸಿದನು ಡಂಗುರವ ಸಚಿವನು । ಖಡುಗ ಈಟಿ ಕಠಾರಿ ಧರಿಸುತ । ಸಡಗರದಿ ಬಂದೆರಗಿ ನಿಂದರು । ಧಡಿಗ ಭಟರೂ ॥೨॥ ಮೊರೆವ ಕಹಳಾ ರವಗಳಿಂದಲಿ । ಪರಮ ವೀರಾವೇಶ ತೋರುತ । ಭರದೊಳೈ ತಂದಾಗ ನಿಂದರು । ಧುರಕೆನುತಲೀ ॥೩॥

ಭಾಮಿನಿ

ಪರಿಕಿಸುತಲಾ ಚಿತ್ರತೇಜನು । ಭರಿತ ರೋಷಾವೇಶದಿಂದಲಿ । ಕರದ ಧನು ಝೇಗೈದು ಮಾರ್ಮಲೆತಿರಲು ಕಾಣುತಲೀ ॥ ಧಿರುರೆ ಶಾಭಾಸೆಂದು ಹೂಣರ । ಧುರ ಪರಾಕ್ರಮಿ ಸಿಂಹಕೇತನು । ಥರಥರಾಯುಧ ಧರಿಸಿ ತಡೆದಿಂತೆಂದ ಹೂಂಕರಿಸೀ ॥೧॥

ರಾಗ—ಭೈರವಿ—ಅಷ್ಟತಾಳ

ಯಾರೊ ಬಂದವನೂ । ಪೇಳ್ವೆ ಬಂದ । ಕಾರಣವೇನೆಂಬೆನೂ ॥ ವೀರಾಧಿವೀರ ನಿನ್ನಯ ಪೆಸರೇನೆಂದು । ಘೋರನೆ ತಿಳುಹು ಗಾಥಾ ॥೧॥ ವರ ಚಿತ್ರತೇಜ ಕೇಳೂ । ಸೈನ್ಯಾಧೀಶ । ಪರದೊರೆಗಳಿಗಂಕುಶಾ । ಮೆರೆವ ಸಾಕಾರ ದೊರೆಗೆ ಶರಣೆನ್ನುತ । ಧರಣಿಯೊಳಿಹುದು ಚಂದ ॥೨॥ ಧಿರುರೆ ಶಾಭಾಸು ಮಲ್ಲಾ । ಬಂದಿದೆ ಕಾಲ । ಧುರ ಧೀರ ಹೂಣರೆಲ್ಲಾ । ಕುರಿಗಳಲ್ಲವೊ ವೀರ ಶರಧಿ ದಾವಾಗ್ನಿನಾ । ವರ ಸಿಂಹಕೇತ ಕೇಳೂ ॥೩॥ ಪಾತಕಿಗಳಹದಿರೂ । ಚಕ್ರೇಶ್ವರ । ಏತಕೆ ಛಲಯಿದಿರೂ ॥ ಧಾತುಗುಂದುವುದೊಳ್ಳಿತಲ್ಲ । ಕಾಣಿಕೆಯಿತ್ತು । ಪ್ರೀತಿಯೊಳ್ ಮನ್ನಿಸೆಂದಾ ॥೪॥ ಚೋರರಂದದಿ ದುರ್ಗವಾ । ಏರುತ ಬಂದು । ಸಾರುವೆ ಬಹು ನೀತಿಯಾ ॥ ವೀರನಾದಡೆ ತಾಳು । ಕ್ರೂರ ಬಾಣಗಳೆಂದು । ಘೋರನೆ ತೆಗೆದೆಸೆದಾ ॥೫॥ ಬರುವಸ್ತ್ರಗಳ ಖಂಡಿಸೀ । ಮಂತ್ರಾಸ್ತ್ರವ । ಗುರಿಯೊಳಿಡಲು ಸಾಹಸೀ । ಧುರಕಣದೊಳು ಮೂರ್ಛೆ ತಳೆದುದ ಕಾಣುತ । ಕೆರಳುತ ಹೂಣಾಧಿಪಾ ॥೬॥

ಭಾಮಿನಿ

ಭಲರೆ ಮೆಚ್ಚಿದೆ ಚಿತ್ರತೇಜನೆ । ಛಲದಿ ನಮ್ಮಯ ಸಿಂಹಕೇತನ । ಕೊಳುಗುಳದಿ ಗೆಲಿದಿರುವ ಹಮ್ಮನು ತೋರು ತೋರೆನುತಾ ॥ ಕಲಿ ವಿಷಧ್ವಜ ಹೂಣರರಸನು । ಹಲು ಮೊರೆದು ಭೀಕರಿಸಿ ಶರ ಬಿಡೆ । ಘಳಿಲನದ ತುಂಡರಿಸಿ ನಿಂದಿರೆ ಕನಲುತಿಂತೆಂದಾ ॥೧॥

ರಾಗ—ಭೈರವಿ—ಏಕತಾಳ

ಭಲ ಭಲ ಕೇಳ್ವೆ ಚದುರಾ । ಕೊಳು । ಗುಳದೊಳು ಬಲ್ಲಿದ ಶೂರಾ ।

ತಲೆಯಸು ಕಾವರ ಕರಸೂ । ನಾ । ಛಲಗಳ ಕಾಂಬೆನು ಬಿರುಸೂ ॥೧॥ ವಿಷಕೇತನ ಕೇಳಯ್ಯ । ಹುಲು । ವಿಶಿಖಕೆ ಬೆದರೆನು ತಲೆಯಾ । ವಸುಧೀಶನ ಪದತಲದೀ । ಕೊಂ । ಡೊಪಗೆಯು ಗೈವೆನು ಮುದದೀ ॥೨॥ ಮದ ಮುಖ ತಾಳೆಂದೆನುತಾ । ವಿಧ । ವಿಧದಸ್ತ್ರಗಳನು ಬಿಡುತಾ । ಕದನದಿ ವೈಪುರೆಸಿದನೂ । ಬಂದೊದಗಿದ ಧರಣಿಪ ತಾನೂ ॥೧॥

ರಾಗ—ಶಂಕರಾಭರಣ—ಮಠ್ಯತಾಳ

ಭಳಿರೆ ಲೇಸುಗೈದೆ ಹೂಣರಧಿಪ ಬಲ್ಲಿದಾ । ಛಲದಿ ಕಪ್ಪ ಕೊಡದೆ ಬಲುಹ ತೋರೆ ಕೊಬ್ಬಿದಾ ॥ ಬಲುಹು ಬಿಂಕವಿಳಿಸಿ ಕಪ್ಪ ಸೆಳೆದು ಕೊಂಬೆನೂ । ಕಲಹ ಬೇಡ ಸಲಿಸು ಪೊಗದಿ ಎನಲಿಕೆಂದನೂ ॥೧॥ ವೀರ ಕುಲಜನೆಂದು ಬಲ್ಲೆ ಶಾಂತಿಮಂತ್ರವಾ । ಚಾರು ಜಿನ ಪದಾಬ್ಜ ವ್ರತ ವಿಲಾಸವೆಲ್ಲವಾ ॥ ಯಾರಿಗಿತ್ತು ಹಿಂಸೆಗಾಗಿ ಬಂದೆ ಸಮ್ಮರಲೀ । ಸಾರವಿಲ್ಲದಿರುವ ಸಂಸಾರ ಭ್ರಮೆಯಲೀ ॥೨॥ ವಿಧಿಯ ನೇಮವಿಹುದು ಕೇಳು ಧರ್ಮಸಾರವೂ । ಕದನ ಪ್ರಭೆಯು ಕ್ಷತ್ರಿಯರಿಗೆ ಧರೆಯ ಮಲ್ಲರೂ ॥ ಒದಗಿ ಕಪ್ಪ ಕೊಟ್ಟು ಶಾಂತಿ ಬೀರುತಿರುವರೂ । ಯಿದು ನಿಧಾನ ಹಿಂಸೆಯಲ್ಲ ಪರಿಯನರಿತಿರೂ ॥೩॥ ಧರ್ಮಸಿಂಧು ಭಲರೆ ನೀನು ಪೇಳಲೇನದಾ । ನಿರ್ಮಲಾತ್ಮ ಪ್ರಭೆಯೊಳಿಲ್ಲ ಚರಿತ ದುರ್ಮದಾ ॥ ಕರ್ಮ ಕುಟಿಲ ನೀತಿ ನಿನಗೆ ಯೋಗ್ಯವೇನಿದೂ । ಶರ್ಮ ಬೇಡ ತೆರಳೊ ಕೀರ್ತಿ ಹಿಂಸೆಯುಳಿಪುದೂ ॥೪॥ ಕುಟಿಲಗಾರರವರ ಪುಡುಕಿ ಮರ್ದಿಸುತ್ತಲೀ । ಸಟೆ ವಿರೋಧಕೊಳಕು ಪಂಥವಳಿಸಿ ಜಗದಲೀ ॥ ದಿಟದಿ ಧರ್ಮಸತ್ಯಗಳನು ರೂಪಿಸುತ್ತಲೀ । ಚಟಗಳಳಿಸಲೆಂದು ಬಂದೆ ಧರ್ಮಪಥದಲೀ ॥೫॥

ಭಾಮಿನಿ

ಸಾಕು ಬಿಡು ದುರ್ನೀತಿಗಳನಾ । ಸಾಕು ರಾಯನೆ ಬಿಂಕವಿಳಿಸುವೆ । ಜೋಕೆ ಹರಣದೊಳಾಸೆಯಿರೆ ಪಿಂದಿರುಗು ಯೋಚಿಸದೇ ॥ ಏಕೆ ಒಣ ಪೌರುಷವ ನುಡಿಯುವೆ । ಕಾಕುಗೊಳಿಸುವೆ ನಿಂದು ಲೋಕದಿ । ಭೇಕ ಕಳುಕುವುದುಂಟೆ ನಾಗೇಶ್ವರನು ನೋಡೆಂದಾ ॥೧॥

ರಾಗ—ಭೈರವಿ—ಏಕತಾಳ

ಭೀಕರ ಶರ ಬಿಡೆ ಹೂಣಾ । ಕಂ । ಡೇಕಾಸ್ತ್ರದೊಳಾ ಜಾಣಾ ॥ ಸೋಕದ ಮುನ್ನವೆ ತರಿದಾ । ತಾ । ಸಾಕಾರಾಖ್ಯನು ಮೆರೆದಾ ॥ ೧ ॥ ವಿಷಕೇತನ ಗದೆಯನ್ನೂ । ಬೀ । ಸಲು ಕಾಣುತ ಮುರಿದದನೂ ॥ ಮಸೆದಿಹ ಖಡ್ಗವ ಝಡಿಯೇ । ಕಂ । ಡಸಮ ಪರಾಕ್ರಮಿ ಕಸಿಯೇ ॥ ೨॥ ವಿವಿಧಾ ಯುಧಗಳನೆಸೆದಾ । ತಿವಿ । ತಿವಿದುರೆ ಬಲು ನೋಯಿಸಿದಾ ॥ ರವಿಯಾಸ್ತ್ರ ಗಳಿಂ ಸದೆದೂ । ಗೋ । ಮಿಸಿಪತಿ ಸೆರೆಯೊಳು ಪಿಡಿದೂ ॥ ೩ ॥

ವಾರ್ಧಿಕ್ಯ

ವಿಪುಲ ಬಾಣಗಳಿಂದ ಬಲು ಹೆಣಗಿದ್ಯೆ ಭಲರೆ । ಚಪಲ ಧೀರೋ ದ್ಧಾತ ಮೆಚ್ಚಿದೆನು ಹೂಣಾಖ್ಯ । ಕಪಟವೇನಿಲ್ಲ ಜಿನಧರ್ಮವಂ ಧರಣಿ ಯೊಳು ಪಸರಿಸಲು ಮನಗೈದಿಹೇ ॥ ಅಪರಿಮಿತ ನೃಪವರ್ಗ ಶರಣೆಂದು ಕಾಣಿಕೆಯ । ಸುಪವಿತ್ರ ಜಿನನಾಥನಂ ನೆನೆದು ನೀಡುವರು । ತಪನ ತೇಜನ ಪಾದಪದ್ಮಗಳ ಶರಣೆಂದು ನುತಿಗೈಯ್ಯೆ ಶುಭಗಳಿಹುದೂ ॥ ೧॥

ರಾಗ—ಕಾಂಬೋಧಿ—ಝಂಪೆತಾಳ

ಕೇಳುತಲಿ ಹೂಣಾಖ್ಯ । ತಾಳುತತಿ ತೋಷವನು । ಮೇಲೆ ಕೊಂಡಾಡಿದನು ಭೂಲಲಾಮನನೂ ॥ ಕಾಳಗವ ಕೊಟ್ಟು ಬಲು । ಪಾಳಿಸ ಗಿದೆನು ಧರ್ಮ । ದೂಳಿಗವ ಧಿಕ್ಕರಿಸಿ । ಶೀಲವನು ತೊರೆದೇ ॥ ೧॥ ಧನ ಕನಕ ಧಾನ್ಯಗಳ । ವಸಧಿ ವಸನೇಶ ನಿನ । ಗನುಮಾನ ತೊರೆದೀಗ । ಸನುಮತದೊಳೀವೇ ॥ ಘನ ತೋಷದಲಿ ಮನ್ನಿ । ಸೆನುತೆರಗೆ ತಕ್ಕೈಸಿ । ಮನಕೆ ಬಂದುದು ನಿನ್ನ । ಎಣಿಕೆಗಳು ಚಂದಾ ॥೨॥ ಸ್ವೀಕರಿಸಿ ಕಪ್ಪವನು । ಸಾಕಾರರಾಯ ಜಗ । ದೇಕವೀರನು ಎನಿಸೆ । ಏಕೆ ಹಗೆತನವೂ ॥ ಬೇಕಾದ ಕಾಲದಲಿ । ನಾ ಕರೆಸಿದೊಡೆ ಬಹುದು । ಸಾಕೆನುತ ಕಳುಹಿತಾ । ನಾಕ್ಷಣದಿ ಪೊರಟಾ ॥ ೩ ॥

ವಾರ್ಧಿಕ್ಯ

ಭೂರಮಣ ಮಂತ್ರಿ ಸೇನಾಧೀಶರೊಡನಾಗ । ಚಾರು ಚತುರಂಗ ಬಲವೆರಸಿ ಬರುತಿರೆ ಮುಂದೆ । ಘೋರಡವಿ ಹಬ್ಬಿ ಭೀಕರ ಕಾಣುತಿರ

ಲೊಂದು ಕೌತುಕವು ಕಣ್ಗೆಸೆದುದೂ ॥ ಭೂರಿ ಚೋದ್ಯವಿದ್ಜೈಸೆ ಭ್ರಮರಗಳು ಮಮತೆಯೊಳು । ಧಾರುಣಿಯನಪ್ಪಿ ಶೃಂಗಾರ ಝೇಂಕೃತಿಗೈವ । ಕಾರಣ ವದೇನೆಂದು ಯೋಚಿಸುತ ಸನಿಹಕ್ಕೆ ಗಮಿಸಿ ತಾ ಪರಿಕಿಸಿದನೂ ॥೧॥

ಕಂದ

ನೋಡಿದನಾಗ ನರೇಂದ್ರಂ। ಗೂಢವಿದೇನದ್ಭುತವೆನುತಂ ಬೆರಗಾದಂ॥ ಮೂಡಿದ ಕೌತುಕಕೀಕ್ಷಣ । ಮಾಡಿದ ಮನಮಂ ತಿಳಿವಿಗೆ ತೊಡಕೇಕೆನುತಂ ॥೧॥

ಮಂತ್ರಿಯೊಡನೆ ಮೆಚ್ಚಿಸುತ್ತಾನದೆಂತೆನೆ—

ರಾಗ—ಪೂರ್ವಿ—ಅಷ್ಟತಾಳ

ವಸ್ತುವಿಲ್ಲದ ಬರಿ ನೆಲಕೇ । ಚೆಲ್ವ । ಮಸ್ತಕ ಚಾಚುತ್ತ ಎರಗುವ ಭರಕೇ ॥ ಆಸ್ತಿಕ ತತ್ವದ ಬಗೆಗೇ । ನೀನು । ವಾಸ್ತವಿಕೆಯ ನೆಲೆ ಪೇಳೆಂದ ನುಡಿಗೇ ॥೧॥ ಗಂಧವಿದ್ದೆಡೆ ಯಳಿಕುಲವೂ । ಸಂ । ಬಂಧ ಹೊದ್ದುವುದೈಸೆ ಕಾಣೆ ಸೋಜಿಗವೂ ॥ ಚಂದವಿದ್ದೆಡೆ ದೃಷ್ಟಿ ಚಲಿಸೇ । ನಾವು । ಕುಂದನೆಣಿಸಬಹುದೇನಿದನೆಣಿಸೇ ॥೨॥ ಒಪ್ಪವಿ ನುಡಿ ಬಹು ಚಂದಾ । ನೆರೆ । ದಿಪ್ಪಾಳಿ ಕುಲವಿಂತು ಏಕಾಂತದಿಂದಾ ॥ ತೆಪ್ಪಗಿರುವ ವಿವರವನೂ । ಪೇಳಿ । ಚಪ್ಪರಿಸೆನ್ನಯ ಮನ ಕೌತುಕವನೂ ॥೩॥

ರಾಗ—ಸಾಂಗತ್ಯ—ರೂಪಕತಾಳ

ಈ ಕಾಂತಾರದೊಳಿಂದಾ । ನೇಕಾ ಶಬರ ಕುಲ । ಬೇಕಾದ ಸ್ತ್ರೀಯರುಂಟಲ್ಲಿ ॥ ನಾಲ್ಕು ಜಾತಿಯೊಳುತ್ತಮದ ಪದ್ಮಿನಿಯರಿಲ್ಲಿ । ಆ ಕುಲದಲಿ ಜನಿಸಿಹರೂ ॥೧॥ ಕಲಿಯುಗದೊಳಗೆ ಪದ್ಮಿನಿ ಜಾತಿ ಸ್ತ್ರೀಯರು । ಸುಲಲಿತ ಕುಲದೊಳಗಿಲ್ಲ ॥ ಕುಲ ಹೀನ ಬೇಡಜಾತಿಯೊಳು ಜನಿಸಿ ಬಲು । ಚೆಲುವೆಯರಾಗಿರುತಿಹರೂ ॥೨॥ ಮತ್ತವರೊಳಗೆ ಪದ್ಮಿನಿ ಜಾತಿ ಮೂತ್ರಿಸೆ । ಪತ್ತಿದ ಗಂಧಕ್ಕೆ ಭ್ರಮಿಸೀ ॥ ಮತ್ತೆ ಝೇಂಕರಿಸಿಯಾ । ಸಕ್ತವಾಗಿಹವಿಂದು । ಯುಕ್ತಿಯ ಗ್ರಹಿಸೆಂದ ಸಚಿವಾ ॥೩॥

ವಾರ್ಧಿಕ್ಯ

ಭೂರಮಣ ಕೇಳಿದಂ ತಾಳಿದಂ ಕೌತುಕವ । ಕ್ಷೀರ ಕೆಚ್ಚಲೊಳಿಹುದು

ಮಾಂಸ ಸಂಪರ್ಕದಲಿ । ಚಾರು ಕಸ್ತೂರಿ ಪುನುಗಾದಿಗಳು ಮೃಗ ಮೈಯೊ
ಳಿರ್ದರೇಂ ಧರಣಿಯೊಳಗೇ ॥ ಭೂರಿ ಶಾಸ್ತ್ರಾರ್ಥ ಸಂಪನ್ನಕೋವಿದರದನು।
ಸಾರ ಶೃಂಗಾರ ಸಾಹಿತ್ಯವೆಂದೆಣಿಸುವರು । ಯಾರಾದರೇನು ಗುಣಪೂರಿತರ
ದೂರುವರೆ ಕಾರಣವೆ ಕಾಣೆನೆಂದಾ ॥೧॥

ರಾಗ—ಸಾಂಗತ್ಯ—ಏಕತಾಳ

ಮನದಕ್ಕರಿಂದಲೆ ಜನನಾಥ ಮಂತ್ರಿಯ । ವಿನಯದಿ ಕರೆದು
ಯಿಂತೆಂದ ॥ ವನಚರರೊಳಗೆ ಪದ್ಮಿನಿ ಯಾರೆಂದೆನುತಲಿ । ಘನ ವೇಗ
ದೊಳಗೆ ಕೇಳೆಂದಾ ॥೧॥ ಕೇಳಿ ಮಾಡುವುದೇನು ತಮುಗಲ್ಲದವಳನು ।
ಕಾಳ ಬೇಡರಲಿ ಪುಟ್ಟಿದಳ ॥ ಕೀಳು ಜಾತಿಯ ಮನೆಯೊಳಗಿರ್ದ ಪರಮಾನ್ನ ।
ಮೇಲಾಗುವುದೆ ಭೂಮಿಪಾಲಾ ॥೨॥ ಅನ್ನವಾಗದರೇನು । ಕೀಳು ಜಾತಿ
ಯೊಳಿರ್ದ । ರನ್ನದ ಕಾಂತಿ ಕುಗ್ಗುವುದೇ ॥ ಚೆನ್ನೆಯರೊಳಗತಿಯುತ್ತಮೆ
ಯೆನಿಸುವ । ಕನ್ನೆಯಾಗಳೆ ಯಿಾ ಪದ್ಮಿನಿಯೂ ॥೩॥ ರನ್ನದ ಪಾದುಕೆ
ಮೆಟ್ಟುವರಲ್ಲದೆ ಮನ್ನೆಯರಿಡುವರೆ ಶಿರಕೆ ॥ ಕನ್ನೆಯರೊಳಗೆ ಸುಂದರಿ
ಎಂದು ಕೂಡಲು ಬನ್ನ ಬಪ್ಪದು ಕುಲಕರಸಾ ॥೪॥ ಸೊಲ್ಲಿಸ ಬೇಡಿದ
ಮಂತ್ರಿ ಶೇಖರ ಕೇಳು । ಬಲ್ಲೆ ನಾನೆಲ್ಲ ಶಾಸ್ತ್ರಗಳಾ ॥ ಎಲ್ಲಿ ಜನಿಸಿ ಬೆಳೆದರು
ಸ್ತ್ರೀಯು ರತುನವು । ಸಿಲ್ಲದೆ ತರಿಸೆಂದನಾಗಾ ॥೫॥

ಭಾಮಿನಿ

ಗುರಿಯು ತಪ್ಪಲು ಬಹುದು ಚಾಪದ । ಗುರುವಿನಾಜ್ಞೆಯು ಪುಸಿಯು
ದಾಪುದೆ । ನರಪತಿಯು ತಾನಾಗಿ ಕೆಡುತಿಹನೇನ ಮಾಡುವೆನೂ ॥ ತರ
ಹರಿಸಿ ಮಂತ್ರೀಶ ಚರರನು । ಕರೆದು ಪೇಳಿದ ಸನಿಹದೊಳಗಿಹ । ತರು
ಚರಾಧಿಪನನ್ನು ಕರೆತಹುದೀಗ ವೇಗದೊಳೂ ॥೧॥

ರಾಗ—ಮಧ್ಯಮಾವತಿ—ತ್ರಿವುಡೆತಾಳ

ಭರದಿ ಚರರೈತಂದು ಕಂಡರು । ತರುವಿನೆಡೆಯೊಳು ಕುಳಿತ ಶಬರರ ।
ವರ ವಿಲಾಸವ ನೋಡಿ ಮನದಲಿ ಮರುಕಪಡುತಾ ॥೧॥ ಕ್ರೂರ ಮೃಗ
ಗಳ ತರಿದು ಮಾಂಸವ । ಸೂರೆಗೊಂಡವನಿರಿಸಿ ಮೂಳೆಯ । ಹಾರಗಳ

ಧರಿಸುತಲಿ ಕುಣಿಯುವ । ಧೀರ ಪಡೆಯಾ ॥೨॥ ಬೇಡನಾಯಕ ಕೇಳು ದೊರೆಗಳು । ಬೀಡು ಬಿಟ್ಟಿಹರಿಲ್ಲಿ ನಿನ್ನನು । ಕೂಡಿ ಬರಲೆಂ ! ದಾಡಿ ಕಳು ಹಿದರೋಡಿ ಬಾರೋ ॥೩॥

ಭಾಮಿನಿ

ಧ್ವನಿಯ ಕೇಳಿ ಕಿರಾತಪತಿ ತಾ । ನನುನಯದಿ ವಂದಿಸಿದ ಸಚಿವಗೆ । ಎನಗದೇತಕೆ ಭೂಪ ದರ್ಶನ ಬಾರೆನೆಂದೆನಲೂ ॥ ಕನಿಕರದಿ ಬೋಳೈಸಿ ಬಾರೆಂ । ದೆನಲು ನಡುಗುತ ಭೀತಿಯೊಳಗವ । ಸರದೆ ನುಡಿದನು ಕಾಣಿ ಕೆಯದೇನೆನುತ ಬೆಸಗೊಂಡಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಕಾಣಿಕೆ ಬೇಡಯ್ಯ । ಎಲೆ ಬೇಡರೊಡೆಯ ನೀ । ಕಾಣಿಸಿಕೊಂಡರೆ ಸಾಕೂ ॥ ಕ್ಷೋಣಿಯಧಿಪ ನಿನ್ನ ಕರೆ ತರೆ ಕಳುಹಿದ ! ನೀನಲ್ಲವೇ ಭಾಗ್ಯ ವಂತಾ ॥೧॥ ಏನ ಪೇಳುವಿರಿ ಭೂಪಗೆ ಕಾಣಿಕೆಯನಿತ್ತು । ಸಾನುರಾಗದಿ ಪೊಡಮಡುವೋ । ಹೀನ ವಂಶಜರೀವು ಮಾನವಂತನು ಆತ । ಮಾನತೆ ಗಿದು ಹಿರಿದಹುದೂ ॥೨॥

ಭಾಮಿನಿ

ಕರಿಯ ಮಸ್ತಕದಿಂದ ಪಡೆದಿಹ । ಥರಥರದ ಮುತ್ತುಗಳ ಹರಿಗಳ । ಬೆರಳುಗುರು ದಾಡೆಗಳು ವರಹಗಳಿಂದ ಸಂಗ್ರಹಿತಾ ॥ ಉರಗಗಳ ಹೆಡ ತಲೆಯ ರತುನಗ। ಳಿರದೆ ಚಂದನ ಗಂಧ ಕಸ್ತುರಿ ! ಪರಿಪರಿಯ ಕಾಣಿಕೆಯ ಹೊರಿಸುತ ಶಬರಪತಿ ಪೊರಟಾ ॥೧॥

ವಾರ್ಧಿಕ್ಯ

ತಪನ ತೇಜನ ಕಂಡು ವರ ಪುಳಿಂದನು ಬಳಿಕ । ಚಪಲ ಚಿತ್ತದಿ ಮಣಿಯೆ ಮಂದಹಾಸದೊಳಾಗ । ನೃಪವರಂ ಮಂತ್ರಿಯೊಳು ಸೂಚಿಸಲು ಮನದಿರವ ಸಚಿವೇಶನಿಂತುಸುರಿದಾ ॥ ಅಪರೂಪವಾಗಿ ದರ್ಶನವಾಯ್ತು ಬೇಡಪತಿ । ಸುಪವಿತ್ರರಲ್ಲವಾದರು ನಿಮ್ಮೊಳಿದೆ ದಿವ್ಯ । ವಿಪುಲ ತೇಜಸ್ವಿನೀ ಕಾಂತಿಮಯೆ ಪದ್ಮಿನೀ ಜಾತಿ ಸ್ತ್ರೀರತುನ ಚೋದ್ಯಾ ॥೧॥

ರಾಗ—ಕೇತಾರಗೌಳ—ಅಷ್ಟತಾಳ

ಚೋದ್ಯವೇನಿದೆ ಜೀಯ । ಕೆಸರೊಳು ತಾವರೆ । ವೇದ್ಯವಿಲ್ಲವೆ ತಮಗೇ ॥ ಸಾಧ್ಯಗೈದಿಹನೀಶ । ಸೃಷ್ಟಿ ವೈಚಿತ್ರವ । ಭೇದ್ಯವಾಗಿದೆ ನಮಗೇ ॥೧॥ ಚೆನ್ನಿಗ ಚೆಲುವೆಯ ಹೊಂದಿ ನೀ ಧನ್ಯನು । ಮನ್ನಣೆ ಬಂತು ಭಾಗ್ಯಾ । ಕನ್ನೆಯನರಸಗಿತ್ತಸುದಿನ ಸಂತಸ । ಪುಣ್ಯ ಪಡೆಯೆಂಬೆನೂ ॥೨॥ ಆಗದಾಗದು ಜೀಯ ಮೂಜಗ ಮಲ್ಲಗೆ । ಈಗಲೆ ಸುತೆಯನಿತ್ತೂ॥ ರಾಗರಹಿತನಾಗಿ ಭೋಗ ಪಡೆವೆನೆಂಬ । ಯೋಗವು ಸಟೆಯಪ್ಪುದೂ ॥೩॥ ಸಟೆಯಲ್ಲ ಶಬರೇಶ ಕುಟಿಲತೆಗಳ ಬಿಡು । ವಿಟನಲ್ಲ ರಾಜೇಂದ್ರನೂ ॥ ದಿಟವಾಗಿ ಸಲಹುವ ನಿತ್ಯ ನಿರಂತರ ಹಟ ಬೇಡ ಸಾರಿದೆನೂ ॥೪॥

ಭಾಮಿನಿ

ಕೀಳುತನಗಳ ಬಿಟ್ಟು ಧರಣೀ । ಪಾಲ ವರ್ಗಕೆ ಸುತೆಯನಿತ್ತರೆ । ಕಾಲ ಕಾಲಕು ಮೂದಲಿಸುವರು ಕೇಳು ಮಂತ್ರೀಶಾ ॥ ಆಳಿದವರಿಗೆ ಊಳಿಗದ ಜನ । ಜಾಲ ಸಮವೆನಿಸುವುದೆ ಲೋಕದಿ । ಕೇಳಬೇಡಿದ ಪಾಲಿಸೆನು ತೆರಗಿದನು ದುಗುಡದಲೀ ॥೧॥

ರಾಗ—ಸಾಂಗತ್ಯ—ರೂಪಕತಾಳ

ಇಳೆಯಾಧಿಪತಿ ಬಳಿಕವನ ಸಂತೈಸುತ್ತಾ । ಒಲಿದೆನು ಶಬರೇಶ ನಿನಗೇ ॥ ಚೆಲುವೆಯ ತಂದು ಕೈವರ್ತಿಸು ನಿನ್ನರ್ತಿ । ಸಲಿಸುವೆನನುಮಾನ ಬೇಡಾ ॥೧॥ ನಾಡಿನರಸ ನಿನ್ನ । ನುಡಿಗಳ ನಡೆಸಲು ಮೂಢ ನಾನಲ್ಲ ಪರಾಕೂ ॥ ಕೂಡಿರ್ಪೆಯತಿತೇಜವಂತ ಕುಮಾರನ । ಮಾಡಲೆಂತಿದ ಯೋಚಿಸೆಂದಾ ॥೨॥ ಬೇಡನಾಯಕ ನಿನ್ನ ಸುತೆಗೊಬ್ಬ ಸುತನಾಗೆ । ನಾಡಿಗೊಡೆಯನ ಮಾಡುವೆನೂ ॥ ಆಡಿದ ಮಾತನು ತಪ್ಪೆನು ನಾನೆಂದು । ನೀಡಿದನಭಯ ಹಸ್ತವನೂ ॥೩॥

ವಾರ್ಧಿಕ್ಯ

ಬೇಡರಧಿಪಂ ತಾಳಿ ಸಂತಸವನಾ ಕ್ಷಣದಿ । ಕೂಡಿಸಿದ ನರಪತಿಗೆ ಪದ್ಮಿನಿಯ ತಂದು ಕೈ । ಜೋಡಿಸುತ ಮುಂದೆ ಕಾಪಾಡೆಂದು ಬಿನ್ನಹವ

ಮಾಡೆ ಮಂತ್ರೀಶ ನೋಡೀ ॥ ಕೇಡು ಬಂತವನೀಶ ಗಾಢದಿಂ ಕಾಮುಕತೆ । ಗೀಡಾದ ನಕಟಕಟ ನಾಡಿಗಿದು ದುಷ್ಕೀರ್ತಿ । ರೂಢಿಪತಿ ಯಿವಳ ಸುತ ನಾಡಲೆಂತಿದನಕಟ । ಮೋಡಿಯಾಯ್ತೆಂದು ಮರುಗೇ ॥೧॥

ಭಾಮಿನಿ

ಸತಿಯ ಕೂಡಿ ಧಾರುಣಿಪನತಿ । ಹಿತದಿ ಬರುತಿರೆ ಪುರಕೆ ಕಾಣುತ। ವ್ಯಥಿಸಿ ಸಾಗರದತ್ತ ಸೆಟ್ಟಿಯು ತನ್ನ ಪ್ರೇಯಸಿಗೇ ॥ ರತಿಸ್ವರೂಪಿಣಿ ನೋಡು ಲೀಲಾ । ವತಿಯೆ ರಾಜನ ಠೀವಿ ಕೌತುಕ । ವತಿಶಯವನೇನೆಂಬೆ ಕಂಡೆಯ ಬಹು ವಿಚಿತ್ರವಲಾ ॥೧॥

ರಾಗ—ತೋಡಿ—ತ್ರಿವುಡೆತಾಳ

ಕಾಂತಾ ಶಿರೋಮಣಿಯೆ । ಪೇಳುವದೇನೂ ॥ ಚಿಂತೆ ಹೆಚ್ಚಿದೆ ಮನಕೆ ಭೂಪನ । ಶಾಂತ ಕೀರ್ತಿಗೆ ಬಂತು ಮಲಿನತೆ । ಎಂತು ಪೇಳಲಿ ಯೊರೊಳೆಂಬುವೆ । ಅಂತ್ಯಜಳ ಜತೆಯಾಂತು ಸೋತನು ॥೧॥ ಎನಲೆಂದ ಕರ್ಮಗಳೂ । ಜೀವಿಗಳಿಂಗೆ । ಘನವಾಗಿ ಸೇರಿರ್ಪವೂ ॥ ಜಿನ ವಿಲಾಸವ ನೆಂತು ವರ್ಣಿಪೆ । ಫಣಿಪನಿಂಗಸದಳವು ಲೋಕದಿ । ಬಿನುಗು ತನದಲಿ ಕೆಡುವರ್ರೈ ಸಲೆ । ಜನರು ಭ್ರಮೆಯಿಂದಕಟ ಮೋಹದಿ ॥೨॥

ರಾಗ—ಸಾಂಗತ್ಯ—ರೂಪಕತಾಳ

ವೇಗದಿ ಭೂಪಾಲ ತರುಣಿಯ ಬೇರೊಂದು । ಭಾಗದೊಳಿಹ ಗೃಹ ಕಾಗೀ ॥ ಸಾಗಿಸಿ ಗುಪ್ತದಿ ರಾಣಿಯ ಕಾಣಲು । ಆಗವಿಸಿದ ತೋಷದಿಂದಾ ॥೧॥ ಇತ್ತ ಲೀಲಾವತಿ ಒಡತಿಯು ಬಳಿಗೈದಿ । ಬಿತ್ತರಿಸುವೆ ಚೋದ್ಯ ವಿದನೂ ॥ ಪೃಥ್ವಿಪಾಲಕಗೈದ । ವೃತ್ತಾಂತವೆಲ್ಲವ । ಮತ್ತೆ ನಾನೆಂತು ಸಹಿಸಲೀ ॥೨॥ ಬರಲಿಂತು ಭಾಮಿನಿ ಯರಮನೆಯೊಳು ಸಖಿ । ನೆರವಿಯ ಕೂಡುತಲಾಗಾ ॥ ಮೆರೆದಿರೆ ಶ್ರೀಯಲ । ದೇವಿಯ ಕಾಣುತ್ತ ಎರಗಿದಳತಿ ಭಕ್ತಿಯಿಂದಾ ॥೩॥ ಬಾರಮ್ಮ ನಿರ್ಮಲಾಕಾರಾ ಸರೋರುಹ । ಮೀರಿದ ಪ್ರಭೆ ಕೀರವಾಣಿ ।। ವಾರತೆಯೇನು ನೂತನವಿದೆ ಪೇಳೆಂದು । ನೀರೆ ಕುಳ್ಳಿರಿಸಿ ಮನ್ನಿಸಲೂ ॥೪॥

ರಾಗ—ಶಂಕರಾಭರಣ—ತ್ರಿವುಡೆತಾಳ

ರಾಜೀವಾಂಬಕಿ ರಾಜಶೇಖರಿ । ಸೋಜಿಗವನೊಂದೊರೆವೆ ಲಾಲಿಸು। ರಾಜನಿಂದಿಲಿ ಗೈದ ಕಾರ್ಯವ । ಮಾಜದುಸಿರ್ವೆ ॥೧॥ ಏನಿದೇನಿದು ಮಾನವಂತನು । ಸಾನುರಾಗದಿ ಗೈದ ಕಾರ್ಯಗ । ಳೇನು ನಿನ್ನಯ ಮನಕೆ ಬಾರದ । ಹೀನ ವರ್ತನೆ ಪೇಳಲೇ ॥೨॥

ಭಾಮಿನಿ

ಮಾನುಸೀ ಮಣಿ ಕೇಳು ಬಲ್ಲವ । ರೇನಗೈದರು ಸಹಿಸಿಕೊಂಬರೆ । ಮಾನವತೆಗಿಂದಾದ ಪರಿಭವವೇನ ಪೇಳುವೆನೂ ॥ ಕ್ಷೋಣಿಪತಿ ಮೃಗಕೇಳಿ ಮುಗಿಸುತ । ಹೀನ ಕುಲಜೆ ಪುಳಿಂದ ಕನ್ನೆಯ । ತಾನೆ ವರಿಸುತ ಬಂದಿಹನು ಮುಂದೇನ ಮಾಡುವನೋ ॥೧॥

ರಾಗ—ನೀಲಾಂಬರಿ—ತ್ರಿವುಡೆತಾಳ

ಸತ್ಯವೇ ಸಖಿಯೇ ಪೇಳೂ । ಎನ್ನರಸನು । ಮತ್ತತೆಯಿಂದ ಬಾಳೂ॥ ನಿತ್ಯ ಕೆಡಿಸಲು ಯೋಚಿಸುತ ಉ । ನ್ಮತ್ತನಾದನೆಯಕಟ ಹಾ ವಿಧಿ । ಚಿತ್ತ ಚಂಚಲವಾಯ್ತು ಪೇಳಲಿ । ಮತ್ತಕಾಶಿನಿ ಕೆಟ್ಟೆ ಸಹಜವು ॥೧॥ ಹೊರಳುತ್ತಲಿರೆ ದುಃಖದೀ । ಬಂದನು ನೃಪ । ನರಸಿಯ ಕಂಡು ಮೋಹದೀ॥ ತರಳೆಯರ ಮೌಕ್ತಿಕವೆ ಬಾ ಬಾ । ಕರುಣಿಸಭಯವ ಗೈದ ಕೃತ್ಯಕೆ । ಮರುಗುತಿರುವೆಯ ಬೇಡ ಕೃಪೆಯಿಡು । ಒರೆಯುವೆನು ಬಂದಿರುವ ಕರ್ಮವ ॥೨॥ ಕಾಂತನನಪ್ಪಿ ಪ್ರೇಮದೀ । ಸೌಭಾಗ್ಯ ಸುಂದರಿ । ಭ್ರಾಂತಿಯ ನಾಂತು ಮನದೀ ॥ ಸಂತಸವ ಕೆಡಿಸಿದಿರಿ ರಾಜ್ಯಕೆ । ಮುಂತೆ ಬಹ ಕೇಡೆಣಿಸದಾದಿರಿ । ಕಂತುವಿನ ಕೂರಲಗ ಭ್ರಮೆಯೊಳು । ಚಿಂತೆ ಹೆಚ್ಚಿತೆ ಕಾಂತ ಮನಸಿಗೆ ॥೩॥ ದುಗುಡ ಬೇಡೆಲೆ ಬಾಲೆ ಕ್ಷಮಿಸಿದನೂ । ನಾ ಗೈದ ತಪ್ಪನು । ಮಗನ ಪ್ರೇಮವ ಬಿಡೆನು ಸಹಿಸಿದನೂ ॥ ಸುಗುಣೆಯಳಕಂಡಧಿಕ ಮೋಹದಿ । ಮೃಗ ವಿಲೋಚನೆ ಕರೆದು ತಂದೆನು । ವಿಗಡವೆಣಿಸದೆ ಪಾಲಿಪೆನು ದಿಟ । ನಗು ನಗುತ ನೀನೊಲಿದು ಕೃಪೆಯಿಡು ॥೪॥

ವಾರ್ಧಿಕ್ಯ

ವಾದವೇರುತ್ತಿರಲು ದಿನಪ ತೇಜದಿ ಗುರುವು । ಸಾಧು ಸಿದ್ಧಾಂತ ಕೀರ್ತೀಶ್ವರನು ಬರೆ ಕಂಡು । ವೋದದಿಂ ಪೊಡಮಡಲು ಹರಸುತ್ತ ಧರಣಿಪನ । ಮೊಗ ನೋಡಿ ನಗುತಿರ್ದನೂ ॥ ಖೇದದಿಂ ಶ್ರೀಯಲಾದೇವಿ ಪೇಳಿದಳಾಗ । ಹೇ ದಯಾಂಬುಧಿ ಬ್ರಹ್ಮ ವ್ರತಧಾರಣೆಗೆ ದೀಕ್ಷೆ । ಸೀದಯದಿ ಪಾಲಿಸೆಂದೆನಲಾಗ ಮುನಿ ಮೌಳಿ ನಗುತೆಂದ ಶಾಂತನಾಗೀ ॥೧॥

ರಾಗ—ಕೇತಾರಗೌಳ—ಅಷ್ಟತಾಳ

ದೇವಿ ನಿನ್ನಯ ಚಿತ್ತ ನೊಂದಿಹುದರಿತೆನು । ಮಾಯೆಯಾವರಣದಲೀ ॥ ಜೀವಿಗಳಿಹವಿಂತು ಸುಖದುಃಖ ಸಮವೆಂದು । ಭಾವಿಸಬೇಕು ನಾವೂ ॥೧॥ ಜಿನದತ್ತ ಬಾಲಕನವನತ್ತ ಸೋಡುತ್ತ । ದಿನ ಕಳೆ ಭಾಗ್ಯವತೀ ॥ ಮನ ಪಕ್ವವಾಗಲು ದೀಕ್ಷೆ ಕೈಗೊಳ್ಳುವು । ದನುಪನು ಕಾರ್ಯವೈಸೇ ॥೨॥ ಧರಣಿಪ ನುಡಿದನು ತರಳಗೆ ರಾಜ್ಯದ । ಪರಮಾಧಿಕಾರವನೂ ॥ ವಿರಚಿಪೆನೀಕ್ಷಣ । ಕರಸುವೆ ಸಭೆಯನ್ನು । ಸರುವರ ಮಧ್ಯದಲೀ ॥೩॥

ಭಾಮಿನಿ

ಗುರುವರನು ಅಸ್ತೆನಲು ಬಳಿಕಾ । ಧರಣಿಪತಿ ಸಭೆ ನೆರಹಿ ಸಕಲರ । ನೆರವಿ ಮಧ್ಯದಿ ಘೋಷಿಸಿದ ಜಿನದತ್ತನನು ಕರೆದೂ ॥ ಧರೆಯನೀತಗೆ ಧಾರೆಯೆರೆದೆನು । ಪೊರೆವ ಮುಂದಕೆ ರಾಜನಾಗಿಯೆ । ಹಿರಿತನದಿ ಸೇವಿಪುದು ಸಕಲರು ಸಂಪ್ರದಾಯದಲೀ ॥೧॥

ರಾಗ—ಸೌರಾಷ್ಟ—ತ್ರಿವುಡೆತಾಳ

ಮೊಳಗಿಡುವು ದುಂದುಭಿಗಳಾಕ್ಷಣ । ತಳಿದರಕ್ಷತೆಗಳನು ಬಾಲಗೆ । ಪೊಲಿದು ಕಪ್ಪವನಿತ್ತು ಮಣಿದರು । ಒಲವಿನಿಂದಾ ॥೧॥ ನಾರಿ ಶ್ರೀಯಲದೇವಿ ಸಂತಸ । ವೇರಿ ನಲಿಯುಲು ಚಾರು ಮುನಿಪನು । ಭೂರಿ ವರಗಳನಿತ್ತು ಹರಸಿದ ಧೀರನನ್ನೂ ॥೨॥

ಅಂಕ ೨

ವಾರ್ಧಿಕ್ಯ

ಇರಲಿತ್ತ ಹರುಷದೊಳು ಗುರುದಯೊದಳಾಕುವರ । ಧರಣಿಪತಿ
ಯನು ಸೇರಿ ಪದ್ಮಿನಿಯು ಪಡೆದಳಾ । ತರಳ ಕುಂತಳ ತೇಜನನು ಕಂಡು
ನೃಪನವಗೆ ಮಾರಿದತ್ತಾಭಿದಾನಾ ॥ ವಿರಿಸಿ ಸಂತಸದಿ ವನಕೇಳಿ ರತಿಕ್ರೀಡೆ
ಮ । ತ್ತಿರದೆ ಚದುರಂಗಾದಿ ಪರಿ ಪರಿಯ ಭೋಗದಿಂ । ವರ ವಿಲಾಸದಿ
ಮಗ್ನನಾಗಿರಲು ಒಂದು ದಿನ ಸಾಯಾಂತರದ ಸಮಯದೀ ॥೧॥

ರಾಗ—ಪೂರ್ವಿ—ಅಷ್ಟತಾಳ

ಮಣೆಯಿಟ್ಟು ಪಗಡೆಯ ಆಟವಾಡಿದರೂ । ತಣಿಯದು ಮನವಿಂದು ನೀವು ಕೋವಿದರೂ ॥ ದಣಿದಂತೆ ತೋರ್ಪುದು ನಾಥ ನೂತನವೂ । ಎಣಿಕೆ ಎಲ್ಲಿದೆ ನಿಮಗಿನಿತಿಲ್ಲ ಮನವೂ ॥೧॥ ಪ್ರೀತಿ ಪದ್ಮಿನಿ ಕೇಳೆ ಪೋಸದ ಸಮಯಾ । ಆತುರವೇನು ಆಡುವುದೇನು ನ್ಯಾಯಾ ॥ ನೀತಿಯಲ್ಲಿದು ಕಾಲವಲ್ಲ ಭೋಜನವಾ । ನಾ । ತೀರಿಸುತ ಬಹೆ ದಯೆಗೈವುದನುವಾ ॥೨॥ ರಮಣ ಕೇಳರಿಕೆಯು ನನ್ನಯ ಗೃಹದೀ । ತಮಗಾರೋಗಣೆಗೆ ಸನ್ನಾಹ ಗೈವೆ ಮ ದದೀ । ಭ್ರಮೆ ಬಿಟ್ಟು ಒಡನಾಟದಲ್ಲಿ ಭೋಜನವಾ । ಮಮತೆಯೊಳನುಗ್ರಹಿಸುವುದೀಗ ಚಲುವಾ ॥೩॥ ಆಗದಾಗದು ಕಾಂತೆ ಚಂದ್ರವಂಶದಲೀ । ಆಗಿದೆ ಜನುಮವು ರಾಜತೇಜದಲೀ ॥ ಭೋಗದಾಶೆಯೊಳಿಂತು ಧರ್ಮ ಮೀರುವುದೂ । ಸಾಗದಾಚರಣೆಯೂ ನರಕ ಪ್ರಾಪ್ತಿಪ್ರದೂ ॥೪॥ ಚಂಡಾಲ ಕನ್ನೆಗೆ ಭಾಷೆ ನೀಡಿದಿರೀ । ಮಂಡಲ ಮಧ್ಯದಿ ಧರ್ಮ ವಿಾರಿದಿರೀ ॥ ಚಂಡ ವಿಕ್ರಮರಿಂಗೆ ಧರ್ಮ ಕರ್ಮಗಳೂ । ದಂಡಿಸಲಾರವು ಲೌಕಿಕಾದಿಗಳೂ ॥೫॥ ಸತಿ ಪರಿಗ್ರಹಗಳು ಶಾಸ್ತ್ರಸಮ್ಮತವೂ । ಮತಿ ಮರೆಯುತ ಕಾಲ ತಪ್ಪಿ ಭೋಜನವೂ ॥ ಹಿತಮಿತದಾಚಾರವತಿಕ್ರಮವಹುದೂ । ಕ್ಷಿತಿಯೊಳು ಜಿನಧರ್ಮ ಶಾಸನವಿಹುದೂ ॥೬॥ ಎಲ್ಲವರಂತಲ್ಲ ತಮ್ಮಯ ಮನವೂ । ನಲ್ಲ ಕೇಳೊಲಿದಿರಿ ಶಬರಿಗೆ ದಿಟವೂ ॥ ಬಲ್ಲವರಿನಿತು ಲೌಕಿಕ ಕಟ್ಟಳೆಗಳಾ । ಸೊಲ್ಲನುಸುರಿ ಜಾರಿ ಕೊಳೆ ಬಿಡೆ ಕೇಳಾ ॥೭॥ ಕಾಲ ವಿಾರುವುದೊಂದು ಕ್ರೂರಾಚರಣೆಯೂ । ಮೇಲಲ್ಲಿ ಆರೋಗಣೆಯು ಧರ್ಮಚ್ಯುತಿಯೂ ॥ ಶೀಲ ಸದ್ಗುಣವಂತೆ ಪೇಳ ಬೇಡಿದನೂ । ಮೂಲ ಮಾರ್ಗವ ಬಿಟ್ಟು ಕಪಟವಿದೇನೂ ॥೮॥ ನಾಥ ಮನ್ಮಥ ತೇಜ ಏತಕೀ ತೆರದೀ ॥ ಮಾತನಾಡುವೆ ಪ್ರೇಮಕಿದಿರಲ್ಲ ಜಗದೀ ॥ ಖ್ಯಾತನಜಾಮಿಳ ನೇನಾದ ನೋಡೂ । ಪ್ರೀತಿ ಭಾವಕೆ ಭಿನ್ನತೆಗಳ ನೀಡಾಡೂ ॥೯॥

ಭಾಮಿನಿ

ಯೋಚಿಸಿದ ನೃಪನಧಿಕ ವ್ಯಥೆಯೊಳು । ನೀಚರೊಡನಾಂ ಸೇರಿದೆನು ಗಡ ! ನಾಚಲೇತಕೆ ಹಿಂದೆ ಬೇಡರಕಣ್ಣ ಭಕುತಿಯೊಳೂ ॥ ಯೋಚನೆಗೆ

ಸಿಗದಿರುವ ಮುಕ್ತಿಯ । ದೋಚಿಕೊಂಡಿಹ ಕರ್ಮಬಂಧದೊ । ಳಾಚೆಗಿಹ ಪರಬ್ರಹ್ಮ ವಸ್ತುವಿಗಿಲ್ಲ ದೋಷಗಳೂ ॥೧॥

ರಾಗ—ಸಾಂಗತ್ಯ—ರೂಪಕತಾಳ

ನೀರಜಗಂಧಿ ಶೃಂಗಾರೆಯು ಬಳಿಕ ವೈ । ಯಾರದಿ ಎಡೆಗೈದು ನಯದೀ ॥ ಸಾರಾಯ ಮದ್ಯ ಮೇಲೋಗರ ಮಾಂಸವ । ನೀರೆ ತಂದಿಕ್ಕೆ ಸಂತಸದೀ ॥೧॥ ಸಾಕಾರರಾಯ ಭೋಜನ ಗೈದು ಸತಿಯಳ । ಬೇಕು ಬೇಕಾದಂತೆ ರಮಿಸೀ ॥ ಆಕೆಯ ಮಮತೆಯ ಕಡಲಲಿ ತೇಲಿತು । ಸ್ವೀಕೃತ ಧರ್ಮ ಕರ್ಮಗಳೂ ॥೨॥

ಭಾಮಿನಿ

ಧಾರುಣಿ ನೀ ತೆರದಿ ಧರ್ಮದ । ಸಾರ ನೀಗುತ ಭ್ರಷ್ಟನಾದನು । ಮಾರಲಾಪುದೆ ಭವದ ಬವಣೆಗಳತಿ ವಿಚಿತ್ರವಲೇ ॥ ಚಾರುಪಾಕದ ಪಾಚಕನು ಬಾ । ಯಾರಿ ಪಾಕಕೆ ಮಾಂಸ ಸಿಗದಿರೆ । ಭೂರಿ ಚಿಂತೆಯ ತಳೆದು ವ್ಯಸನದಿ ಯರಸುತ್ತೈ ತಂದಾ ॥೧॥

ರಾಗ—ಭೈರವಿ—ಝಂಪೆತಾಳ

ಸೋತುದೀ ಜೀವನವು । ಯಾತಕಿದು ಬೇಡ್ಯಾತು । ಮಾತಾಡಿ ಫಲವಿಲ್ಲ । ಘಾತುಗುಂದಿದೆನೂ ॥೧॥ ಪರಸೇವೆಯೊಳು ತನುವ । ನಿರತ ಸವೆಸಿದೆನಯ್ಯೊ । ಸರುವ ಪ್ರಾಣಿಗಳರಸುವ ಭರದಿಂದ ತರಿದೇ ॥೨॥ ಧರಣಿ ಹೊರಳ್ಳೆ ನನ್ನಾ । ಪರಗತಿಗೆ ಬಾಹಿರನು । ನರಕದಲಿ ಹೊರಳುವುದೆ । ವರ ಕರ್ಮಫಲವೂ ॥೩॥ ಇಂದಿಲ್ಲವಾಗಿಹುದು । ಚಂದವಾಗಿಹ ಮಾಂಸ । ಮುಂದೇನ ಗೈಯ್ಯುವೆನು । ಮಂದಮತಿಯಾದೇ ॥೪॥

ಭಾಮಿನಿ

ಏನ ಮಾಡಲಿಯಕಟ ಮಾಂಸ ವಿ । ಹೀನ ಪಾಕವ ರಚಿಸೆ ಶಿಕ್ಷಿಸ । ಕ್ಷೋಣಿಪತಿಗೇನೆಂಬೆ ಹಾ ವಿಧಿ ಎಂತು ಬಾಳುವೆನೂ ॥ ತಾನಧಿಕ ದುಮ್ಮಾನದೊಳು ಬರ । ಲಾ ನದೀ ತೀರದೊಳು ಶೂಲದಿ । ತಾನೆ ಕಂಡನು ನರ ಶವವ ವಿಸ್ಮಯದಿ ಬಳಿ ಸಾರೀ ॥೧॥

ರಾಗ— ಶಂಕರಾಭರಣ— ತ್ರಿವುಡೆತಾಳ

ಆದುದಾಗಲಿ ಶವವನೊಯ್ಯುತ । ಮೋದ ನೀಡುವ ಪಾಕಗೈಯ್ಯುವೆ । ಮೇದಿನೀಶಗೆ ತೃಪ್ತಿ ಪಡಿಸುವೆ । ಬಾಧೆ ಬಂದರೆ ತಾಳುವೇ । ಖೇದವೇಕೇ॥

ವಾರ್ಧಿಕ್ಯ

ಪೆಣನ ಕೆಳಗಿಳಿಸಿ ತಾ ಖಂಡಗಳ ಕತ್ತರಿಸಿ । ಮನದಿ ಹಿಗ್ಗುತ ಪಾಕ ಶಾಲೆಗೈತಂದಾಗ । ಹನುಮತದಿ ಶಾಕ ಪಾಕಾದಿಗಳ ರಚಿಸುತ್ತ ರಾಜ ದಂಪತಿಗಿಕ್ಕಲೂ ॥ ಘನ ಹರುಷವಲಿ ಸವಿದು । ಬಹು ರುಚಿಯದಾಗಿರಲು । ಮನ ಮೆಚ್ಚಿ ಭೂಪತಿಯು ಪಾಚಕನ ಕರೆದೆಂದ । ನೆನಗೆ ನೀ ಪೇಳೆಂದು ಪಾಕ ಗೈದಿಹ ಮಾಂಸವೇತರದು ಯಾರೊಳಿತ್ತೂ ॥೧॥

ರಾಗ— ಕೇತಾರಗೌಳ— ಝಂಪೆತಾಳ

ಕೇಳಿ ನೃಪನಡಿಗೆ ಮಣಿದಾ । ಪಾಚಕನು । ಪೇಳಲಾರೆನು ಗೈದುದಾ ॥ ಖೂಳತನವೆಸಗಿರುವೆನೂ । ಕ್ಷಮಿಸುವುದು । ಮೇಲೆ ಯಿಾ ತೆರ ಗೈಯ್ಯೆನೂ ।೧॥ ಬೆದರಬೇಡೆಲೆ ಪಾಚಕಾ । ಮೆಚ್ಚಿದೆನು । ಮುದದೊಳಿಹುದೈಯ್ಯ ಪಾಕಾ । ಯಿದು ತನಕ ನಾನು ಕಾಣೇ । ಈ ತೆರದ । ಮಧುರ ಮಾಂಸವ ನಿನ್ನಾಣೇ ॥೨॥ ಕಾಲ ಮಿಾರಿದರು ಮಾಂಸಾ । ದೊರಕದಿರೆ । ತಾಳಿದೆನು ಮನದಿ ರೋಶಾ ॥ ಪೇಳಲಾರಿಹರು ನನಗೇ । ಪೊರಟೆ ನಾ । ಲೀಲೆಯೊಳು ಪುಡುಕಿ ಹೀಗೇ ॥೩॥

ಭಾಮಿನಿ

ಹೊತ್ತು ಮಿಾರಿತು ತಮ್ಮ ಭೀತಿಗೆ । ಮತ್ತೆ ತಂದೆನು ಶೂಲದಲಿ ಮಡಿ । ಯುತ್ತ ಜೋಲುವ ಶವವ ಮಾಡಲದೇನು ದುರ್ವಿಧಿಯೂ ॥ ಚಿತ್ತದಲಿ ಶಾಂತಿಯನು ತಾಳುತ । ಕುತ್ತದಿಂದೀಗೆತ್ತಿ ಪಾಲಿಸೆ । ನುತ್ತಲೆರಗಿದ ಬಾಣಸಿಗನನು ಎತ್ತಿ ಪೇಳಿದನೂ ॥೧॥

ರಾಗ— ಸುರುಟಿ— ಏಕತಾಳ

ಭಲ ಭಲ ಬಲು ಜಾಣಾ । ನಿನ್ನಯ । ಸುಲಲಿತ ಪಾಕವನಾ ॥ ಬಲು ಮೆಚ್ಚಿದೆ ನಿರ್ಭಯನಾಗಿರು ನೀ । ಕಲೆಯೊಳು ಬಲ್ಲಿದ ನಳನಿಂ ಮಿಗಿಲೈ

॥೧॥ ನಿತ್ಯವು ನರಮಾಂಸಾ । ತಾರ್ಕೈ । ಚಿತ್ರಕೆ ಬಲು ತೋಷಾ ॥ ಉತ್ತಮ ವಿದು ನಿನಗೊತ್ತಿ ಪೇಳ್ವೆ ಮುಂ । ದೊತ್ತು ನೀ ಹೊತ್ತೊತ್ತಿಗೆ ದಯಪಾಲಿಸು ॥೨॥

ವಾರ್ಧಿಕ್ಯ

ಪಾರಿತೋಷಕವಿತ್ತು ಆಜ್ಞೆ ಗೈಯ್ಯಲು ಬಳಿಕ । ಭೂರಿ ಹರುಷದಿ ಪಾಕದಾಚಾರ್ಯನಿರುತಿರಲು । ನಾರಿ ಪದ್ಮಿನಿಯಿಂದ ಬೀಳ್ಕೊಂಡು ನೃಪ ವರನು ಸಾರಿದನು ರಾಜಸಭೆಗೇ ॥ ಚಾರು ಸೌಭಾಗ್ಯ ಬಿರುದುಗಳಿಂದ ಸುಕುಮಾರ । ಏರಿ ಕುದುರೆಯು ಓತನ ಸಭೆಗೆಂದು ಬರುತಿರಲು । ದೂರ ದಲಿ ಕಂಡು ಪದ್ಮಿನಿ ವಿಸ್ಮಯವ ತಾಳಿ ಸಖಿಯೊಡನೆ ನುಡಿದಳಾಗಾ ॥೧॥

ರಾಗ—ಸಾರಂಗ—ಅಷ್ಟತಾಳ

ಯಾರಮ್ಮ ಸಖಿಯೇ ಪೇಳೂ । ತುರಗವೇರ್ದ । ಧೀರನಾ ನೋಡು ತಾಳೂ ॥ ಯಾರಿವನಧಿಕ ಶೃಂಗಾರ ಮನೋಹರ । ಊರೆಲ್ಲ ಪೋಪನಾ । ಕಾರಿಯವೇನಿದೆ ॥೧॥ ಪೊಸತೊಂದನುಸುರುವಿರೀ । ಚೋದ್ಯವಿದೇನು । ಕುಸುಮಾಕ್ಷಿ ವರ್ಣಿಪಿರೀ ॥ ವಸುಧೀಶ ಸುಕುಮಾರ । ಜಿನದತ್ತನಲ್ಲವೆ । ಉಸುರುವದೇನಿದೂ ॥೨॥ ಸತ್ಯವೆ ಸಖಿಯೆ ಪೇಳೂ । ತರುಣನೀತ । ಚಿತ್ತದೊಲ್ಲಭನೆನ್ನೊಳೂ ॥ ಕೃತ್ರಿಮ ಗೈದು ಪೇಳದೆ ಗುಪ್ತವಿರಿಸಿಹ । ವೃತ್ತಾಂತ ಗಹನಗಳೂ ॥೩॥ ಗಹನವೇನಿದು ಪೇಳಮ್ಮಾ । ಪೇಳ್ದರೆ ನೀನು । ಮಹಿಪಾಲನನ್ನು ಮುನ್ನಾ ॥ ಸಹಜದಿ ವರಿಸಲು ಮನ ಮಾಡೆ ನೆನುತಲಿ । ಕುಹಕವ ನೆನೆದ ಚಿನ್ನಾ ॥೪॥ ನಿಜ ನಿಜ ಧರಣಿಪಾಲಾ ಮೋಸವ ಗೈದ । ಭಜಕನು । ಧರ್ಮಶೀಲಾ ॥ ಸುಜನನೆಂದೆನ್ನನು । ಋಜುಪಥ ಬಿಡಿಸಲು । ತ್ಯಜಿಸುತ ಸಕಲರ ಭಜಿಸಿದೆನೀತನ ॥೫॥

ಭಾಮಿನಿ

ಹಾ ಗುಣಕಟ ನರನಾಥ ನನ್ನನು । ಹೇಯ ಕಾಮುಕನಾಗಿ ಕೆಡಿಸಿದ। ಮಾಯೆಯೊಳು ಬಹು ವಿಧದಿ ಭಾಷೆಯ ಗೈದನಂದಿನಲೀ ॥ ಕಾಯುವವ ರಾರಿಹರು ತರಳಗೆ । ರಾಯಪಟ್ಟವದೆಂತು ಸಿಗುವುದು । ಪಾಯುವನು ನಾ ಕಾಣೆ ಹಗೆಯಾಗಿಹನು ಜಿನದತ್ತಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಚಿತ್ತಾಪಹಾರಿಣಿ ನೀ ಕೇಳು ಕಲ್ಯಾಣಿ । ಉತ್ತಮವಿಹುದೊಂದು ಬಗೆಯಾ ॥ ಬಿತ್ತರಿಸುವೆ ನಮ್ಮ ಕಾಂತ ಬಂದಾಗಲು । ಮತ್ತೆ ನೀ ವರವ ಬೇಡೆರಡೂ ॥೧॥ ಹಗೆಯಾದ ಜಿನದತ್ತನನು ಕೊಲೆಗೈಯ್ಯುತ್ತ । ಮಗನಾದ ಮಾರಿದತ್ತನಿಗೇ ॥ ಜಗದೇಕಪತಿ ಪಟ್ಟ ವಿರಚಿಸೆ ಕೇಳಿಕೊ । ವಿಗುವರಿಯದು ಕಾರ್ಯ ನೋಡು ॥೨॥

ವಾರ್ಧಿಕ್ಯ

ಚದುರೆಯಾಡಿದ ನುಡಿಯನಾಲಿಸುತ ತೋಷದಿಂ । ವಿಧುಮುಖಿಯು ಚಪಲಚಿತ್ತದಿ ಬಹಳ ದುಗುಡದಿಂ । ಮುದದಿಂದ ಮಂಚಮನ್ನೇರಿ ಸರ್ವಾಭರಣ ಬಿಸುಟು ದುಃಖಾರ್ತಳಾಗೀ ॥ ಕುದಿದು ಕೋಪಾಗ್ನಿಯೊಳು ಧರಣಿಪನ ಶಪಿಸುತಂ । ಅಧಿಕ ತರ ಉದರ ವೇದನೆಯೆಂದು ನಟಿಸುತಂ । ಸುದತಿಮಣಿ ಮಲಗಿರಲು ಧರಣೀಶ ನಡೆತಂದ ಪದ್ಮಿನಿಯು ಬಳಿಗೆ ಬಳಿಕಾ ॥೧॥

ಕಂದ

ಕಂಡನು ಸತಿ ದುಮ್ಮಾನದಿ । ಚಂಡಿಕೆ ಸಹಿತಲಿ ಮುಸುಕಿನೊಳಿರಲವನಾಗಂ ॥ ಭಂಡಾಟವಿದೇನೆನುತಂ । ಮಂಡೆಯನೆತ್ತುತ ನುಡಿಸಿದ ವಿಸ್ಮಯದಿಂದ ॥೧॥

ರಾಗ—ಕಲ್ಯಾಣಿ—ತ್ರಿವುಡೆತಾಳ

ನೂತನ ಬಗೆಯಿದೇನೇ । ಕೋಕಿಲಗಾನೆ ॥ಪ॥ ಏತಕೀ ಪರಿ ವ್ಯಸನ ತಾಳುತ । ಮಾತನಾಡದೆ ಕಾತರಿಸುತಿಹೆ । ಪ್ರೀತೆ ಪೇಳೆನ್ನಾಣೆ ಸಲಿಸುವೆ । ಸೋತೆ ಪದ್ಮಿನಿ ಖಾತಿ ಬಿಡು ಬಿಡು ॥೧॥ ಸಾಕೀಗ ಉಪಚಾರವೂ । ತಿಳಿದೆನೆಲ್ಲ । ಬೇಕಿಲ್ಲ ವ್ಯವಹಾರವೂ ॥ ಲೋಕವರಿಯಲು ತಂದಿರೆನ್ನನು । ಯಾಕೆ ಕೊಟ್ಟನೊ ಪಿತನು ಧೂರ್ತತೆ । ಸಾಕರಿಪ ಧರ್ಮಾಂಧರೆಂಬುದ । ಜೋಕೆಯೊಳು ತಿಳಿಯದೆ ನಿರರ್ಥಕ ॥೨॥ ಏನಾಡುತಿರುವೆ ನೀನೂ । ಸುಖದೊಳಿಂತು । ನ್ಯೂನತೆ ಬಂದುದೇನೂ ॥ ಮಾನುನೀ ಜರೆಯಲೇನುವಿ । ಧಾನ ಚಿತ್ತದಿ ಬಗೆದು ಬರಿದೇ । ಸಾನುರಾಗದಿ ಬೇಡು ಕೊಡುವೆನು । ಹೀನನಲ್ಲ ಉದಾರಿ ನಂಬಿಕೊ ॥೩॥

ಭಾಮಿನಿ

ನೀರ ಮೆಚ್ಚಿದೆ ಧರ್ಮವಿಸ್ತರ । ವೀರ ಪಾಲಿಪೆನತುಳ ಪ್ರಜೆಗಳ । ಸೇರಿ ಸೇವಿಪ ಚರಣಕಿಂಕರಿಗೆರಡು ವರಗಳನೂ ॥ ಭೂರಿ ಕೃಪೆಯೊಳು ನೀಡು ಮುಂದಿನ । ದಾರಿ ತೋರುವುದೆನಲು ಹರುಷದಿ । ನಾರಿಯಳ ನಂಬಿಸುತ ಕೇಳೆನಲೆಂದಳಬುಜಾಕ್ಷಿ ॥೧॥

ವಾರ್ಧಿಕ್ಯ

ಧಾರುಣಿಪ ಕೇಳು ಯುವರಾಜನಂ । ಸಂಹರಿಸಿ । ಸೇರಿಸೈ ಮಾರಿ ದತ್ತ್ರಗೆ ಸರ್ವಸಂಪದವ । ಕಾರಣಿಕ ಪೇಳ್ದ ಭಾಷೆಯ ಸಲಿಸಿ ಕಾಯ್ದುಕೊಳು ವಂಶ ಗೌರವವೆಂದಳೂ ॥ ನಾರಿಯಿಂತೆನೆ ಕೇಳಿ ಬರಸಿಡಿಲು ಬಡಿದಂತೆ । ಭೂರಮಣ ದುಗುಡದಲಿ ಹಾಯಕಟ ವಿಧಿಯೆ ಸುಕು । ಮಾರನನು ಕೊಲಲೆಂತು ಪೇಳಿದೆಯ ಭಾಮಿನಿಯೆ ಬಾರದೇ ದಯೆಯೆಂದನೂ ॥೧॥

ವಾರ್ಧಿಕ್ಯ

ಕಾಮುಕತೆಯಿಂದ ಬಾಯಿಯ ತೆರೆದು ಬಹುವಿಧದಿ । ಸೀಮೆಗತಿ ಶಯವಾದ ಆಮಿಷವ ತೋರುತ್ತ । ಪ್ರೇಮಕಾಮಕೆ ಸಕಲ ಸೌಭಾಗ್ಯ ಮಾರಿ ಮಾಯಾಜಾಲದಿಂದ ಬಲೆಯಾ ॥ ಸೋಮಾರ್ಕರಿರುವನಕ ಕುಲ ಕೀರ್ತಿ ಉಂಟೆನುತ । ಈ ಮಹಾ ಕುಟಿಲತೆಯ ಸಾರಿ ವಂಚನೆ ಗೈದ । ಕಾಮನೆಗೆ ಮಗನ ಬಲಿ ನ್ಯಾಯಸಮ್ಮತವಿರಲು । ನೋಯಲೇಕಿನಿತು ಬರಿದೇ ॥೧॥

ರಾಗ—ತೋಡಿ—ಅಷ್ಟತಾಳ

ಥರವಲ್ಲ । ಕಾಂತೆ ಥರವಲ್ಲ ॥ ತರವಲ್ಲವಿದು ವಂಶ ರತುನ ಬಾಲಕನಾ । ಮರುಕವಿಲ್ಲದೆ ಬಲಿ ಕೇಳುವ ಹದನಾ ॥ ಸಿರಿವಂತೆ ಪದ್ಮಿನಿ ಯೋಚಿಸಿ ನೋಡು । ಕೊರತೆಯಲ್ಲವೆ ಸತಿ ಧರ್ಮ ಕಾಪಾಡೂ ॥೧॥ ಕ್ಷಣಿಕ ಸುಖಕೆ ಮನ ಸೋತು ಮೈಮರೆದೂ ॥ ಜನಪದ ಧರ್ಮದ ಸಾರವ ತೊರೆದೂ ॥ ಘನವಾದ ಭಾಷೆಯನಾಡಿ ತಪ್ಪುವುದೂ । ಎಣಿಸಿಕೊ ನರಕವೆ ಸಾಧ್ಯವಿದಹುದೂ ॥೨॥

ವಾರ್ಧಿಕ್ಯ

ಬೇಡ ಬೇಡೆಲೆ ಕಾಂತೆ ಮಾಡದಿರು ಮನವನೀ । ಡಾಡು ಬಾಲನ ಬಲಿಯ ಬೇಡಿಕೊಂಬೆನು ದಯವ । ಮಾಡೆನ್ನ ಮೇಲೆ ಸೌಂದರ್ಯಸಾಗರೆ ಗುಣಾನ್ವಿತೆ ಕರುಣೆದೋರೆನಲ್ಕೇ ॥ ಬೇಡಿದುದ ನೀಡಲಾರದೆ ಮರುಕತನ ವಾಡಿ । ಪಾಡ ಕೆಡಿಸುವಿರ್ರೈಸೆ ಕಳುಹಿ ಪಿತನೆಡೆಗಾಗಿ । ರೂಢಿಪತಿ ನಿಮಗಾಗಿ ಆತ್ಮ ಬಲಿದಾನದಿಂ ವೋಡಿಯಿದನುತ್ತರಿಸುವೇ ॥೧॥

ರಾಗ—ನೀಲಾಂಬರಿ—ಏಕತಾಳ

ರಾಜಶೇಖರ ಕೇಳುತಾ । ದುಃಖದಿ ನೊಂದ । ಹಾ ಜಿನದತ್ತ ಖ್ಯಾತಾ॥ ಮೂಜಗ ಮಲ್ಲನ । ತೇಜ ಸೌಂದರ್ಯನ । ಹಾ ಜಿನೇಶ್ವರ ಸ್ವಾಮಿ । ಹೇಗೆ ಕೊಲಿಸಲಿಂದು ॥೧॥ ಬಳಲಿ ಮೂರ್ಛೆಯೊಳೊರಗೇ । ಕಾಣುತ ನಾರಿ । ಬಳಿ ಸೇರಿ ಉಪಚರಿಸೇ ॥ ಕಳವಳಿಸುತ ಪಾಕ । ನಿಳಯಧಿಕಾರಿಯು । ಬಲುತರ ದುಗುಡದಿ । ತಲೆ ಬಾಗಿ ಬಂದನು ॥೨॥

ಭಾಮಿನಿ

ಕಾಮಿನಿಯು ಪಾಚಕನನೀಕ್ಷಿಸಿ । ಏನಧಿಕ ವ್ಯಥೆಯಾಂತೆ ಪೇಳೆನೆ । ತಾನು ವಿನಯದಿ ನುಡಿದ ಬಂದಿಹ ಬವಣೆಗಳ ಬಳಿಕಾ ॥ ಮಾನವತಿ ಬಂದೆಡರ ಪೇಳಲ । ದೇನು ಘಟಿಪುದೊ ನುಡಿಯಲಾರೆನು । ಹೀನ ಚಾಕರಿ ಸಾಕು ಕರುಣಿಸು ತೆರಳುವೆನು ನಾನೂ ॥೧॥

ರಾಗ—ಸವಾಯ್—ಏಕತಾಳ

ನಡೆದುದ ನುಡಿಯದೆ ದಡಬಡಿಸುವೆ ನೀ । ನುಡಿ ನುಡಿ ಬಂದಿಹ ಬವಣೆಗಳಾ ॥ ತಡೆಗಳನೀಕ್ಷಣ । ಹೊಡೆದೋಡಿಪೆನಾ । ಪಡಿಸುವೆ ಶುಭ ಸಂತೋಷಗಳಾ ॥೧॥ ಸೋತೆನು ನಿತ್ಯವು ಯಾತನೆಪಡುತಿಹೆ । ಪ್ರೀತಿಯ ಪಾಕಕೆ ನರಮಾಂಸಾ ॥ ಏತಕೊ ದೊರಕದು । ಭೀತಿಯು ರಾಜ್ಯದಿ । ನೀತಿಯು ತೊರೆಯುತ ಹಬ್ಬಿಹುದೂ ॥೨॥ ಇಂದೀ ವರೆಗಿದ । ಚಂದದೊ ಳೆಸಗಿದೆ । ಮುಂದೆನಗಸದಳವೀ ಕಾರ್ಯಾ ॥ ನಿಂದಿಪರೆಲ್ಲರು । ಬಂದಿದೆ ಮಲಿನತೆ । ಚಂದದಿ ಕಳುಹಿರಿ । ಮಂದಿರಕೇ ॥೩॥

ರಾಗ—ದೇಶಿ—ಅಷ್ಟತಾಳ

ಕೇಳಯ್ಯ । ಜಾಣ । ಕೇಳಯ್ಯ ॥ ಕೇಳಯ್ಯ ಜಾಣ ನಾ ಪೇಳುವ ನುಡಿಯ । ಜಾಲವಲ್ಲಿದು ಸರ್ವದೇಳಿಗೆ ಪರಿಯಾ ॥ಅ॥ ನರಪತಿ ಮರುಳಾದ ನರಮಾಂಸವೆನುತಾ ॥ ಕೊರಗುವನದ ನಿಲಿಸಲು ಮುಂದೆ ಸತತಾ । ಸರಿಯಾದ ದಾರಿಯ ಸೂಚಿಪೆನದಕೇ । ಪರಿಹಾರವೊಂದಿದೆ ನಿನ್ನ ಸಂತಸಕೇ ॥೧॥ ವ್ಯಕ್ತಿಯೋರ್ವನನಾಯ್ದು ಕುರುಹ ಕೊಡುತಲೀ । ನಿತ್ಯವು ಕ್ರಮವಾಗಿ ಕಳುಹುತಲಿರಲೀ ॥ ಮತ್ತೆ ಬಾರದು ಭಂಗ ನಿನ್ನ ವೃತ್ತಿಯಲೀ । ಚಿತ್ರರಿಸುವೆನಿದ ದೊರೆರಾಯನಲ್ಲೀ ॥೨॥

ವಾರ್ಧಿಕ್ಯ

ಲೇಸಾವುದೆನಗೆ ಹಗೆತನವ ಸಾಧಿಸಲಿಂತು । ನೀ ಸಹಾಯವ ಮಾಡಬೇಕೆಂದು ಪಾಚಕಗೆ । ಭಾಸುರಾಂಗಿಯು ಪೇಳ್ದಳತಿ ಗುಪ್ತವಿಧಿಯಿಂದ ಕಳುಹುವೆನು ಜಿನದತ್ತನಾ ॥ ಆ ಸಮಯದಲಿ ತಂದ ನಿಂಬೂಫಲವ ಕಂಡು । ಲೇಸಿನಿಂ ಕೊಂದು ಪಾಕವ ಗೈಯ್ಯೋ ವಿಧಿಯಂತೆ । ಮೋಸವೇನಿದೆ ನೃಪತಿಯಾಜ್ಞೆ ದೊರಕುವುದದಕೆ ಕ್ಲೇಶಕೆಡೆಯಿಲ್ಲವೆನಲೂ ॥೧॥

ರಾಗ—ತೋಡಿ—ರೂಪಕತಾಳ

ಬೆರಗಾದ ಪಾಚಕ ತರುಣಿಯು ಹೂಡಿದ । ಪರಿ ಪರಿ ತಂತ್ರಗಳೆಣಿಸೀ ॥ ಧಿರುರೆ ಚಂಡಾಲಿನಿ ಕರುಣೆ ಹೀನೆಯು ನಿಜ । ತರಳನ ಕೊಲೆಗೈವಳಮಮಾ ॥೧॥ ಮಾತನಾಡದೆ ನಿಂದ । ಪಾಕಕೋವಿದ ಕೇಳು । ಏತರ ಮನವಿದೆ ದಿಟದೀ ॥ ಖ್ಯಾತಿ ನಿಮ್ಮಯ ನುಡಿ ಪ್ರೀತಿಯಿಂ ನಡೆಸುವೆ । ಭೀತಿಯಿಲ್ಲೆನಗೆಂದನವನೂ ॥೨॥ ನುಡಿಗಳಿಂತಾಗಲು ಪೊಡವಿಯೊಳುರುಳಿದ । ಪೊಡವಿಪ ಕಂಗಳ ತೆರೆದೂ ॥ ಮಡದಿಯ ಮೊಗ ನೋಡಿ ದುಗುಡದೊಳಿರಲಾಗ । ಸಡಗರದಿಂ ವರ್ಣಿಸಿದಳೂ ॥೩॥

ಭಾಮಿನಿ

ತಾಪಪಡುತಿಹನೀತ ಪಾಚಕ । ಭೂಪರತುನನೆ ಕಳವಳಿಪ ನಪ । ರೂಪವಾಗಿದೆ ಮಾಂಸ ನಿನ್ನಾಜ್ಞೆಯನು ಪಾಲಿಸಲು ॥ ಈ ಪರಿಯ

ಜಂಜಾಟವೇಕೆ ನಿ । ರೂಪವಿೀವುತ ನಿತ್ಯ ಓರ್ವನ । ಸೂಪ ಶಾಲೆಗೆ ಕಳುಹು ಸೀನೆನುತೊಲಿಸಿದಳು ಮನವಾ ॥೯॥

ರಾಗ—ಶಂಕರಾಭರಣ—ತ್ರಿವುಡೆತಾಳ

ಸುದತಿಯಿಂತೆನೆ ನರರ ಮಾಂಸದ । ಮಧುರತೆಗೆ ಬಲು ಹಿಗ್ಗಿದಾ ॥ ಚದುರ ಸಾಕಾರಾಖ್ಯ ಮುದದಲಿ । ಮುದದಿ ನುಡಿದಾ ॥೧॥ ದಿನದಿನದ ಕೊರತೆಗಳ ನೀಗಿಪೆ । ಘನವಿದಲ್ಲಾ ರಾಜಗೆ । ಜನದ ಕೈಯ್ಯ ಜಂಬೀರ ಕಾಣುತ ಕ್ಷಣದಿ ವಧಿಸೂ ॥೨॥ ಮಂದಹಾಸದಿ ತೆರಳು ನೀನೆನ । ಲಂದು ನಮಿಸುತ ಗಮಿಸಲೂ ॥ ಚಂದಿರಾನನೆ ನಗುತ ನುಡಿದಳು ಸುಂದರನೊಳೂ ॥೩॥ ಒದಗಿ ಬಂದಿದೆ ಜೀಯ ಸುಲಭವು । ಮುದದಿ ಕಳುಹಿಸಿ ಪುತ್ರನಾ ॥ ಯಿದು ನಿದಾನವು ಕುರುಹನೀವುತ । ಒದಗಿಸನುವಾ ॥೪॥ ಕೇಳಿ ಭೂಪನ ವದನಕಮಲವು । ನೀಲವರ್ಣಕೆ ತಿರುಗಲೂ ॥ ಭೂಲಲಾಮನು ನುಡಿಯ ದಿರಲಾ । ಬಾಲೆ ತಿಳಿದೂ ॥೫॥

ವಾರ್ಧಿಕ್ಯ

ಕುಂತಿಯಾತ್ಮಜ ಸತ್ಯಕೋಸುಗವೆ ಬಂಧುಗಳ । ಮುಂತೆ ಸಂಹರಿ ಸಿರುಪ ವರ ವಿಭೀಷಣ ಧರ್ಮ । ಪಂಥದಲಿ ಸೋದರರ ವಧೆಗಾಗಿ ದಾಶ ರಥಿಯಂ ಸೇರಿ ಮರ್ದಿಸಿದನೂ ॥ ಇಂತು ದುಃಖಿಸಲೇಕೆ ನರಮಾಂಸ ಭಕ್ಷಕನ । ಪಿಂತೆ ಭೂಸುರರೆಲ್ಲ ಸೇರಿ ಸುಲಭದಿ ಕೊಂದು । ಶಾಂತಿಯಿಂ ಭೀಮಸಿಂ ಪಡೆದಿಹರು ಸುತಸಿಂದ ನಿಮಗದೇ ಗತಿ ಬರ್ಪುದೂ ॥೧॥

ರಾಗ—ಬೇಗಡೆ—ತ್ರಿವುಡೆತಾಳ

ನಾರೀಮಣಿಯ ನುಡಿಗೇ । ಸೋತನು ಭೂಪ । ದಾರೀ ಕಾಣದು ಮನಕೇ ॥ಪ॥ ಘೋರಪಾತಕ ಬರುವುದಿದು ಖರೆ । ಕ್ರೂರಕೃತ್ಯವ ಮಾಡದಿರ್ದಡೆ । ಮಾರಿಯಂದದಿ ನುಡಿವಳೀಕೆ ವಿ । ಕಾರವೀ ಸಂಸಾರ ಸತ್ಯವು ॥೧॥ ಆದುದಾಗಲೆನುತ್ತ ಭಾಷೆಯನೂ । ಪೂರೈಸಿಕೊಡುವೆನು । ಖೇದ ಪಡದಿರು ನಿನ್ನ ಮಾಯೆಯನೂ ॥ ಭೇದಿಸಲು ಆಳವಲ್ಲವೆನುತಿರ । ಲಾದುದೇ ದಯೆ ವರ ಮನೋಹರ । ಸಾಧಿಸಿದೆ ನೀ ತೆರದಿ ಯತ್ನಿಸಿ । ಮೋದವಾಂತೆ ವಿನೋದ ಭಾಪುರೆ ॥೨॥

ಕಂದ

ಇಂತುಸುರಿದ ಮದಿರಾಕ್ಷಿಯ । ಸಂತಸದಿಂದಾ ಧರಣಿಪ ರಮಿಸುತ ಲಿರಲುಂ ॥ ಮುಂತೆಸೆಯುವ ಪೂರ್ವಾದ್ರಿಯೊ । ಳ್ಗಂ ತಾಂ ದಿನಮಣಿ ಯುದಿಸುತ ಮೆರೆದಿರಲಾಗಂ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಉದಯಿಸಲು ದಿನಮಣಿಯು ಪ್ರಭೆಯೊಳು । ಮುದದಿ ಶ್ರೀಯಲ ದೇವಿಯಿರುತಿರೆ ॥ ಚದುರ ಜಿನದತ್ತಾಖ್ಯ ನಮಿಸಲು । ಸುದತಿ ನೋಡೀ ॥೧॥ ಮಗನೆ ಬಾ ಬಾ ವಂಶರತ್ನನೆ । ಸುಗುಣ ದೀಪ ಸುರೂಪ ನಿರ್ಮಲ ॥ ಜಗಕಧಿಕ ಮಂಗಲ ಮನೋಹರ । ವಿಗಡವೈಸೇ ॥೨॥ ವಂದಿಸುತ ಜಿನದತ್ತ ಪೇಳಿದ । ಚಂದದಿಂದಾ ಸ್ನಾನಕೇ ॥ ಕುಂದದೈದುವೆ ಹರಸಿ ಕಳು ಹೆನ । ಲಿಂದುಮುಖಿಯೂ ॥೩॥ ತೊಡೆಯನೇರಿಸಿ ಮುದ್ದು ಕುವರನೆ । ಸಡಗರವು ನಿಜವಾದರೂ ॥ ಪೊಡವಿಪನ ಬಳಿಗೈದುವುದು ಹಿತ । ನಡತೆ ಯಲ್ಲಾ ॥೪॥

ರಾಗ—ನವರೋಜು—ಏಕತಾಳ

ಅಮ್ಮಾಜೀ ಚೋದ್ಯವಿದೂ । ಕೇ । ಳೊಮ್ಮೆಗೆ ನೀ ಪೇಳಿದುದೂ ॥ ಸಮ್ಮಾನವು ಪಿತನೋಲಗವಿಂತಿರೆ । ದುಮ್ಮಾನದ ಕರ್ಮಾಂಗವು ನೂತನ ॥೧॥

ರಾಗ—ಕೇತಾರಗೌಳ—ಅಷ್ಟತಾಳ

ಹಿಂದೆ ಸುನಂದೆಯು ನುಡಿ ವಿಾರಿ ಭುಜಬಲಿ । ಬಂದಿದಿರಾದನಗ್ರ ಜಗೇ ॥ ನಿಂದು ನೋಡುವೆನೆಂದು ನೆನೆದು ತಪಕೆ ಪೋದ । ವಂದವಹುದು ಬೇಡ ಮಗನೇ ॥೧॥

ರಾಗ—ನವರೋಜು—ಏಕತಾಳ

ಪಿತನೆಡೆಗೇ ಸುತನಿಂದೂ । ತಾ । ಹಿತದಲಿ ಪೋದರೆ ಕುಂದೂ ॥ ಮತಿ ಮಹಿಮಂಗತಿಶಯವೇನಿದರೊಳು । ಕ್ಷಿತಿಯೊಳು ಸಕಲಾಗಮ ಪಿತ ವಚನವು ॥೧॥

ರಾಗ—ಮಧುಮಾವತಿ—ತ್ರಿವುಡೆತಾಳ

ನಾಗಕುಮಾರನು ಸ್ವಾರಿಗೆ ಪೊರಟಾಗ । ಆಗದೆನಲು ಪೃಥ್ವಿದೇವೀ॥ ಹೋಗದೆ ಬಿಡೆನೆಂದು ಛಲಗೈದು ತೆರಳುತ್ತ । ಬೇಗೆಯನಿತ್ತುದನರಿಯೋ ॥೧॥

ರಾಗ—ನವರೋಜು—ಏಕತಾಳ

ಗುರುವಚನಾ ಸಾರವನೂ । ನಾ । ನಿರದೆ ಪಾಲಿಸಲದನೂ ॥ ತರಳಗೆ ಮಾತೆಯೆ । ವರದೇವತೆಯೆಂ । ದೊರೆದಿರೆ ಹರಸದೆ । ಕೊರಗುವುದೇನೂ ॥೧॥

ರಾಗ—ಸಾಂಗತ್ಯ—ರೂಪಕತಾಳ

ಎಂದಿನಂತಲ್ಲವೊ ಮಗನೆ ತಾತನ ಚಿತ್ತ । ಯಿಂದೀಗ ಮಲಿನವಾಗಿಹುದೂ ॥ ಸಂದೇಹ ಪುಟ್ಟುತಲಿದೆ ಪಯಣವು ನಿನ । ಗಿಂದಿಗೆ ಬೇಡವೆಂದೆಸುವೇ ॥೧॥

ರಾಗ—ನವರೋಜು—ಏಕತಾಳ

ನಾಡೊಡೆಯನನು ಕಂಡೂ । ನಾ । ಬೀಡನು ಬಿಟ್ಟರೆ ದಂಡೂ ॥ ಓಡಿಸಿ ಬಂದರೆ । ನೋಡುವೆ ಶೌರ್ಯವ । ವೋಡಿಗೆ ಬಾಗೆನು । ಗಾಢದಿ ಪ್ರೋಪೆನು ॥೧॥

ರಾಗ—ಶಂಕರಾಭರಣ—ತ್ರಿವುಡೆತಾಳ

ಆಡದಿರು ಮರಿಯಾನೆ ದುರ್ನುಡಿ । ಬೇಡತಿಗೆ ಮನ ಸೋಲುಕಾ ॥ ಕೇಡ ಚಿಂತಿಸದಿರಸು ನಿಶ್ಚಯ । ಬೇಡ ಮಗನೇ ॥೧॥

ರಾಗ—ನವರೋಜು—ಏಕತಾಳ

ಹಿತ್ತಲ ಬೇಲಿಯೆ ಮುನಿದೂ । ತಾ । ಮುತ್ತುತ ಪೈರನು ಮುರಿದೂ॥ ಅತ್ಯುಗ್ರತೆಯೊಳು ಹಾನಿಯ ಗೈದರೆ । ಎತ್ತಣ ಧರ್ಮವು । ಬಿತ್ತರಿಸೆನಗೇ ॥೧॥

ಭಾಮಿನಿ

ಕಂದನಾಡಿದ ವಿನಯ ವಚನಗ । ಳಂದವನು ನೆರೆ ಪೊಗಳಿ ಗಂಧಸು । ಚಂದನಾದಿಗಳಿಂದು ವಿಶ್ವದಿ ಗುಣದಿ ವೃದ್ಧಿಪುವೂ ॥ ಕುಂದ ತೋರಲು

ಕಂದ

ಇಂತುಸುರಿದ ಮದಿರಾಕ್ಷಿಯು । ಸಂತಸದಿಂದಾ ಧರಣಿಪ ರಮಿಸುತ ಲಿರಲುಂ ॥ ಮುಂತೆಸೆಯುವ ಪೂರ್ವಾದ್ರಿಯೊ । ಳ್ಗಂ ತಾಂ ದಿನಮಣಿ ಯುದಿಸುತ ಮೆರೆದಿರಲಾಗಂ ॥೧॥

ರಾಗ—ಸೌರಾಷ್ಟ—ತ್ರಿವುಡೆತಾಳ

ಉದಯಿಸಲು ದಿನಮಣಿಯು ಪ್ರಭೆಯೊಳು । ಮುದದಿ ಶ್ರೀಯಲ ದೇವಿಯಿರುತಿರೆ ॥ ಚದುರ ಜಿನದತ್ತಾಖ್ಯ ನಮಿಸಲು । ಸುದತಿ ನೋಡೀ ॥೧॥ ಮಗನೆ ಬಾ ಬಾ ವಂಶರತ್ನನೆ । ಸುಗುಣ ದೀಪ ಸುರೂಪ ನಿರ್ಮಲ ॥ ಜಗಕಧಿಕ ಮಂಗಲ ಮನೋಹರ । ವಿಗಡವೈಸೇ ॥೨॥ ವಂದಿಸುತ ಜಿನದತ್ತ ಪೇಳಿದ । ಚಂದದಿಂದಾ ಸ್ಥಾನಕೇ ॥ ಕುಂದದೈದುವೆ ಹರಸಿ ಕಳು ಹೆನ । ಲಿಂದುಮುಖಿಯೂ ॥೩॥ ತೊಡೆಯನೇರಿಸಿ ಮುದ್ದು ಕುವರನೆ । ಸಡಗರವು ನಿಜವಾದರೂ ॥ ಪೊಡವಿಪನ ಬಳಿಗೈದುವುದು ಹಿತ । ನಡತೆ ಯಲ್ಲಾ ॥೪॥

ರಾಗ—ನವರೋಜು—ಏಕತಾಳ

ಅಮ್ಮಾಜೀ ಚೋದ್ಯವಿದೂ । ಕೇ । ಳೊಮ್ಮೆಗೆ ನೀ ಪೇಳಿದುದೂ ॥ ಸಮ್ಮಾನವು ಪಿತನೋಲಗವಿಂತಿರೆ । ದುಮ್ಮಾನದ ಕರ್ಮಾಂಗವು ನೂತನ ॥೧॥

ರಾಗ—ಕೇತಾರಗೌಳ—ಅಷ್ಟತಾಳ

ಹಿಂದೆ ಸುನಂದೆಯು ನುಡಿ ಮಾರಿ ಭುಜಬಲಿ । ಬಂದಿದಿರಾದನಗ್ರ ಜಗೇ ॥ ನಿಂದು ನೋಡುವೆನೆಂದು ನೆನೆದು ತಪಕೆ ಪೋದ । ವಂದವಹುದು ಬೇಡ ಮಗನೇ ॥೧॥

ರಾಗ—ನವರೋಜು—ಏಕತಾಳ

ಪಿತನೆಡೆಗೇ ಸುತನಿಂದೂ । ತಾ । ಹಿತದಲಿ ಪೋದರೆ ಕುಂದೂ ॥ ಮತಿ ಮಹಿಮಂಗತಿಶಯವೇನಿದರೊಳು । ಕ್ಷಿತಿಯೊಳು ಸಕಲಾಗಮ ಪಿತ ವಚನವು ॥೧॥

ರಾಗ—ಮಧುಮಾವತಿ—ತ್ರಿವುಡೆತಾಳ

ನಾಗಕುಮಾರನು ಸ್ವಾರಿಗೆ ಪೊರಟಾಗ । ಆಗದೆನಲು ಪೃಥ್ವಿದೇವೀ॥ ಹೋಗದೆ ಬಿಡೆನೆಂದು ಛಲಗೈದು ತೆರಳುತ್ತ । ಬೇಗೆಯನಿತ್ತುದನರಿಯೋ ॥೧॥

ರಾಗ—ನವರೋಜು—ಏಕತಾಳ

ಗುರುವಚನಾ ಸಾರವನೂ । ನಾ । ನಿರದೆ ಪಾಲಿಸಲದನೂ ॥ ತರಳಗೆ ಮಾತೆಯೆ । ವರದೇವತೆಯೆಂ । ದೊರೆದಿರೆ ಹರಸದೆ । ಕೊರಗುವುದೇನೂ ॥೧॥

ರಾಗ—ಸಾಂಗತ್ಯ—ರೂಪಕತಾಳ

ಎಂದಿನಂತಲ್ಲವೊ ಮಗನೆ ತಾತನ ಚಿತ್ತ । ಯಿಂದೀಗ ಮಲಿನವಾಗಿ ಹುದೂ ॥ ಸಂದೇಹ ಪುಟ್ಟುತಲಿದೆ ಪಯಣವು ನಿನ । ಗಿಂದಿಗೆ ಬೇಡವೆಂದೆ ಸುವೇ ॥೧॥

ರಾಗ—ನವರೋಜು—ಏಕತಾಳ

ನಾಡೊಡೆಯನನು ಕಂಡೂ । ನಾ । ಬೀಡನು ಬಿಟ್ಟರೆ ದಂಡೂ ॥ ಓಡಿಸಿ ಬಂದರೆ । ನೋಡುವೆ ಶೌರ್ಯವ । ನೋಡಿಗೆ ಬಾಗೆನು । ಗಾಢದಿ ಪೋಪೆನು ॥೧॥

ರಾಗ—ಶಂಕರಾಭರಣ—ತ್ರಿವುಡೆತಾಳ

ಆಡದಿರು ಮರಿಯಾನೆ ದುರ್ನುಡಿ । ಬೇಡತಿಗೆ ಮನ ಸೋಲುಕಾ ॥ ಕೇಡ ಚಿಂತಿಸದಿರಸು ನಿಶ್ಚಯ । ಬೇಡ ಮಗನೇ ॥೧॥

ರಾಗ—ನವರೋಜು—ಏಕತಾಳ

ಹಿತ್ತಲ ಬೇಲಿಯೆ ಮುನಿದೂ । ತಾ । ಮುತ್ತುತ ಪೈರನು ಮುರಿದೂ॥ ಅತ್ಯುಗ್ರತೆಯೊಳು ಹಾನಿಯ ಗೈದರೆ । ಎತ್ತಣ ಧರ್ಮವು । ಬಿತ್ತರಿಸೆನಗೇ ॥೧॥

ಭಾಮಿನಿ

ಕಂದನಾಡಿದ ವಿನಯ ವಚನಗ । ಳಂದವನು ನೆರೆ ಪೊಗಳಿ ಗಂಧ ಸು । ಚಂದನಾದಿಗಳಿಂದು ವಿಶ್ವದಿ ಗುಣದಿ ವೃದ್ಧಿಪುವೂ ॥ ಕುಂದ ತೋರಲು

ಸಾಧ್ಯವೇ ಪ್ರೋ । ಗೆಂದು ಹರಸುತ ಕಳುಹೆ ಬಳಿಕಾ । ನಂದದಲಿ ಕರಿಯೇರಿ ಪೊರಟ್ಟೈ ತಂದನತಿ ಜವದೀ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಮುದದಿ ಸಾಕಾರಾಖ್ಯ ಧರಣಿಪ । ವಿದಿತ ಕರ್ಮಾವ ಗೈದು ಸಭೆಗಾ । ನೊದಗಿ ಬರೆ ಸಂತಸವು ರಂಜಿಸಿ । ತದುಭುತದಲೀ ॥೧॥ ಪೊಳಗಿದುವು ಘನ ವಾದ್ಯ ರವಗಳು । ಥಳಥಳಿಸಿ ಮೆರೆದಿರಲು ಓಲಗ । ತಳುವದೆಲ್ಲರು ನೆರೆದು ರಂಜಿಸೆ । ಬಲು ವಿಲಾಸ ॥೨॥ ಪೀರ ಜಿನದತ್ತಾಖ್ಯ ಕರಿಯನು । ಪರಿಸಭೆಗೈತರಲು ಕಂಡಾ । ಭೂರಿ ತೋಷದಿ ಜನತೆ ಜಯ ಜಯ । ಶೂರ ನೆನಲೂ ॥೩॥ ಮಣಿದು ಚರಣದಿ ಭಾವ-ಭಕ್ತಿಯೊ । ಳನಘಮತಿ ಸಿಂದಿರಲು ಕಾಣುತ । ಗುಣನಿಧಿಯೆ ಬಾರೆಂದು ಜನಪತಿ । ಮನದಿ ಕೊರಗೀ ॥೪॥ ಬಾಲರಲಿ ಮೌಕ್ತಿಕವೆ ರತುನಾ । ಹಾರದಲಿ ಮಾಣಿಕ್ಯ ಸಿನ್ನೊಳು । ಪೇಳಲತಿಶಯವಿಹುದು ಸದ್ಗುಣ ಶಾಲಿ ಕೇಳೂ ॥೫॥ ತೆಗೆದುಕೋ ಜಂಬೀರ ವಿದನೀ । ಸುಗುಣಸಿಧಿ ಪಾಚಕನಿಗೀವುತ । ಮಗನೆ ಬಾರೆನಲೊಪ್ಪಿ ಪೊರಟನು ನಗುತ ನಮಿಸೀ ॥೬॥

ಭಾಮಿನಿ

ಸುಪತಿ ಪದ್ಮಿನಿ ತನಯನಾಡಿದ । ವಿಧ ವಿಧದ ಸಾಹಿತ್ಯನೆರಹಿಸಿ । ಮುದದಿ ಬೇಟೆಗೆನುತ್ತ ಶಬರರ ಸೇರಿ ವನದೊಳಗೇ ॥ ಚದುರ ಸಂತಸದಿಂದ ಮೃಗಗಳ । ಸದೆದು ಕಾನನದೊಳಗೆ ಗುಪ್ತದಿ । ಹುದುಗಿ ಕೀಟಲೆ ಗೈವ ಗುಂಪನು ಚದರಿಸುತ ಭರದೀ ॥೧॥

ರಾಗ—ಮುಖಾರಿ—ಏಕತಾಳ

ಬೇಟೆಯಾಡುತ್ತ ಬಂದನಾಗಾ । ಸಂತೋಷದಿಂದ । ಬೇಟೆಯಾಡುತ್ತ ಬಂದನಾಗಾ ॥ಪ॥ ಈಟಿ ಕಠಾರಿ ಗುರಾಣಿ ತೋಮರವ । ನೋಟದಿ ಬಳಸುತ ಕೂಟವ ಕೂಡೀ ॥೧॥ ಕರಡೀ ಸಂಕುಲಗಳ ಕಡಿದಾ । ಸಂಭ್ರಮದಿಂದಾ । ಮೆರೆವಾ ಆನೆಯ ಹಿಂಡ ತರಿದಾ ॥ ವರಾಹ ಚಿರತೆ ಹೆಬ್ಬುಲಿಗಳ ನೊರಗಿಸಿ । ತರಳನು ಮೆರೆದಾವರಣದಿ ಸಹಸೀ ॥೨॥

ಭಾಮಿನಿ

ವೇಳೆಯಾದುದೆನುತ್ತ ನಗರಕೆ । ಮೇಳ ಸಹಿತಲಿ ಪೊರಟು ಬರಲಾ । ಕಾಲದಲಿ ಜಿನದತ್ತ ಪಾಕದ ಶಾಲೆಯೆಡೆಗೆನುತಾ ॥ ಕಾಲುನಡೆಯಲಿ ಬರುವ ಬರವನು । ಶೀಲವತಿ ಕಾಣುತ್ತ ಕೌತುಕ । ಲೋಲನಾಗುತ ತೇಜಿಯಿಂ ಧರೆಗಿಳಿದು ಪದಕೆರಗೀ ॥೧॥

ರಾಗ—ಕಾಂಭೋಜ—ಅಷ್ಟತಾಳ

ಚಿತ್ತವಿಸೀಗೆನ್ನ ಮಾತಾ । ಪುರು । ಷೋತ್ತಮ ಬೆರಗಾದೆ ರಾಜ ಸಂಜಾತಾ ॥ಪ॥ ನೆತ್ತಿ ಸುಡುತಲಿದೆ । ಮತ್ತೆಲ್ಲಿ ಪರಿವಾರ । ಛತ್ರಚಾಮರ ತ್ಯಜಿಸಿ ವೇಗದೊ । ಳೊತ್ತಿ ಪೋಗುವ ತತ್ತ್ವವೇನಿದು ॥೧॥ ಕಾಣಲಿಂ ದಧಿಕ ಕಾಣುವುದೂ । ಚಿತ್ತ । ಜೇನೆ ಬೇಸರಿಕೆಯದೇನು ಬಂದಿಹುದೂ ॥ ಮಾನನಿಧಿಯೆ ಪೊಸ । ತೇನಿದೆಯುಸುರು ನಿ । ದಾನಿಸುತ ಕೃಪೆದೋರಿ ರಕ್ಷಿಸು । ಜಾಣಕೋವಿದ ಹಾನಿಯಾಂತಿರೆ ॥೨॥

ಭಾಮಿನಿ

ಸಂತವಿಸಿ ಸೋದರನ ಬಳಿಕಾ । ನಂತ ಗುಣನಿಧಿ ಪಿತನನುಜ್ಞೆಯ । ನಾಂತು ನಿಮ್ಮಯ ಪಾಕಶಾಲೆಗೆ ತೆರಳುತಿಹೆ ನೋಡೂ ॥ ಮುಂತೆ ಪೋಗುತ ಬಹೆನು ಶೀಘ್ರದಿ । ಕಂತುರೂಪ ವಿಶೇಷವಿಲ್ಲೆನೆ । ಶಾಂತ ಮನ ದಲಿ ನಮಿಸಿ ನುಡಿದನು ಕೇಳು ಬಿನ್ನಪವಾ ॥೧॥

ರಾಗ—ಬೇಗಡೆ—ಅಷ್ಟತಾಳ

ಚಿತ್ತಾವಧಾನ ಪರಾಕೂ । ತವ । ಭಕ್ತನ ಬಿನ್ನಹ ಪಾಲಿಸಬೇಕೂ ॥ಪ॥ ಭೃತ್ಯರಿರದೆ ನೀನು । ಚಿತ್ತದಿ ಮುದವಾಂತು । ಮತ್ತೆ ಪೋಪುದ ಕಿಂತು । ಬಿತ್ತರಿಸುವೆ ನಾನು ॥೧॥ ಮಧು-ಮಾಂಸರುಧಿರ ಹೇಸಿಕೆಯೂ । ನೋಡಿ । ಬೆದರುವೆ ಚದುರನೆ ಖೇದದಾಯಕವೂ ॥ ಮುದದಿಂದ ಪೋಪೆ ನಾ ಸದಯನೆ ಕಳುಹೆನ್ನ । ಕುದಿಗೊಳದೀಗಲೆ ಸದನಕೆ ಪೋಪುದು ॥೨॥ ಮೆಚ್ಚಿದೆ ನಿನ್ನಯ ನುಡಿಗೇ । ಹೀಗೆ । ಉಚ್ಚರಿಸಿದ ಭಾವದುತ್ತಮ ಬಗೆಗೇ॥ ಹೆಚ್ಚಿದೆನೆಲ್ಲೆ ಕಂದ । ಮೆಚ್ಚನಿದನು ಪಿತ । ಸಚ್ಚರಿತರಿಗಿದು । ತುಚ್ಛವೆಂದೆಂದಿಗು ॥೩॥

ಭಾಮಿನಿ

ಆಗದಾಗದೆನುತ್ತ ನುಡಿಯಲು । ಯೋಗ ತಪ್ಪಿಸಲಾರಳವು ತಾ । ಸೀಗ ಬಹೆನಗ್ರಜನೆ ಕೊಡು ಜಂಬೀರವೆಂದೆನುತಾ ॥ ಬೇಗದಲಿ ಕೈಕೊಂಡು ವಂದಿಸಿ । ಸಾಗಿದನು ತಾ ಪಾಕಶಾಲೆಯ । ಕೂಗಿ ಕರೆಯಲು ಪಾಚಕನು ಕಂಡಾಗ ಫಲವನ್ನೂ ॥೧॥

ರಾಗ—ಕೇತಾರಗೌಳ—ಝಂಪೆತಾಳ

ದೊರೆಯು ಸಂಕೇತವಿದನೂ । ಕಂಡಾಗ । ತರಹರಿಸಿ ಪಾಕಭಟನೂ॥ ಅರರೆ ಇಂದೇನು ಚೋದ್ಯಾ । ತೋರುತಿದೆ । ತರಳ ತಂದಿಹ ಕುಚೋದ್ಯಾ ॥೧॥ ಯುವರಾಜನೈಸೆ ದಿಟವೂ । ಮಾಡಲೇ । ನಿವತಂದ ಸಂಕೇತವೂ ॥ ಭುವನೇಶನಾಜ್ಞೆಯಿಹುದೂ । ಪಾಲಿಪುದೆ । ಸುವಿವೇಕ ಕೈಕೊಂಬುದೂ ॥೨॥

ಭಾಮಿನಿ

ಕೂರಸಿಗೆ ಬಲಿಯಿತ್ತು ತರಳನ । ಭೂರಿ ಪಾಕವ ರಚಿಸುತಿರುತಿರೆ । ಪರಿತೇಜಿಯನಾಗಲಾ ಜಿನದತ್ತ ಮಂದಿರವಾ ॥ ಸಾರಿ ಮಾತೆಯ ಚರಣ ಕೊಂದಿಸೆ । ಬಾರೊ ಬಾರೆಂದಾಗ ಮನ್ನಿಸಿ । ನಾರಿ ಬಳಿಯೊಳು ಸೇರಿ ಮಮತೆಯೊಳಾಗ ಪೇಳಿದಳೂ ॥೧॥

ರಾಗ—ಕಲ್ಯಾಣಿ—ತ್ರಿವುಡೆತಾಳ

ಚಂದಿರವದನ ಬಾಲಾ । ಸದ್ಗುಣ ಶೀಲ । ಚಂದಿರವದನ ಬಾಲಾ ॥ಪ॥ ಸುಂದರಾಂಗನೆ ನಿನ್ನ ವದನವು । ಕಂದಿದೇತಕೆ ಬಂದುದೆಲ್ಲಿಂ । ದಿಂದು ನಡೆದಿಹ ವಿವರಗಳನಾ । ನಂದದಿಂದಲಿ ವರ್ಣಿಸೆಂದಳು ॥೧॥ ಪಿತ ನಾಜ್ಞೆಯೊಳು ವೇಗದಿ । ಪೋಪನನಿಂದು । ಪಥ ಮಧ್ಯದೊಳು ಸಂಧಿಸೀ ॥ ಹಿತವಾದ ನುಡಿಯುತ । ಜಂಬೀರ ಫಲಕೊಂಡು । ಅತಿ ಬೇಗ ಸಾರಿದನೂ ॥೨॥ ಪೋಗಿಹ ಸೋದರನೂ । ಮಾರಿದತ್ತ । ಈಗ ನಾ ಮಾಡಲೇನೂ ॥ ಸಾಗುತ್ತ ಜನಕಗೆ । ವೇಗದಿ ಪೇಳ್ದರೆ । ರೇಗುವನಿದು ಸಿದ್ಧ । ಆಗುವುದು ಕೇಳು ॥೩॥

ಭಾಮಿನಿ

ನಾರಿಮಣಿ ಕೇಳುತ್ತ ಬೆದರಿದ । ಳಾರಿಗಳಪ್ಪೈ ವಿಧಿಯ ಮಿಾರ್ವರೆ । ಭೂರಮಣನಿಂತೆಸಗಿದನೆ ಹಾ ಎಂದು ಮರು ಮರುಗೀ ॥ ಧಾರುಣಿಯು ಕಂಪಿಸಲು ಉರುಳುವ । ಭೂರಿ ಕದಳಿಯು ತೆರದೊಳೊರಗಲು । ಕಾರಣವ ಊಹಿಸದೆ ಬಾಲನು ಸೇವೆಗೈಯುತಿರೇ ॥೧॥

ರಾಗ—ನೀಲಾಂಬರಿ—ರೂಪಕತಾಳ

ಹಾ ಮಾತೆ ಜನುಮದ । ಧೀಮಂತೆ ಗುಣಯುತೆ । ನೀ ಮತಿ ತೊರೆ ಯುತ ನೆಲದೀ ॥ ಪ್ರೇಮವ ತೊರೆದಿಂತು । ನೇಮವ ನೀಡದೆ । ಶ್ರೀಮಂತೆ ಬಳಲುವದಾಯ್ತೇ ॥೧॥ ಏಕಿಂತು ಒದಗಿತೊ । ಸಾಕೆಂದು ಬಾಳ್ವೆಯು । ಶ್ರೀಕರಾನ್ವಿತೆ ಪೂಜ್ಯ ಜನನೀ ॥ ಸೋಕಿತೆ ದುರ್ವಿಧಿ । ನೂಕುವೆ ದೇಹವ । ಸಾಕಿನ್ನು ನಾನೇಕೆ ಜಗದೀ ॥೨॥

ವಾರ್ಧಿಕ್ಯ

ಪರಿಪರಿಯೊಳಳಲುತ್ತ ಮರುಗಿ ದುಗುಡದೊಳಿರಲು । ಅರಸಿ ಶ್ರೀಯುಲ ದೇವಿ ಕಣ್ದೆರೆದು ಮುಂದೆಸೆವ । ತರಳನನು ಬಿಗಿದಪ್ಪಿ ವಂಶ ರತ್ನಾಕರನೆ ಮರಳಿ ಬಂದುದು ಭಾಗ್ಯವೂ ॥ ನರನಾಥ ನಿನ್ನೊಡನೆ ಜಂಬೀರ ಫಲವಿತ್ತು । ತೆರಳಿಸಿದನ್ಯಾತಕೆಂಬೆನೆ ದೇವಿ ಪದ್ಮಾಂಬೆ । ಚಿರಜೀವಿ ನಿನ್ನನುಳಿಸಿದಳೈಸೆ ಶರಣೆಂಬೆ ನಾನೇ ಸುಭಾಗ್ಯಯುತಳೋ ॥೧॥

ರಾಗ—ಸಾರಂಗ—ಅಷ್ಟತಾಳ

ಏಳೆನ್ನ ಕುಲದೀಪವೇ । ಸಾರುವ ಬೇಗ । ಶೀಲ ಸದ್ಗುರು ಪದವೇ ॥ ಮೂಲಕಾರಣವದ । ಲೀಲೆಯಿಂ ಸೇವಿಸಿ । ಬಾಳುವ ಪರಿಗಳ । ನಾಲಿಸ ಬೇಕೆಂದು ॥೧॥ ಎನುತಲಾ ಸಿರಿವಂತೆಯೂ । ಬಾಲನ ಕೂಡಿ । ವಿನಯದಿ ಗುಣವತಿಯೂ ॥ ಮುನಿಯ ಪಾದವ ಸೇರಿ । ಮನವಾರೆ ನುತಿಸಲು । ಕನಿಕರದಿಂದಾಗ । ಮುನಿ ಮೌಳಿಯುಸುರಿದ ॥೨॥ ಏನವ್ವ ಕೊರಗು ತಿಹೇ । ಬಂದಿಹ ವ್ಯಥೆ । ಏನೆಂದು ಪೇಳದಿಹೇ ॥ ಸಾನುರಾಗದಿ ಪೇಳು । ಮಾನಸವತಿಯೆ ಬಂದ । ಹಾನಿಗಳೀಗ । ನಿದಾನದಿ ಪರಿಹಾರ ॥೩॥

ಭಾವಿನಿ

ಗುರುವರನೆಂಬುವಧರಿಸು ಬಾಲನು । ಪರಮ ಪುಣ್ಯೋದಯದಿ ಬದುಕಿದ । ಒರೆಯಲೇನದನೆಂದು ಸಕಲವನರುಹೆ ಮುನಿಪಾಲಾ ॥ ಪರಮದೇವ ಜಿನೇಂದ್ರ ಧರಣೇ । ಧರ ವಿಲಾಸೆ ಮನೋಜ್ಞೆ ಶ್ರೀ ಸುರ । ನರವಿನುತೆ ಸಿರಿದೇವಿ ಪದ್ಮಾವತಿಯೆ ಸಲಹೆಂದಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಯೋಚಿಸಿ ಸಿದ್ಧಾಂತಕೀರ್ತಿ ವ್ರತೀಂದ್ರನು । ಸೂಚನೆಯಿದು ದೈವ ಬಲವೂ ॥ ನಾಚಿಕೆಗೊಳದೆ ಬಂದಾಪತ್ತ ದಾಟುತ । ಆಚರಿಪುದು ಕಾರ್ಯ ಶುಭವೂ ॥೧॥ ಕುಲದೇವಿಯಾದ ಪದ್ಮಾವತಿ ದೇವಿಯ । ನೆಲೆಗಾಗಿ ಪೋಗಿ ವಂದಿಸುತಾ ॥ ಕುಲದೀಪಕನ ಸಲಹುವ ಭಾರ ನಿನಗೆಂದು । ನಳಿನಾಕ್ಷಿ ಬಿಂಬವ ಕೊಡುತಾ ॥೨॥ ಘನ ಬೇಗ ಹರಸುತ್ತ ಕಳುಹು ನೀ ಬೆದರದೆ । ತನಯಗೆ ಈರಾರು ವರುಷಾ ॥ ನೆನೆಸಲಸಾಧ್ಯ ಕಷ್ಟಗಳಿಹುದದರಿಂದ । ವನಜಾಕ್ಷಿ ಕಳುಹು ಶೀಘ್ರದಲೀ ॥೩॥ ಜಿನದತ್ತ ಕೇಳು ನೀ ಹಯಶಾಲೆಯನು ಪೊಕ್ಕು । ಜಿನಪತಿ ಶರಣೆಂದು ನಿಲಲೂ ॥ ಕನಕವರ್ಣದ ತೇಜಿ ಬಲಗಾಲ ಕೆದರುತ । ಲನುವಿನಂ ಹೂಂಕರಿಸುವುದೂ ॥೪॥ ಹಲ್ಲಣ ಹಾಕಿಸಿ ಹಯವನಿರದೆ ಏರಿ । ಭಲ್ಲೆಯವಾಂತು ಹಸ್ತದೊಳೂ ॥ ನಿಲ್ಲದೆ ದಕ್ಷಿಣ ಮುಖವಾಗಿ ಗಮಿಸಲು । ಎಲ್ಲ ಕಾರ್ಯವು ಸಿದ್ಧಿಯಹುದು ॥೫॥

ವಾರ್ಧಿಕ್ಯ

ತೆರಳಿ ಪೋಗುತ್ತಿರಲು ಬೆಂಬೊತ್ತಿ ಪಾಪಿಗಳು । ಭರದಿಂದ ಬರುತ ನಿನ್ನನು ಸಮಿಾಪಿಸೆ ಬೇಗ । ಧರಣೇಂದ್ರನರಸಿ ಬಿಂಬವ ತೋರೆ ಹೊನ್ನೆಲೆಯ ಪರಿ ಮಾಯೆ ತೋರುತಿಹುದೂ ॥ ತೆರಳುವುದು ಸೇನೆ ಹಿಮ್ಮೆಟ್ಟಿ ಭಯುತಮದಿಂದ । ಚರಿಸು ಈರಾರು ಯೋಜನ ವಾಜಿಯನ್ನೇರಿ । ತಿರುಗಿ ಮುತ್ತಲು ಸೈನ್ಯ ಕಂಗೆಡದೆ ನೀ ತೋರು ಪೊರೆಯುವಳು ಪದುಮಾಂಬೆಯೂ ॥೧॥

ಕಂದ

ಹರಸಲ್ಕಂಡಾಗೊಂದಿಸೀ । ತರಳನ ಕೂಡುತ ಅರಮನೆಗೈತಂದಾಗಂ॥ ಪರಿ ಪರಿ ವಿಧದಲಿ ಕೊರಗಿದ । ಳರಸೇ ಮುನಿದಡೆ ಪೊರೆಯುವರಾರಿಹ ರೆನುತಂ ॥೧॥

ರಾಗ—ನೀಲಾಂಬರಿ—ತ್ರಿವುಡೆತಾಳ

ಮಗನೇ ನಿನ್ನನು ಪೆತ್ತು । ಹಗೆಗಳಾದೆವೆ ಭಾಗ್ಯ । ವಗಲೀ ಕಾನನ ಕೆಂತು ಪೋಪೇ ॥ ಸುಗುಣಾಕರನೆ ನಿನ್ನ । ವಿಗಡ ವಿಕ್ರಮವನ್ನ । ಜಗದೊಳ ಗಿನ್ನೆಂದು ಕಾಂಬೇ ॥೧॥ ಉಂಡಲ್ಲದುಂಬರೆ । ಅನ್ನವು ಯಿಳಿಯದು । ಕಂಡು ಕಾಣದೆ ಮನವಿರದೂ ॥ ಭಂಡರ ತೆರನಾಯ್ತು । ಪುಂಡರಿಂಗೆನು ನಾಯ್ತು । ಕಂಡವರಿಗೆ ನಗಲಾಯ್ತೇ ॥೨॥

ರಾಗ—ಭೈರವಿ—ಅಷ್ಟತಾಳ

ಚಿತ್ತದಿ ಮರುಗ ಬೇಡಾ । ಹೆತ್ತಮ್ಮ ಕೇ । ಉತ್ತಮವಾಯ್ತು ನೋಡಾ ॥ ಮುತ್ತಿಯವರು ಬಂದು ಹಿಡಿಯದ ಮುನ್ನವೆ । ಕುತ್ತವ ದಾಟು ವೆನೂ ॥೧॥ ಶೀಲೆ ಪದ್ಮಾವತಿ ಕರುಣ । ವೆನ್ನೊಳಗಿರೆ । ಮೂಲೋಕ ಜಯಿಸುವೆನೂ ॥ ಕಾಲನ ಗೆಲಿದು ಕರ್ಮಗಳ ಖಂಡಿಸುವೆನು । ಜೋಲಿ ಮಾಡದೆ ಹರಸುವುದೂ ॥೨॥ ತನಯನ ನುಡಿಗಳ ಕೇಳೀ । ಮತ್ತಾ । ವನಿತೆಯು ಧೈರ್ಯ ತಾಳೀ ॥ ಮನೆಯೊಳು ಪೂಜಿಪ ದೇವಿಯ ಪ್ರತಿಮೆಯು । ತನಯನಿಗಿತ್ತು ಪೇಳಿದಳೂ ॥೩॥ ನಿನಗೆ ಮುನಿವರೆಲ್ಲ ನಿರ್ಮೂಲವಾಗಲಿ । ಘನ ಬಾಂಧವರೊಳಾಡಿ ಬಾಳ್ಕೆ । ಮಿನುಗುವ ಮುತ್ತಿನಕ್ಷತೆಯಿಟ್ಟು ಹರ ಸಿಯಾ । ತನಯನ ಬೀಳ್ಕೊಟ್ಟಳಾಗಾ ॥೪॥ ಮಾತೆಯ ಹರಕೆಯ ಕೈಕೊಂಡು ಜಿನದತ್ತ । ಆತುರದಿಂದ ತೇಜಿಯನೂ ॥ ತಾ ತವಕದೊಳೇರಿ ಸಾರಿದನಗಲುತ । ಏತರ ಸಾಹಸವಿಹುದೋ ॥೫॥

ಅಂಕ ೩

ಭಾಮಿನಿ

ಧೀರನನು ಕಾಣುತ್ತ ಪುರ ಪರಿ । ವಾರವಚ್ಚರಿಪಡುತಲಿರಲಾ । ನಾ
ಪದ್ಮಿನಿ ಬಳಿಕ ಭೋಜನಕಳವಡಿಸಿ ಸುತನಾ ॥ ಸೇರಿ ಭುಂಜಿಸಲೆಂದು ಕರೆ
ಯಲು । ಮಾರಿದತ್ತನು ಕಾಣದಿರಲಾ । ನೀರೆ ಕಳವಳವಾಂತಿರಲು
ಪಾಚಕನು ಬಳಿ ಸಾರೀ ॥೧॥

ಭಾಮಿನಿ

ಸರಸದಲಿ ಕಳುಹಿದಿರಿ ಬಾಲನ ! ತರಳ ತಂದಾ ಕುರುಹ ನೋಡುತ । ಭರದಿ ಪಾಕವಗೈದೆ ಬೇಸರವೇನು ಪೇಳಿರಿದೂ ॥ ಮರುಗಿ ಬ್ಯಾಬಿಡುತಬಲೆ ಹಾ ಸುಂ । ದರ ಸುಕೋಮಲನಳಿದೆಯಾ ಎ । ನ್ನರಸ ಸಂತಸವಾಂತೆಯಾ ಎಂದೊರಲಿ ಪೇಳಿದಳೂ ॥ ೨ ॥

ರಾಗ—ಸಾಂಗತ್ಯ—ರೂಪಕತಾಳ

ಸಂಬಿಸಿ ಕರೆತಂದು ಕೊಂದಿರಿ ತನುಜನ । ಲಿಂಬೆಯ ಹಣ್ಣನು ಕೊಡುತಾ ॥ ಸಂಭ್ರಮವಾಯಿತೆ ಸುಖದಿಂದ ಬಾಳಿರಿ । ಹಂಬಲ ಬಿಡಿರೆನ್ನ ನೆನಲು ॥ ೧ ॥

ರಾಗ—ಭೈರವಿ—ಅಷ್ಟತಾಳ

ಮಾಯವ ಮಾಡಿದ ಜಿನದತ್ತನನು ಕೊಂದು । ನಾಯಿ ನರಿಗೆ ಉಣ ಲಿಕ್ಕಿ । ಕಾಯವ ಕೆಡಿಸದೆ ಬಿಡೆನೆಂದು ರಾಯನು । ಮಾಯಾವಿಯಂತೆ ಘರ್ಜಿಸಿದಾ ॥ ೧ ॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಭೂರಿ ಕೋಪಾಟೋಪದಿಂದಲಿ । ಧಾರುಣಿಪ ದಳಪತಿಯ ಕರೆ ಯಲು । ಏರಿ ಘರ್ಜಿಸಿ ಪಡೆಯ ಕೂಡುತ । ಲಾರುಭಟಿಸೇ ॥ ೧ ॥ ಒಡೆಯ ಬರಿಸಿದಿರೇತಕೆನ್ನುತ । ಅಡಿಗೆರಗೆ ಮನ್ನಿಸುತ ನಡೆಯಿರಿ । ಒಡನೆ ಖೂಳನ ಸೀಳಿ ತನ್ನಿರಿ । ಪಡೆಯುವೆರಸೀ ॥ ೨ ॥ ಭೂಮಿಪತಿ ಚೋದಿಗವನೊರೆಯುವೆ। ನೀ ಮಮತೆಯನು ನೀಗಿ ಸುತನಿಗೆ । ಕ್ಷೇಮ ಬಯಸದೆ ಕೊಲ್ಲ ಪೇಳುವೆ । ಸಾಮವೇನೈ ॥ ೩ ॥ ಅನ್ನದಾತನೊಳೇನು ಮಾತಿದು । ಕುನ್ನಿಯನು ಸಂಹ ರಿಸಿ ಬಾರೆನೆ । ಖಿನ್ನನಾಗುತ ನಡೆದ ದಳಪತಿ । ಬನ್ನಿರೆನುತಾ ॥ ೪ ॥ ಯಮನ ದೂತರೊ ಭೈರವಾದ್ಯರೊ । ಸಮರಥರೊ ಷಡುರಥರೊ ಕಾಣಲು। ಗಮಿಸಲಾಕ್ಷಣ ಕಂಡು ಪುರಜನ । ರಮಮ ಎನಲೂ ॥ ೫ ॥

ರಾಗ—ಮಾರವಿ—ಏಕತಾಳ

ಪರಿಮಳವಿಡಿದಳಿಗಳು ಪೋಪಂದದಿ । ಭರದೊಳು ಭಟರೈ ತರುತಾ ॥ ತ್ವರಿತದಿ ಕಂಡರು ದೂರದಿ ಪೋಪನ । ಸರಿಸಕೆ ಬಂದರು ನಗುತಾ ॥ ೧ ॥

ಕೆಲರಿದ ಕಾಣುತ ಕಾಣದ ತೆರನಿರೆ । ಸರಳ ಸ್ವಭಾವದ ಭಟರೂ ॥ ಹಲ
ಕೆಲ ಮೂರ್ಖರು ನಗುತಲೆ ಜರೆದರು । ಹುಲು ತರಳನೆ ಹಿಂತೆರಳೂ ॥೨॥
ದಳಪತಿ ನುಡಿದನು ಮನ್ನಿಸಬೇಹುದು । ಕುಲಪತಿಯಾಜ್ಞೆಯಿದೂ ॥ ತಳು
ವದೆ ಛೇದಿಸಿ । ಬಾರೆನುತೊರೆದಿಹ । ಛಲಗಳನಾಂತಿಹನೂ ॥೩॥ ಜನಕನ
ನೇಮವ ನಡೆಸಿರಿ ಬೇಗನೆ । ಸನುಮತವೆನಗಿಂದೂ ॥ ಕನಕಾಂಬಕಿಯು
ಕೃಪೆಯಿರೆ ಭುವನದಿ । ತೃಣ ಸಮವೆನಿಸುವೆನೂ ॥೪॥ ಮುತ್ತಲು
ಸೇನೆಯು । ಮತ್ತಾ ಕುವರನು । ಎತ್ತುತ ಬಿಂಬವನೂ ॥ ಚಿತ್ರವ ಕದಡಲು ।
ಮಾಯೆಯು ಭರಕು । ನೃತ್ತ್ಯರ ತೆರ ಸರಿಯೇ ॥೫॥

ಭಾಮಿನಿ

ಯೋಜನಾಂತರ ಸರಿಯೆ ಭಟಕುಲ । ಸೋಜಿಗವನೀಕ್ಷಿಸುತ ದಳಪತಿ।
ಮೂಜಗದಿ ಕೌತುಕವದೇನೆನುತಿರ್ದನಾಕ್ಷಣದೀ ॥ ರಾಜಶೇಖರನಾಜ್ಞೆ
ಪಾಲಿಸ । ಲೋಜೆಯಿಂ ಮುಂದರಿಸೆ ಧೈರ್ಯದಿ । ರಾಜತನಯನ ಮುತ್ತಿ
ರೆನ್ನಲು ಭಟರು ಧಾವಿಸುತಾ ॥೧॥

ರಾಗ—ಭೈರವಿ—ಏಕತಾಳ

ಕರದೊಳು ಶೂಲವ ಧರಿಸೀ । ಎಲೆ । ತರಳನೆ ನಿಲ್ಲೆಲೊ ಸಹಸೀ ॥
ಕೊರೆಯುತ ಅಂಗಾಂಗಗಳಾ । ಸಂ । ಹರಿಸದೆ ಬಿಡೆವೈ ಖೂಳಾ ॥೧॥
ಕರಕರ ದಂತವ ಕಡಿದೂ । ಥರ । ಥರದಾಯುಧಗಳ ಝಡಿದೂ ॥ ಸರಿಸಕೆ
ಬರುತಿರೆ ಕಂಡೂ । ದಿನ । ಕರತೇಜನು ಖತಿಗೊಂಡೂ ॥೨॥ ದುಷ್ಟರೆ
ನ್ಯಾಯವ ತೊರೆದೂ । ಮತಿ । ಭ್ರಷ್ಟರೆ ನೀತಿಯ ಮರೆದೂ ॥ ಶ್ರೇಷ್ಟರ
ತೆರವಾಡುವಿರೀ । ನಿ । ಮ್ಮಿಷ್ಟದಿ ತೇಲಾಡುವಿರೀ ॥೩॥ ಸ್ವಾಮಿಯ ಸೇವೆಗೆ
ಜೀವಾ । ನಾವ್ । ಪ್ರೇಮದಿ ಕೊಡುವುದೆ ಭಾವಾ ॥ ಕಾವರ ಕರೆಸೈ ಬೇಗಾ।
ನೀ ಸಾವರೆ ಸಿದ್ಧನೆ ಯಾಗಾ ॥೪॥ ಕೊಲ್ಲಲು ಕಾಯಲು ಜಗದೀ । ನೀ ।
ವೆಲ್ಲರು ಸೇರ್ದರು ಭವದೀ ॥ ಗೆಲ್ಲುವ ಯೋಗವಿಂದೆನಗೇ । ನಿ । ಮ್ಮೆಲ್ಲರ
ಭ್ರಮಿಸುವೆ ಕ್ಷಣಕೇ ॥೫॥

ಭಾಮಿನಿ

ಪದ್ಮಕರೆ ಪದ್ಮಾಕ್ಷಿ ತಾಮಸ ಪದ್ಮರಸ ಮದ ಭೃಂಗಿ ಭೂತಳ ।

ಪದ್ಮಧರೆ ಪದ್ಮಾಂಬಿ ಪದುಮಾವತಿಯೆ ಸಲಹೆಸುತಾ ॥ ಪದ್ಮಯುಗಳವ ನೆನೆದು ಬಿಂಬವ । ಪದವುಲದಿ ತೋರಲ್ಕೆ ಸರಿಯಿತು । ಅದ್ಭುತವನೇನೆಂಬೆ ಯೋಜನ ದೂರ ಭಟಕುಲವೂ ॥೧॥

ರಾಗ—ಭೈರವಿ—ಝಂಪೆತಾಳ

ಸೋತುದೀ ತೆರ ಬಲವು । ಧಾತುಗುಂದುತಲಿರಲು । ಆತುರದಿ ದಳ ಪತಿಯು । ಈತನತಿ ಬಲನೂ ॥೧॥ ಪದುಮಾವತಿಯ ದಾಸ । ಮುದದಿ ಸಲಹೆಂದೆನುತ । ಪದದೊಳೆರಗಲು ನಗುತ । ಚದುರರನು ಕ್ಷಮಿಸೀ ॥೨॥ ಬಲು ದಣಿದಿರಿಂದಿನಲಿ । ಬಲವಂತರಡುದ್ಯೈಸೆ । ಬಲವಾದುದೆಮಗಿಂದು । ಕುಲದೇವಿ ಕೃಪೆಯೂ ॥೩॥ ಮೇಲೀ ಪಾಲಿಪುದೆಂದು । ಲೋಲಮತಿಗಭಿ ನಮಿಸೆ । ಮೂಲ ಬಲವನು ಕಂಡು । ಶೀಲನುಸುರಿದನೂ ॥೪॥

ಭಾಮಿನಿ

ಕ್ಷಮಿಸಿದೆನು ಅಪರಾಧವೆಲ್ಲವ । ಮಮತೆಯೊಳು ಪಾಲಿಪೆನು ನಂಬಿರಿ । ಸಮರಸದಿ ವಿಶ್ರಾಂತಿ ಗೈಯ್ಯುವ ವರ ಶುಭೋದಯದೀ ॥ ಸುಮ ಸುಗಂಧಿತ ವನವು ರಮ್ಯವು । ಮನ ಮನೋಹರವೈಸೆ ನಿಶ್ಚಯ । ವೆಮಗನುವು ಸನುಮತವದೆನ್ನಲು ಸಕಲ ಭಟನಿಕರಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಸುರತರು ಧರೆಯೊಳು ನೆಲೆಗೊಂಡು ನಿಂತಂತೆ । ಪರಮ ತೇಜವ ಬೀರಿ ಮೆರೆವಾ ॥ ವರ "ಲಕ್ಕಿ" ಮರವ ಕಂಡುರುತರ ತೋಷದಿ । ಅರಸ ಸಾರಿದನದರೊತ್ತಾ ॥೧॥ ತೇಜಿಯನಿಳಿದು ನೈಜವ ನೆಲದೊಳಗೂರಿ । ಸೋಜಿಗವಡೆದ ವೃಕ್ಷದೊಳೂ ॥ ಮೂಜಗದೊಡೆಯ ನೆಕ್ಷೆಯ ಬಿಂಬವನು ತೆಗೆ । ದೋಜೆಯಿಂದಲಿ ಯಿರಿಸಿದನೂ ॥೨॥

ರಾಗ—ಕೇತಾರಗೌಳ—ಅಷ್ಟತಾಳ

ಕುದುರೆಯನುಪಚರಿಸುತ ರಾಜಕುವರನು । ಮುದದಿ ವಿಶ್ರಾಂತಿಗಾಗೀ ॥ ಒದಗಿಸಿಕೊಂಡು ಚಿಗುರಿಪರ್ಣ । ದ್ಹಾಸಿಗೆ । ಬದಿಯೊಳು ಪವಡಿ

ಸಿರೇ ॥೧॥ ಮರೆದು ನಿದ್ರೆಯೊಳಿದ್ದು ಕಂಡನು ಸ್ವಪ್ನವ । ತರುಣಿಯೋರ್ವಳು ಬರುತಾ ॥ ಬರಲೊಲ್ಲೆ ನಿಲ್ಲೆಂದ ಎಂಬ ಧ್ವನಿಯ ಕೇಳಿ । ತರಳನೆಚ್ಚತ್ತು ನೋಡೀ ॥೨॥ ತ್ವರಿತದಿಂದೆದ್ದು ಯಕ್ಷೆಯ ಬಿಂಬವನು ಕಂಡು । ಧರಣೀಶ ತೆಗೆವೆನೆಂದೂ ॥ ಕರವ ನೀಡಲು ಬಾರದಿರೆ ಕಂಡು ಬೆದರುತ । ಮರುಗಿದ ಬಹು ವಿಧದೀ ॥೩॥

ರಾಗ—ನೀಲಾಂಬರಿ—ರೂಪಕತಾಳ

ತರಳನ ತೊರೆಯುತ ಜನನಿಯೆ । ಸರಿ ಬಂದುದೆ ನಿನಗೀ ಪರಿ । ಶರಣನ ಪೊರೆಯುವರಾರಿಹ । ಧರಿಯೆಯ ಬವಣೆಗಳಾ ॥ ಹಿರಿಯರು ಕೊಲ್ಲುವರೆನ್ನುತ । ವರ ಪಾದವ ನೆರೆ ನಂಬುತ । ಹಿರಿದಾಸೆಯ ತಳೆದಿರ್ದೆನು । ಕರುಣವ ನೀ ತೊರದೇ ॥೧॥ ಪರಹಿತೆ ಪಾವನ ಚರಿತೆಯೆ । ಕರುಣಾಕರೆ ಭುವನಾದರೆ । ಸುರುಚಿರ ಸುಂದರೆ ಶೌರ್ಯಾಕರೆ ಪದುಮಾವತಿಯೇ ॥೨॥ ನಿರತವು ನಂಬಿದೆ ನಿನ್ನನು । ಹೊರತನ್ಯರ ಕಾಣೆನು ಭವ ಶರಧಿಯ ತಾಪವ ಹರಿಸುತ । ಪೊರೆ ಘನ ಗುಣಭರಿತೇ ॥೨॥

ಭಾಮಿನಿ

ಒರಲಿ ನಾನಾ ತೆರದಿ ದುಃಖಿಸಿ । ಮರುಕಳಿಸಿ ಬಾಯಾರಿ ಪುನರಪಿ । ಒರಗಿರಲು ಮೂರ್ಚ್ಛೆಯೊಳು ಕಾಣಿಸಿಕೊಂಡಳಾ ದೇವಿ ॥ ಮರುಗ ಬೇಡೆಲೆ ಬಾಲ ವೃಕ್ಷದೊ । ಳಿರುವ ಬಿಂಬವೆ "ಪುರುಷ" ನಂಬಿಕೊ । ಪೊರೆಯುವೆನು ಸಂಪದದಿ ಎಂದಭಯವನು ನೀಡಲ್ಕೆ ॥೧॥

ರಾಗ—ಶಂಕರಾಭರಣ—ಆದಿತಾಳ

ಮೇಲೆ ಕಣ್ಣು ತೆರೆದು ಬಾಲ । ಲೋಲನಾಗಿ ಭಟರ ಕರೆದು । ಶೀಲೆ ಪದ್ಮಾವತಿಯು ವರವ ಲೀಲೆಯಿಂದಲೀ ॥೧॥ ಪೇಳಲಲ್ಲಿ ನೆರೆದ ಜಾಲ । ಲೀಲೆಗಳನು ಪೊಗಳೆ ಕುಣಿಯೆ । ಹಾಲು ಜೇನು ಸೇರಿದಂತೆ ಬ್ಬಾಳ ತೋಷವೂ ॥೨॥

ಭಾಮಿನಿ

ಮೇಲುವರಿದಾನಂದದಿಂದಿರೆ । ಕಾಲ ಪಾಳಯದಂತೆ ಬೇಡರ । ಜಾಲ ನಾಯ್ಗಳ ಸೇರಿ ಕಾನನದೊಳಗೆ ಬೇಟೆಯನೂ ॥ ಸೀಳಿ ಮೃಗಗಳ ಮುಂದೆ

ಬರಲಾ ? ವೇಳೆಯಲಿ ಬಲ ವಿಶ್ರಮಿಸುವುದ ? ಲೋಲಮತಿ ಶಬರೇಶ ಕಾಣುತ ನುಡಿದನಬ್ಬರಿಸೀ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಭಲರೆ ಶಾಭಾಸೆಮ್ಮ ವನವನು । ಸಲುಗೆಯಿಂದಲಿ ಸೇರಿ ಮೆರೆಯುವ । ಕುಲವಿಹೀನರೊ ಯಾರು ಪೇಳಿರಿ । ಬಲು ವಿಲಾಸ ॥೧॥ ಕೇಳುತಲಿ ಗಹಗಹಿಸಿ ದಳಪತಿ । ಖೂಳರಿರ ನಿಮಗೇಕೆ ನಮ್ಮಯ । ಲೀಲೆಗಳ ವೃತ್ತಾಂತ ಜಾರಿರಿ । ಮೇಳ ಸಹಿತಾ ॥೨॥ ಭಳಿರೆ ಚೋರರ ತೆರದಿ ವನದಲಿ । ನೆಲಸಿ ನಮ್ಮಧಿಕಾರ ದರ್ಪವ । ಪಲವಿನಿಂದ ವಿರೋಧಿಸಿರ್ಪಿರಿ । ಛಲಗಳೇನೂ ॥೩॥ ನಿಮ್ಮ ತೆರದಲಿ ಸತ್ತ ಮೃಗಗಳ । ಹೆಮ್ಮೆಯಲಿ ಭುಂಜಿಸುತ ಮೆರೆಯುವ । ಕರ್ಮಿ ಜೀವಿಗಳಲ್ಲ ನಡೆಯಿರಿ । ಸುಮ್ಮನಿಂದೂ ॥೪॥ ಸಾಕು ಸಾಕಿದನೊರೆಯ ಬೇಡೆಲೊ । ಜೋಕೆ ನಾಲಿಗೆ ಸೀಳಿ ಕೊಬ್ಬನು । ಸಾಕೆನಿಪೆ ಧುರವರಿಯೆ ನಮ್ಮಯ । ಠೀಕುಗಳನೂ ॥೫॥

ರಾಗ—ಭೈರವಿ—ಏಕತಾಳ

ಶಬರಾಧಿಪ ನಿಲ್ಲೆನುತಾ । ದಳ । ಪ್ರಭವನು ಕಿಡಿ ಸೂಸುತ್ತಾ ॥ ಪ್ರಬಲಾಸ್ತ್ರವ ಬಿಡಲಾಗಾ । ಸಂ । ಭ್ರಮದೊಳು ಖಂಡಿಸೆ ಬೇಗಾ ॥೧॥ ಶೂಲವನೆತ್ತಲು ಶಬರಾ । ಕಂ । ಕಾಲನ ತೆರದಲಿ ಶೂರಾ ॥ ಕೋಲನುಗಿದು ತುಂಡರಿಸೇ । ಶರ । ಜಾಲವ ಸುತ್ತಲು ಸುರಿಸೇ ॥೨॥ ತುಂಡರಿಸುತ ಶಬರನು ತಾ । ಖತಿ । ಗೊಂಡು ಗದೆಯ ಬೀಸುತ್ತಾ ॥ ಚಂಡನ ಶಿರಕದ ಝಡಿಯೇ । ಉ । ದ್ದಂಡನು ಗಿರ್ರನೆ ಗಿರಿಯೇ ॥೩॥

ಭಾಮಿನಿ

ವೀರ ದಳಪತಿ ಬೀಳೆ ಕಾಣುತ । ಮಾರಿಗೌತಣವೀವೆನೆನುತಲಿ । ಭೂರಮಣ ಸುತ ಭೂರಿ ಕೋಪಾತುರದೊಳೈ ತರುತಾ ॥ ಕ್ರೂರ ಶಬರಾಧಿಪನೆ ಗರ್ವದೊ । ಳೇರಿ ಹಾನಿಯ ಗೈದೆ ಧೂರ್ತನೆ । ಸೇರಿಸುವೆ ಶೈಮಿನಿಗೆ ನಿಲ್ಲೆಂದಾಗ ಘರ್ಜಿಸಿದಾ ॥೧॥

ರಾಗ—ಶಂಕರಾಭರಣ—ಮಟ್ಟೆತಾಳ

ಎಲವೊ ವೀರ ತರಳ ಕೇಳು । ಫಲಗಳೇನು ನಿನ್ನ ಪುರವು । ಕುಲಸ ಗೋತ್ರ ವಿವರಗಳನು । ಫೇಲನುಸುರೆಲಾ ॥ ಸಲವಿನಿಂದ ನಮ್ಮ ವನವ । ಸಲುಗೆಯಿಂದ ಸೇರ್ದ ಪರಿಯು । ತಳುವದೀಗ ಕಾರಣಂಗೊರೆಯುಬೇಹುದು ॥೧॥ ಕಾಲ ಧರ್ಮದಂತೆ ನಾವು । ಸೋಲನಾಂತು ಸೇರ್ದೆವಿಲ್ಲಿ । ಜಾಲ ಸಹಿತ ಭೀತಿ ಪಡಿಪ ಶೀಲವೇನಯ್ಯ ॥ ಮೂಲ ಮಂತ್ರ ಧರ್ಮ ತಂತ್ರ । ಸೋಲಲಾರೆವಿಂದು ನಿಮಗೆ । ಕಾಲಗತಿಯು ಲೀಲೆ ತೋರ್ದು ಶೂಲಕಿಕ್ಕುವೇ ॥೨॥ ಭಳಿರೆ ಬಾಲ ಬಾಯ ಡಂಭ । ಸುಲಭವಲ್ಲ ಕಾರ್ಯ ಕುಶಲ । ಪಲವಿನಿಂದ ತೆರಳಿ ನೀವು ಫಳಿಗೆ ಮಾತ್ರದೀ ॥ ಮುಳಿತು ಮುಂದುವರಿದೆಯಾದ । ರಲಸದೀಗ ನಿನ್ನ ಶರವ । ಕೊಳುತ ಮಾರಿಗಿತ್ತು ಬಲವ ಗೆಲುವೆ ದಿಟವಿದೂ ॥೩॥ ಮಾತ ಕೇಳಿ ಜಿನದತ್ತಾಖ್ಯ । ಖ್ಯಾತೆ ಪದ್ಮಾವತಿಯ ನೆನೆದು ಭೀತಿ ತೋರಿದು ಮಾಯಾಶಕ್ತಿ ಆತಗೆಸೆಯಲೂ ॥ ಪ್ರೀತಿಯಿಂದ ದೇವಿ ಕ್ರೂರ ವೇಷ ಧರಿಸಿ ಮೆರೆವ ಭೂತ । ವ್ರಾತ ಕಳುಹೆ ಬೆದರಿ ಬೆವರ ಸೂಸು ತೋಡಲೂ ॥೪॥

ವಾರ್ಧಿಕ್ಯ

ಭವರದೊಳು ಕೈ ಸೋತು ಶಬರರೋಡುತ್ತಿರಲು । ಭುವನ ವಂದಿತೆ ಗೈದ ಭೂತಗಳು ಬಳಿವಿಡಿಯೆ । ಭುವನೇಶ ಕಾಣುತ್ತ ಭಟರ ಬೆಂಬಲದಿಂದ ಸೆರೆವಿಡಿದ ಶಬರ ಬಲವಾ ॥ ತವಕದಲಿ ಮತ್ತೆ ಸ್ತುತಿಸಲು ಭೂತಕುಲ ಮರೆದು । ದಿವದಂತೆ ಶಾಂತಿ ಮೆರೆಯಲು ಕಂಡು ಶಬರೇಶ । ಭುವನ ಪಾವನ ಚರಿತೆ ಸಲಹೆಂದು ಪದಕೆರಗೆ ಜಿನದತ್ತ ಮನ್ನಿಸಿದನೂ ॥೧॥

ರಾಗ—ಮಧ್ಯಮಾವತಿ—ತ್ರಿವುಡೆತಾಳ

ದೀನದಲಿತರ ಭಾವಪೂರ್ಣದಿ । ಮಾನವಂತನು ಪರಿಗ್ರಹಿಸೆ ಮನ। ದಾನುರಾಗದಿ ಬೇಡರಧಿಪನು । ತಾನೆ ನುಡಿದಾ ॥೧॥ ಅಡವಿಗೊಡೆಯರು ನಾವು ಕತ್ತಲು । ಪೊಡವಿಗಧಿಪರು ನೀವು ನಿರ್ಮಲ । ನೊಡರು ನಮಗಿನ್ನಿಲ್ಲ ಭಯ ಜಗ । ದೊಡತಿ ದಯೆಯೂ ॥೨॥ ಸೇವೆ ನಿಮಗಿದು ಕೇಳಿ ಶಬರರೆ । ಭಾವಶುದ್ಧದಿ ಪುರವ ರಚಿಸಿರಿ । ಕಾವಳನುದಿನ ದೇವಿಯಿರುವೇ । ತಾವು ನಮಗೇ ॥೩॥

ದ್ವಿಪದಿ

ಅರಸನಪ್ಪಣೆಯಾಗೆ ಭರದಿಂದಲವರೂ । ಪುರವ ನಿರ್ಮಿಸಲೆನುತ ಶಬರ ಬಲಯುತರೂ ॥೧॥ ಏರು-ತಗ್ಗುಗಳಗೆದು ಭೂರಿ ಕಾಯಕದೀ । ಕಾರಣಿಕವೆನಿಪ ಪುರವರವನತಿ ಹಿತದೀ ॥೨॥ ಭೂರಿ ಶೃಂಗಾರ ಕೌತುಕದಿ ರಚಿಸಿದರೂ । ಕಾರ್ಯ ಚತುರರು ಶಿಲ್ಪಕಲೆಯ ಕೋವಿದರೂ ॥೩॥ ರಾಯ ನತಿ ಹಿಗ್ಗುತಲಿ ಬಂಡಿ ಬಂಡಿಯಲೀ । ಆಯ ಹೆಚ್ಚಿಸೆ ಆಯುಸವ ತರಿಸು ತಲ್ಲೀ ॥೪॥ ವರ ದೇವಿ ಪೇಳಿದಂದದಿ ಪರುಷಕಂದೂ । ನೆರೆ ಸೋಕಿಸಲು ಚಿನ್ನ ಬಹಳವಾಯ್ತೆಂದೂ ॥೫॥ ಶೃಂಗಾರ ಸೌರಂಭ ಸೂಸುತಿರಲಂದೂ । ಮಂಗಳವು ಮೆರೆದಿರಲು ಧರಣಿಪನು ನೊಂದೂ ॥೬॥ ಮಾತೆಯಿಲ್ಲದೆ ಸರ್ವ ವೈಭವವು ಶೂನ್ಯಾ । ಖ್ಯಾತಳನು ಬರಿಸುವೆನು ಅದುವೆ ಜಗ ಮಾನ್ಯಾ ॥೭॥ ಎಂದು ಯೋಚಿಸಿ ಬಳಿಕ । ದಳಪತಿಯ ಕರೆದೂ ॥ ಸಂದೇಶ ಸಹಿತ ಕಳುಹೆಂದ ಮನ ಒಲಿದೂ ॥೮॥

ಭಾಮಿನಿ

ಚರರು ಪಯಣದ ಮೇಲೆ ಪಯಣದಿ । ಅರಮನೆಯ ಸಾರುತ್ತ ಶ್ರೀಯುಲೆ । ಚರಣಕಭಿನಮಿಸುತ್ತ ಬಿನ್ನೈಸಿದಗು ಭಕ್ತಿಯಲೀ ॥ ಕರುಣ ಸಾಗರೆ ತಾವು ಬಾರದೆ । ಸಿರಿ ಸೊಬಗು ಶೋಭಿಸದು ಪೇಳೆನು । ತರಸ ಕಳುಹಿದ ತಾಯೆ ಬಿಜಯಂಗೈವುದೆನುತೊರೆಯೇ ॥೧॥

ರಾಗ—ಸಾಂಗತ್ಯ—ರೂಪಕತಾಳ

ಹರುಷಾಂತರಂಗದಿ । ಚರರನು ಮನ್ನಿಸಿ । ತರಳನ ಕ್ಷೇಮವ ಕೇಳೀ ॥ ಪೊರೆದೆಯ ಪದ್ಮಾವತಿಯೆ ಪ್ರಿಯ ಕಂದನ । ಶರಣೆಂಬೆ ಸಾಸಿರ ಬಾರೀ ॥೧॥ ರಮಣನ ಸ್ವಾರ್ಥದ । ಮಮತೆಯ ಹೇಯದಾ । ಕ್ರಮದಿಂದ ರಾಜ್ಯವ ತೊರೆದೂ ॥ ಗಮಿಸಲಸಾಧ್ಯ । ಕಾಂತಾರದಿ ಪರದೇಶಿ । ಸಮನಿಸಿ ತಯ್ಯೋ ದುರ್ವಿಧಿಯೇ ॥೨॥ ಚಿಂತೆಯ ಹರಿಸಿ ಪೊರೆವಳಿಂದುಮುಖಿ ನಿಜ । ವೆಂತು ಬಣ್ಣಿಪೆನು ಮಹಿಮೆಯಾ ॥ ಶಾಂತ ಸದ್ಗುರುವಿಗೆ । ಪೇಳುವೆನೆನುತ ಶ್ರೀ । ಮಂತೆಯು ನಡೆತಂದಳಾಗಾ ॥೩॥

ಭಾಮಿನಿ

ಬರುತ ಗುರುವರಗೆರಗಿ ಕುವರನ । ವರ ಶುಭೋದಯ ವಿವರಿಸುತ ಬಳಿ । ಕಿರದೆ ತೆರಳಲು ಬೇಕು ಸ್ವಾರಿಯು ಎಂದು ಬಿನ್ನವಿಸೇ ॥ ಹರುಷ ಶರಧಿಯೊಳೊಲಿದು ಪೊರಡಲು । ತರುಣಿ ಪರಿವಾರವನು ಕೂಡುತ । ಭರದಿ ಬರಲಾ ಚರರು ಜಿನದತ್ತನೊಳು ಬಿನ್ನವಿಸೇ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ವೀರ ಜಿನದತ್ತಾಖ್ಯ ಮಾತೆಯು । ಸ್ವಾರಿಯಾಗಲು ಸಕಲ ವೈಭವ । ಸೇರಿ ಕಾಣಿಸಿಕೊಂಡು ಮಣಿದನು । ಚಾರುಪದದೀ ॥೧॥ ಜಯ ಜಯಾ ಗುರುವರ್ಯ ಭಾಸುರ । ವರ ವರದ ಜನಭಕ್ತ ಭಕ್ತ್ರರ । ಭಯ ನಿವಾರಣ ಜಯತು ರಕ್ಷಿಸು ತವ ಶರಣನಾ ॥೨॥ ಮಣಿದು ನುತಿಸುವ ಸಕಲರನು ತಾ । ವಿನಯದಿಂದಲಿ ನಗುತ ಮನ್ನಿಸು । ತಿರಲು ನೂತನ ಪುರಕೆ ಬಂದರು । ಮನದೊಳೊಲಿದೂ ॥೩॥

ವಾರ್ಧಿಕ್ಯ

ಮಿಸುನಿ ಪೀಠವನಿತ್ತು ಮಂಗಳಾರತಿ ಎತ್ತಿ । ವಸುಮತೀಶ್ವರ ಮಾತೆಯರಿಗೆ ವಂದಿಸೆ ಬಳಿಕ । ಕುಸುಮಾಕ್ಷಿ ಸಂತೋಷ ಶರಧಿಯೊಳಗೋಲಾಡಿ । ಮಗನ ಬರಸೆಳೆದಪ್ಪುತಾ ॥ ಬಿಸಜಪೀಠನ ಭವಾಂಡದಿ ಕೀರ್ತಿ ಗಳಿಸಿದೆಯ । ರಸನೆಯೊಳು ವರ್ಣಿಸಲಸಾಧ್ಯ ಪದ್ಮಾವತಿಯು । ಪೆಸರಿಸಿಂ ರಂಜಿಸಿದೆ ಭಾಪು ಭಾಗ್ಯೋದಯವ ಕಣ್ಣಾರೆ ಕಂಡೆನೆನಲೂ ॥೧॥

ವಚನ॥ ಸರ್ವರೂ ಪಟ್ಟಣದ ವಿಚಿತ್ರಂಗಳಂ ನೋಡಲುಪಕ್ರಮಿಸಿದರದೆಂತೆನೆ – ಪುರವರ್ಣನಾ—

ವಾರ್ಧಿಕ್ಯ

ವಿಟ ಕೇರಿ ವರ ವಿದೂಷಕ ಕೇರಿ ನಾಗರಿಕ । ಕುಟಿಲ ಕುಡ್ಮಲ ರದನೆಯರ ಕೇರಿ ಶೃಂಗಾರ । ಕಟಕವತಿಶಯ ಕೇರಿ ಸಂಭ್ರಮಾಂಕಿತ ಕೇರಿ ಸೋನಾರ ಕೇರಿ ಸಹಿತಾ ॥ ಮಠ ಮಹಾಗಣಿತ ಪಂಡಿತ ಶಾಸ್ತ್ರಿಗಳ ಕೇರಿ । ಕುಟಿಲತೆಗೆ ಶೂಲ ಸೇನಾಸಾಗರದ ಕೇರಿ । ಹಟಯೋಗಭರಿತ ಗಜ ಕೇರಿ ಹಯ ಕೇರಿ ಗಂಭೀರ ಬಸದಿಗಳ ಕೇರೀ ॥೧॥

ರಾಗ—ಭೈರವಿ—ಝಂಪೆತಾಳ

ಮುನಿಮೌಳಿ ಬೆರಗಾಗಿ । ಮನವಾರೆ ಮೆಚ್ಚಿದೆನು । ಧಣು ಧಣುರೆ ಜಿನದತ್ತ । ಎನುವೆನೆಂತಿದೆನೂ ॥೧॥ ಕಣು-ಮನಸಿಗಿದು ಹಬ್ಬ । ಜನುಮಾಂತರದ ಭಾಗ್ಯ । ನಿನಗೊಲಿದಳಾ ದೇವಿ । ತನಯ ಗುಣಭರಿತಾ ॥೨॥

ದ್ವಿಪದಿ

ಇಂತು ಪೊಗಳುತಲವರು ಸಂತಸದೊಳಿರಲೂ । ಮುಂತೆಸೆವ ಪುರವರಕೆ ಪೆಸರದೇನೆನಲು ॥೧॥ ಪರಿಕಿಸುತ ಮುನಿವರನು ಘನ ಸರೋವರವಾ। ಬಿರಿದು ರಂಜಿಪ ಕಮಲ ಸ್ವರ್ಣಪ್ರಭೆಯೆಸೆವಾ ॥೨॥ ಯಿರವ ನೋಡುತ ನುಡಿದ ಹೊಂಬುಜಾ ಪುರವೇ । ಸರಿಯಾದ ಪೆಸರಿದಕೆ ಪುಣ್ಯಜನ ವಿಭುವೇ ॥೩॥ ಎಂದೆನಲು ಅಸ್ತ್ರೆನುತ ನೃಪನು ಪುರದಲ್ಲೀ । ಮಂದಿಗಳ ಕರೆದು ಸಾರಿದನು ಅಲ್ಲಲ್ಲೀ ॥೪॥ ಬೀರೆ ಹರುಷವು ನಗರ ಸುರಪುರದ ತೆರದೀ । ಧಾರುಣಿಗೆ ಕೌತುಕವ ಬೀರೆ ವಿಧ ವಿಧದೀ ॥೫॥ ಸಕಲರನು ಪಾಲಿಸುತಲರಸ ಹರುಷದಲೀ । ಅಖಿಲಾಂಕ ಜಿನದೇವನನು ನೆನೆಯುತಲ್ಲೀ ॥೬॥

ಉತ್ತರಮಥುರೆಯಲ್ಲಿ ಸಾಕಾರ ರಾಜನ ದುಃಖ

ಭಾಮಿನಿ

ಮರುಗಿದನು ಸಾಕಾರ ಮನದಲಿ । ತರುಣಿ ಮೋಹದಿ ಕೆಟ್ಟೆನಕಟಾ। ಒರಿಪು ಮಾಯೆಯೆ ಹೊರತು ಮನುಜರು ಲೌಕಿಕಾದಿಗಳಾ ॥ ನೆರವಿ ಪಾಶಗಳಿಂದ ಜೀವನ । ಕರಗಿಸುತ ವಿಷಯಾಂಧಕಾರದಿ । ನರಳುವುದ ನಾನೆಂತು ವರ್ಣಿಪೆ ನನ್ನ ದುಃಸ್ಥಿತಿಯಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಅಯ್ಯೋ ಮೋಹದಿ ಕೆಟ್ಟೆನು । ಬಾಯಾರಿತು ಕುಲ ಕೆಟ್ಟಿತು । ಕಾಯುವ ಸುತರನು ತೊರೆದೆನು । ಕಾಯವ ಜರ್ಝರಿಸೀ ॥ ನಾಯಿಯ ತೆರದಲಿ ಬಾಳುವ । ಹೇಯತೆಯೊದಗಿದೆ ಜಿನವರ । ಹಾಯಕಟಾ ವಿಧಿಯಿಾ ತೆರ ನೋಯಿಸಿತಯ್ಯಯ್ಯೋ ॥೧॥ ಮಡದಿಯು ಕೈಬಿಟ್ಟಳು ತಾ।

ಕೆಡುಕಿನ ಪದ್ಮಿನಿ ಜಾಲದಿ । ಸುಡುಃಿಡೆ ವ್ಯಾಧಿಗಳೀ ತೆರ ನಡ ನಡುಗುವ ದಾಯ್ತೇ ॥ ಪಡಬಾರದ ಬವಣೆಗಳಾ । ರೊಡನುಸುರಲಿ ಸಾಯುವುದೇ । ದೃಢವಾಯಿತೆ ನರಕಕೆ ಗತಿ । ಯಡಸಿತು ವಿಧಿ ಎನ್ನಾ ॥೨॥

ಕಂದ

ತೊರೆಯಲ್ ಧರ್ಮದ ಪಥಮಂ । ಉರುತರ ಕಷ್ಟಗಳನೇಕ ಬರ್ಪುದು ಸಾಜಂ ॥ ಪರಿಕಿಸಲೆನ್ನಿಂದಧಮರ್ । ಯಿರುವರೆ ಯೆನುತಂ ಮರುಗಿದನಾ ಭೂಪಾಲಂ ॥೧॥

ರಾಗ—ಸಾಂಗತ್ಯ—ರೂಪಕತಾಳ

ತಡನರಿಸುತ ವೈಯಾ ನಡುಗಿ ಪದ್ಮಿನಿ ತಾನು । ಕೆಡುಕ ಯೋಚಿಸಿ ನಿಮ್ಮನಿಂತೂ ॥ ಕಡು ತಾಪಪಡುವಂತೆ ನಡೆಸಿಡೆನಕಟ ಹಾ । ಸುಡುತಿಡೆ ನ್ನೊಡಲು ದುಃಖದೊಳೂ ॥೧॥ ಬಡವೆಯಾದೆನು ಪ್ರಿಯ ಸುಕುಮಾರ ನಳಿದನು । ಒಡಲುರಿ ತಾಳಲೆಂತಕಟಾ ॥ ಪೊಡವಿಯಾಸಗೆ ಪೋಗಿ । ಸುಡುಗಾಡ ಸೇರಲು । ನಡೆಸಿದ ವಿಧಿಯೆಂದು ಮರುಗೇ ॥೨॥

ಭಾಮಿನಿ

ಪ್ರಾಣಪತಿ ನಿಮಗಿನಿತು ದುಃಖದ । ಹಾನಿಗವನತಿ ಗೈದಳಧಮಳ । ಮಾನವಂತರೆ ಕ್ಷಮಿಸಿ ಕಾವುದೆನಲ್ಕೆ ಭೂರಮಣಾ ॥ ಏನಮಾಡುವುದಿವಕೆ ಕರ್ಮವ । ಶ್ವಾನೆ ಮೀರುವರಾರು ಭುವನದಿ । ಮಾನುನೀ ಮಣೆ ಬಾರೆ ಎನುತೊಳ ಸರಿಯೆ ಬಳಿಕಿತ್ತಾ ॥೧॥
ಖ್ಯಾತೆ ಶ್ರೀಯಲದೇವಿಯೊಂದಿನ । ಪ್ರೀತ ಜಿನದತ್ತನೊಳು ಒರೆದಳು । ಮಾತುಳನು ಮಧುರೆಯಲಿ ಆಳುವನಧಿಕ ತೇಜದಲೀ ॥ ಆತ ಪಡೆದಿಹ ಕನ್ಯೆಯನು ಸಂ । ಪ್ರೀತಿಯಲಿ ನೀ ವರಿಸಿ ಮುಂದಕೆ । ಧಾತ್ರಿಯಲಿ ವೈಭವದಿ ಮೆರೆಯೆಂದೆನಲು ಮುದವಾಂತೂ ॥೨॥

ಅಂಕ ೪

ವಾರ್ಧಿಕ್ಯ

ಓಲಗದಿ ಜಿನದತ್ತನೊಂದಿಸದಿ ಮೆರೆಯುತಂ । ಶೀಲವತಿ ಜನನಿ
ಪೇಳಿಹ ನುಡಿಯ ನೆನೆವುತಂ । ಮೂಲ ಗುರುವರ ವಚನದಂದದಲಿ ಕರೆಸಿ
ದನು ಅನುಕೂಲನಾಯಕನನೂ ॥ ಪೇಳಿದಂ ತನ್ನಿರವ ಮಾತೆಯ ಮನೋ
ಗತವ । ಕೇಳು ಕೇಳೆಲೆ ಜಾಣ ಮಧುರೆಗೀಗಲೆ ಪೋಗಿ । ಊಳಿಗವ ನಡೆ
ಸೆಂದು ಕುಳ್ಳಿರಿಸಿ ಸತ್ಕರಿಸಿ ಮಾತನಾಡಿದನು ಮಹಿಮಾ ॥೧॥

ರಾಗ—ಸಾರಂಗ—ಅಷ್ಟತಾಳ

ಅನುಕೂಲ ನಾಯಕ ಕೇಳೂ । ಚೆಲ್ವ । ವಿನಯ ವಿಭೂಷಣ ಶಾಂತಾ ಕೃಪಾಳೂ ॥ ಮನೆಯನು ಬೆಳಗಲು । ಮನ ಮಾಡಿಹಳು ಮಾತೆ। ಘನ ವೇಗದೊಳು ನೀನು ವಿನಯದಿ ಪೋಗಯ್ಯ ॥೧॥ ಮಧುರೆಯರಸ ವೀರಪಾಂಡ್ಯಾ । ಮತ್ತಾ । ಚದುರ ಸಹೋದರ ನಾ ಚಂದ್ರಪಾಂಡ್ಯಾ ॥ ಅದುಭುತರಿಹರೈಸೆ । ಮುದದಿಂದ ಪೆತ್ತಿಹ । ಚದುರೆಯರನು ತಂದು । ಒದಗಿಸು ಬಂಧುತ್ವ ॥೨॥

ಭಾಮಿನಿ

ಪೊದಲಿ ಮಾತೆಯು ಭ್ರಾತೃ ವರ್ಗವು । ಮುದವು ಮೂವಯ್ಯರಿಗೆ ಕಾಣಿಕೆ । ವಿಧ ವಿಧದ ಉಡುಗೊರೆಯು ನೀಡುವೆ ಲಿಖಿತ ಪೊದಲಾಗೀ ॥ ಸದನುಲದಿ ನೀ ಕೊಡುತ ಕ್ಷೇಮದಿ । ಒದಗಿಸೈ ಬಂಧುತ್ವ ಗಾಢದಿ । ವಿದಿತ ಹೃದ್ಗತವಿದನು ನಡೆಸೆಂದೆನಲು ಪೇಳಿದನೂ ॥೧॥

ರಾಗ—ಸೌರಾಷ್ಟ—ತ್ರಿವುಡೆತಾಳ

ತಡವಿದೇತಕೆ ವೀರ ನೇಮವ । ಕೊಡು ಕೋಡೀಕ್ಷಣ ಗಮಿಸಿ ಮಧುರೆಗೆ । ಒಡಬಡಿಸಿ ಬಹೆ ವೀರಪಾಂಡ್ಯನ । ಸಡಗರದೊಳೂ ॥೧॥ ನುಡಿಗೆ ಹಿಗ್ಗುತ ಜನಪ ವೀಳ್ಯವ । ಕೊಡಲು ನಮಿಸುತ ತುರಗವೇರಿದ । ನಡೆದನಬ್ಬರದಿಂದ ವಾಘೆಯು । ಝಡಿದು ವೀರಾ ॥೨॥

ವಾರ್ಧಿಕ್ಯ

ಪಯಣ ಪಯಣದ ಮೇಲೆ ಪರಿವಾರ ಸಹಿತಾಗಿ । ಭಯ ನಿವಾರಣ ಜಿನೇಶನ ಪಾದಪದ್ಮಗಳ । ನಯದಿಂದ ಸ್ಮರಿಸುತ್ತ ಮಧುರೆಗೈತಂದು ಜಿನ ಮಂದಿರದಿ ಬೀಡ ಬಿಡುತಾ ॥ ಜಯ ಜಯತು ಮಾತೆ ಪದ್ಮಾವತಿಯೆ ಗುಣಗನಿಯೆ । ಭವದಿ ಜಿನದತ್ತನಂ ಪೊರೆ ದಯಾಮಯಿ ನಿನ್ನ । ದಯೆ ಯಿಂದ ಸಕಲ ಸಿದ್ಧಿಪುದೆಂಬರೈಸೆ ಪದಪದ್ಮಗಳೆ ಗತಿಯೆಂದನೂ ॥೧॥

ರಾಗ—ಸಾಂಗತ್ಯ—ರೂಪಕತಾಳ

ಉದಯದಿ ಭವ್ಯರ ಕಂಡು ಕೈ ಮುಗಿಯಲು । ಸದಯರು ಮನ್ನಿಸು ತಿರಲೂ ॥ ಉದಯಾಸ್ತ ದಿನಮಾನ ಉರುಳಲು ದುಮ್ಮಾನ । ಒದಗಲು

ರಾತ್ರಿ ನಿದ್ರೆಯೊಳೂ ||೧|| ಅನುಕೂಲ ನಾಯಕ ಕೇಳಯ್ಯ ದಿನ ದಿನ | ಜನಪತಿ ಗೈವ ಅರ್ಚನೆಗೇ || ಜಿನದೇವ ನೆಕ್ಷೆಯರಿಲ್ಲಿಗೆ ಪುಷ್ಪವ | ಘನವೇಗ ತಂದು ಒಪ್ಪಿಪರೂ ||೨|| ಆರೇಳು ಮಾಸಕೊಂದಾವರ್ತಿ ಸಭೆಗೈವ | ಭೂರಮಣನು ಕಾರಣೇಕಾ || ಸೇರುವನಲ್ಲನೀ ಹಂಚಿಕೆ ಎಸಗೆಂದು | ವೀರ ವಾಣಿಯು ಕೇಳಿಸಿದುದೂ ||೩||

ಭಾಮಿನಿ

ಮಿಂಚಿನಂದದಿ ಎದ್ದು ಯೋಚಿಸಿ | ಹಂಚಿಕೆಯ ಹೂಡುವರೆ ನಿಶ್ಚಲ | ಚಿಂತನೆಯೊಳಾಗರ್ಚಿಸಿದ ಮಾನಸ ಮನೋಜೆಯಲೀ || ವಂಚನೆಯ ಹರಿದೊಗೆದು ರಕ್ಷಿಸು | ಪಂಕಜಾಕ್ಷಿ ಪವಿತ್ರೆ ಶಕ್ತಿಯ | ಸಂಚಯವ ಕರುಣಿಸುತ ಪೊರೆ ಪದ್ಮಾಂಬೆ ಶರಣೆನಲೂ ||೧||

ರಾಗ—ಭೈರವಿ—ಏಕತಾಳ

ಪದುಮಾವತಿಯನು ನೆನೆಯೇ | ಜಗ | ದದುಭುತವೇನೆಂದರಿಯೇ || ಮುದಿಸಿದ ಮಂತ್ರಾಕ್ಷಿಯಲೀ | ವಿಧ ವಿಧದಲಿ ನರ್ತಿಸಿ ಕನಲೀ ||೧|| ಸಿಡಿಲಿನ ಮರಿಯಂದದಲೀ | ಭೂ | ವಡಬಾನಲದಂದದಲೀ || ಸಡಗರದಲಿ ದೇವತೆಯೂ | ಬರೆ | ನಡುಗುತಿರಲು ಧಾರುಣಿಯೂ ||೨||

ವಾರ್ಧಿಕ್ಯ

ಪದುಮಾಂಬೆ ಮೊರೆ ಕೇಳಿ ಕಳುಹಿದಳು ನಮ್ಮವನು | ಬೆದರಬೇಡೆಲೆ ನಾನು ಪರಿವಾರ ದೇವತೆಯು | ಮುದದಿಂದ ಬೆಸಸೀಗ ಕಾರ್ಯಗಳನೆಂದು ಭೋರ್ಗುಡಿಸೆ ಸಂತೋಷದಿಂದಾ || ಮುದವಾಂತೆನೆಲೆ ತಾಯೆ ಜಿನಯಕ್ಷೆಯರು ಪುರಕೆ | ಸದರದಿಂ ಪುಷ್ಪಗಳನರ್ಚನೆಗೆ ತರುತಿಹರು | ಯಿದ ನಿಲಿಸಿ ನೃಪ ದರ್ಶನವ ಪಡೆವ ಯೋಗವನು ಕರುಣಿಪುದು ಮಾಯೆಯಿಂದಾ ||೧||

ರಾಗ—ಮಾರವಿ—ಏಕತಾಳ

ಅಭಯವನಿತ್ತಾ ಕ್ಷಣದಲಿ ಮಾಯವ | ನಭಕಡರುತ ಬೀರೀ || ರಭಸದಿ ಪುಷ್ಪವ ತರುತಿಹ ಯಕ್ಷೆಯರುಭಯರ ಪುಡುಕುತಿರೇ ||೧|| ಜಿನದೇವನ ಪದದ್ವಯ ಕಿಂಕರರಾ | ಗನುಪಮ ಶ್ರದ್ಧೆಯೊಳೂ || ಜಿನನಾಥನ

ನಿತ್ಯಾರ್ಚನೆಗೆನುತಲಿ ಘನ ಸುಮಗಳ ತರಲೂ ॥೨॥ ಧಿರುರೇ ಪಿಕ್ಕದಿ ರೆಸ್ನುತ ತಡೆಯಲು । ಪರಮಾಶ್ಚರ್ಯದಲೀ ॥ ಪರ ದೇವತೆಯಳ ಶೀವಿಯು ನೀಕ್ಷಿಸಿ । ಸರಿಸೆಂದಳು ಯಕ್ಷೀ ॥೩॥ ಜಿನನಾಥನ ಪದ ಕಿಂಕರ ಪಾಂಡ್ಯನ । ಘನತರದರ್ಚನೆಗೇ ॥ ವಿನಯದಿ ಪುಷ್ಪವನೊಯ್ಯುವ ಸಮಯಕೆ । ಮನ ಬಂದುದೆ ತಡೆಯೇ ॥೪॥ ತಡೆಯದೆ ಬಿಡೆ ನಾ ಸಡಗರ ನಿಲಿಸುವೆ । ಧಡಿಗರೆ ವಂಚನೆಯಾ ॥ ತೊಡಿಸುತ ಜನಪನ ಭೇಟಿಯ ನೀಡದೆ । ಜಡತೆಯ ಬೀರಿಹಿರೀ ॥೫॥ ಭಯಭಕ್ತಿಗಳನ್ವಯ ಹೆಸರಾದುದು । ಜಯ ಜಿನನೆಂದೆನುವಾ ॥ ನಯದಲಿ ಸೇವಿಪ ಭಕ್ತರ ಕಾವುದು । ನಿಯಮವಿದೇನ್ ಪೊಸತೂ ॥೬॥ ಜನತತಿಗನುದಿನ ದರುಶನ ನೀಡುತ । ಮನವೊಲಿದನು ದಿನದೀ । ಘನದುದ್ಯವಾಗ್ಯೈವುದು ರಾಜನಕ್ರಮ । ಮನವನು ಕೆಡಿಸಿದಿರೀ ॥೭॥ ಜಿನ ದೇವನ ನೇಮದಿ ಗೈಯುವೆ ವಿದು । ಮನದಲಿ ನೀವ್ ತಿಳಿದೂ ॥ ಅನುವನು ಕರುಣಿಸಿ ಕಾವುದು ಧರ್ಮವ । ನನುಮಾನಿಸದಿಂತೂ ॥೮॥ ಜಿನದತ್ತನ ಸಖ ಬಂದಿಹ ಭೂಪನ । ಘನ ದರ್ಶನಕೆನುತಾ ॥ ಮನದಲಿ ತಪಿಸುತ ಪ್ರಾರ್ಥಿಸೆ ಬಂದೆವು । ಕ್ಷಣದಲಿ ನೀವ್ ತೊಲಗೀ ॥೯॥

ಭಾಮಿನಿ

ಭೂರಿ ಕೋಪಾಟೋಪದಿಂದಲಿ । ಧಾರುಣಿಯು ಕಂಪಿಸುವ ತೆರದಲಿ । ಧೀರ ಯಕ್ಷಿಯರುಭಯರಲಿ ಪರಿವಾರ ದೇವತೆಯೂ ॥ ಘೋರತರ ಧುರವೆಸಗುತಿರಲಾ । ದೂರದಿಂ ನಭ ವಚನ ಕೇಳಿತು । ವೀರ ಜಿನದತ್ತನನು ಸಕಲರು ಕಾವುದೆಂದೆನುತಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಧುರ ಬೇಡ ತಡೆಯಿರಿ । ಬರಿ ಮಾಯೆಯಲ್ಲವು । ಪರಿಗಳನಾಲಿಸಿ ನಭದಾ ॥ ಶರಣನಾ ಜಿನದತ್ತ । ಪೊರೆವುದು ನ್ಯಾಯವು । ಬರಿದೇಕೆ ಹಳಚಾಟವೆನುತಾ ॥೧॥ ಸುಮಗಳ ಸಹಿತ ಯಕ್ಷಿಯರು ಪಿಂತಿರುಗಲು । ಸಮನಾದುದೆಮ್ಮ ಕಾರ್ಯಗಳೂ ॥ ಮಮತೆಯೊಳಿಂದು ಕಾಣಲಿ ನಾಯಕನು ಧಾತ್ರಿ ರಮಣನನೆಂದು ದೇವತೆಯೂ ॥೨॥ ಸರಿಯಲು ಉದಯದ ಪೂಜೆಗೆ ಸುಮಗಳು । ಸರಿಯಾಗಿ ಬಾರದ ಪರಿಯಾ ॥ ಅರಿತಾಗ ಚೋದ್ಯದಿ । ಧರಣಿಪ ರೋಷವ । ಧರಿಸುತ್ತ ಬಂದನೋಲಗಕೇ ॥೩॥

ಭಾಮಿನಿ

ಏನಿದಚ್ಚರಿ ಯಿಂದು ವರೆಗಾ । ನ್ಯೂನತೆಗಳಿಸಿಹಿಲ್ಲ ಪುರಿಗವ । ಮಾನವಾರಿಂದಾಯ್ತು ಕಾಂಬೆನೆನುತ್ತ ತವಕದಲೀ ॥ ಮಾನನಿಧಿ ಪಾಂಡ್ಯೇಶ ತಾನೇ । ಧ್ಯಾನಿಸುತ ಜಿನಪದವ ಭಕ್ತರ । ಭಾನುಪೀಠವನಡರಿ ಮಂತ್ರಿಯೊಳೊರೆದನಿಂತೆನುತಾ ॥೧॥

ರಾಗ—ಕೇತಾರಗೌಳ—ಝಂಪೆತಾಳ

ಸಚಿವೇಶ ಕೇಳು ಪೊಸತಾ । ನಿನ್ನೊಡನೆ । ವಚಿಸುವೆನು ಒಂದು ಮಾತಾ ॥ ಖಚಿತ ಕೇಡಿಂತು ಬಂತೂ । ಯೋಚಿಸಲು । ಉಚಿತ ಧರ್ಮಗಳು ಸಂತೂ ॥೧॥ ಯಾರ ಕೈವಾಡವಿಹುದೋ । ಸುಮವಿಲ್ಲ । ಭೂರಿ ಮಾಯಕವಿಸಹುದೋ ॥ ಕಾರಣವಿದೇನ್ ಬಂದಿದೇ । ಪುರವರವ । ಸೇರಿ ಪುಡುಕೈತ್ವರ್ಯದೇ ॥೨॥ ಮಾನವನು ಖಂಡಿಸಿರುವಾ । ದುಷ್ಟರನು । ಹಾನಿಗೊಳಿಸುತ ಶೌರ್ಯವಾ ॥ ಏನಾದರಿಂದು ಬಿಡೆವೂ । ಧರ್ಮದಲಿ । ಸೇನೆ ತಾ ಪೊರಡಲನುವೋ ॥೩॥

ಭಾಮಿನಿ

ಧಾರುಣಿಯು ಕಂಪಿಸುವ ತೆರದಲಿ । ಭೂರಪುಣನಿರಲಿಂತು ಕದನಕ । ಠೋರ ಸಹಭವ ಚಂದ್ರಪಾಂಡ್ಯನು ಸೇರಿಯೋಲಗವಾ ॥ ಯಾರು ಯಾರಿಂದಾಯ್ತು ಚಿತ್ತದ । ಭೂರಿ ಕ್ರೋಧಗಳೇನೆನುತ್ತಲಿ । ಕ್ರೂರ ಶಕ್ತಿಯು ಪದೆವೆನೆನೆ ಭೂನಾಥನಿಂತೆಂದ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಭಳಿರೆ ಸಹಜನೆ ಕೇಳು ಪುರದಲಿ । ನೆಲಸಿರುವ ಧೂರ್ತರನು ಮರ್ಧಿಸಿ । ಸಲಿಸು ರಾಷ್ಟ್ರದ ಸೇವೆಯೆನೆ ತಾ । ನೊಲಿದು ನುಡಿದಾ ॥೧॥ ಹಿಮಗಿರಿಯ ಕಿತ್ತಿಡುವೆ ಸ್ವರ್ಗದ । ಭ್ರಮೆಯು ತೊಲಗಿಸಿ ಶೈಮಿನಿಯೊಳಾ । ಯಮ ಭಟರ ನುಗ್ಗೊತ್ತಿ ಬಹೆ ನಾ ಸಮರ ಮುಖದೀ ॥೨॥ ಕರುಣಿ ಸಪ್ಪಣೆ ಎಂದು ಮಣಿಯಲು । ಹರಸಿ ಕಳುಹಿದನಾಗ ಮಂತ್ರಿಯು । ವೆರಸಿ ಸೈನ್ಯ ಸಮೇತ ಬಂದನು । ಭರದಿ ಪುರದೀ ॥೩॥ ಕೇರಿ ಕೇರಿಯ ಪೊಕ್ಕು

ಸಕಲರ । ಭೂರಿ ಭಂಗಿಗಳಿಂದಲೀಕ್ಷಿಸಿ । ವಿಾರಿ ಬರೆ ನಾಯಕನ ಕಂಡನು ಊರ ಹೊರಗೇ ॥ ೪ ॥

ರಾಗ—ಘಂಟಾರವ—ಮಟ್ಟೆತಾಳ

ಎಲವೊ ನೀನು ಯಾರು ನಮ್ಮ । ನೆಲವ ಸೇರಿ ಛಲವ ತೋರ್ಪೆ । ಸಲುಗೆಯೇನು ದಿಟವನುಸುರು । ಸ್ಥಳವದಾವುದೂ ॥ ಕುಲ ವಿಲಾಸವರುಹು ಬಂದ । ಕೆಲಸವೇನುದಾರ ಭಟನು । ಅಲಸದೀಗ ಪೇಳು ಬೇಗ ಎನಲಿಕೆಂದನೂ ॥೧॥ ಭೂರಿ ಶಕ್ತಿರೂಪೆ ಜಗದಾ । ಧಾರೆ ದೇವಿ ಪದ್ಮಾವತಿಯು । ಚಾರುಚರಣ ಭ್ರಮರ ಭಕ್ತ ವೀರ ಬಲ್ಲಿದಾ ॥ ಶೂರ ಜಿನದತ್ತಾಖ್ಯ ಬಂಟ । ಊರು ಹೊಂಬುಜಾದ್ರಿ ಬಂದ । ಕಾರಣಂಗಳಿಹುದು ಪ್ರಭುವ ತೋರಿಸೆಂದನೂ ॥೨॥ ಧಿರುರೆ ಬಂಟ ನಿನ್ನ ಮಾಯು । ದೆರಕದಿಂದ ಹಾನಿ ಹೊಂದಿ । ಧರಣಿಪಾಲ ನೊಂದುಕೊಂಡು ಭರದಿ ನಮ್ಮನೂ ॥ ಪುರವ ಪುಡುಕಲೆಂದು ಕಳುಹೆ । ದೊರಕಿಕೊಂಡೆಯೈಸೆ ಭಾಗ್ಯ । ತೆರಳು ಸಭೆಗೆ ಬರದಿರಲ್ಕೆ । ಸೆರೆಯೊಳ್ಳೈವೆವೂ ॥೩॥

ಭಾಮಿನಿ

ಜನಪನೆನು ಕಾಣುವುದೆ ತನ್ನಯ । ಘನ ಮಹೋನ್ನತದಾಶೆ ಬಹೆನಾ । ಸನುಮತವು ಸೆರೆಯೇಕೆ ಎನುತಾ ಕ್ಷಣದಿ ಕಾಣಿಕೆಯಾ ॥ ವಿನಯದಿಂ ಕೈಕೊಂಡು ಬರಲಾ । ದಿನಪನುದಯದಿ ಯೋಲಗಕೆ ತಾ । ಭುವನಪತಿ ಬರಲವನ ಕರತಂದರು ಮಹೋತ್ಸವದೀ ॥೧॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಪರಿಕಿಸುತಲಾ ನೃಪತಿ ನೋಜಿಗ । ವೆರಸಿ ಕೇಳಿದನೀತನ್ಯಾರೆನೆ । ಚರಣದಲಿ ಕಾಣಿಕೆಯನೀವುತ । ಭರದಿ ನಮಿಸೀ ॥೧॥ ರಾಜಶೇಖರ ಕೇಳು ಹೊಂಬುಜ । ರಾಜನಾ ಜಿನದತ್ತ ಕಳುಹಿದ । ತೇಜಿಯೇರುತ ಬಂದೆ ನಿಲ್ಲಿಗೆ । ತೇಜಸಿಧಿಯೇ ॥೨॥ ಏನು ಕಾರಣ ಬಂದೆ ಕಾಣಿಕೆ । ಗೇನು ಪೊಸತಿದೆ ಪೇಳು ಯಿಂದಿನ । ಮಾನಭಂಗದ ಹಾನಿ ನೂತನ । ವೇನು ಪೇಳೂ ॥೩॥

ವಾರ್ಧಿಕ್ಯ

ಧರಣೀಶ ಕೇಳು ಪದ್ಮಾವತಿಯ ಪದಭಕ್ತ । ಪರಮ ಧಾರ್ಮಿಕ ವೀರ ಜಿನದತ್ತ ಕಾಣಿಕೆಯ । ಚರಣದೆಡೆಗಾಗಿ ಲಿಖಿತವನಿತ್ತು ಕಳುಹಿದನು ಪೊಸತೇನು ಕಾಣೆನೆಂದಾ ॥ ಬರವಾಯ್ತು ಷಡ್ಮಾಸಪರಿಯಂತ ಸನ್ನಿಧಿಯ । ದರುಶನವು ದೊರಕಿತಿಂದಿನಲಿ ಮುದವಾಂತೆನಾ । ಪರಿಕಿಸುತ ಲೇಖನವ ಪ್ರತಿಲೇಖ ಕೊಡುವುದೆನೆ ವಾಚಿಸಿದ ತೋಷದಿಂದಾ ॥೧॥

ರಾಗ—ಕಾಂಬೋಧಿ—ಝಂಪೆತಾಳ

ಚರಣಾರವಿಂದಗಳ । ಸ್ಮರಿಸಿ ವಂದಿಸಿ ದೈನ್ಯ । ಭರಿತ ಭಾವದಿ ತಮ್ಮ ಅಳಿಯಾ ॥ ಪುರ ಹೊಂಬುಜಾಧಿಪತಿ । ವರದೆ ಪದ್ಮಾವತಿಯ । ಕಿರಿಯ ಕಿಂಕರ ಗೈವನಮಿಸೀ ॥೧॥ ಮಾತೆ ಶ್ರೀಯಲದೇವಿ । ಪ್ರೀತಿ ಪೂರ್ವಕ ವಾಗಿ । ರೀತಿಗಳ ಪೇಳಿದಂದದಲೀ ॥ ಈತನನುಕೂಲ ನಾಯಕ ಸನ್ನಿಧಾನ ದಲಿ । ಮಾತಾಡುವನು ಭಕ್ತಿಯಿಂದಾ ॥೨॥ ಜಾತೆಯರ ಪರಿಣಯದ । ರೀತಿಯಲಿ ಕರುಣಿಸುತ । ಖ್ಯಾತ ಕಾಪಾಡುವುದು । ನೀತಿಗಳ ತಿಳಿದೂ ॥ ಸೇತು ಪರ್ಯಂತ ತವ ಕೀರ್ತಿಗಿದು ಕಲಶವೆಂ । ದಾ ಮಾತೆ ಪೇಳ್ದಂತೆ ಬರೆದೇ ॥೩॥

ಭಾಮಿನಿ

ಓದಿ ಲೇಖನ ಧಾರುಣಿಪ ಸಹ । ಜಾದ್ಯರನು ಕರೆದೆಂದ ಬಂದಿಹ । ಸೋದರಳಿಯನ ಕಡೆಯ ಪ್ರತಿನಿಧಿ ಯಿವನ ಸತ್ಕರಿಸೀ ॥ ಮೋದವುಯವೀ ವರ್ತಮಾನವ । ಸಾಧ್ವಿ ಚಿತ್ತ್ರನಿಗೊರೆದು ಮನದಿರ । ವಾದರಿಸಿ ಲೇಖನವ ಕರುಣಿಪೆನೆನುತ ಒಳ ಸರಿಯೇ ॥೧॥

ರಾಗ—ಮಧ್ಯಮಾವತಿ—ತ್ರಿವುಡೆತಾಳ

ಸತಿ ಶಿರೋಮಣಿ ಸಾಧ್ವಿ । ರತಿರೂಪೆ ಸುಗುಣೇ ॥ ಪತಿಯಾಗಮನ ಕಂಡು । ಮತಿಯೊಳು ಜಾಣೇ ॥ ಅತಿ ಮುದ ಸೂಸುತ ಹಿತದಿಂದ ಪದಕೇ । ನುತಿಸುತ್ತ ಮಣಿಯಲು । ಪೃಥುವೀಶನದಕೇ ॥೧॥

ರಾಗ—ಕೇತಾರಗೌಳ—ಅಷ್ಟತಾಳ

ಕಾಂತೆ ಕೇಳೀಗೆನ್ನ ಭಗಿನಿ ಶ್ರೀಯುಲಿ ಪೆತ್ತ । ಕಂತುಸ್ವರೂಪ ಚೆನ್ನಿಗಗೇ ॥ ಚಿಂತಿಸದೆಮ್ಮ ಸುತೆಯುಸೀಯಬೇಕೆಂಬ । ಅಂತರಾರ್ಥದಿ ಲಿಖಿತವನೂ ॥೧॥ ಕಾಣಿಕೆ ಸಹಿತಿಲ್ಲಿ ಕಳುಹಿ ಕೊಟ್ಟಿಹಳೀಗ । ಮಾನವಂತಳೆ ನಿನ್ನ ಮಗಳಾ । ಸಾಗುರಾಗದೊಳೀಯೆ ಏನಾಗಬೇಕೆನೆ । ಮಾನಘನನೆ ಲಾಲಿಸುವುದೂ ॥೨॥

ವಾರ್ಧಿಕ್ಯ

ರಮಣ ಕೇಳ್ ಚೋದ್ಯವಿದು ನಾ ಕಾಣೆನೀ ವರೆಗೆ । ಅಮಮ ತವ ಭಗಿನಿ ಪಡೆದಿಹ ಜಾತನೆಂತಿಹನೊ । ಸಮನಹನೆ ನಮಗವನು ಹೊಂಬುಜಾಪುರಪೆತ್ತ ಯಾರು ಕಂಡಿಹರು ಪೇಳಾ ॥ ಭ್ರಮೆಯಾಂತೆ ನೀ ನುಡಿಯು । ಭುವನಕತಿ ವಿಸ್ಮಯವು । ಕ್ಷಮಿಸು ಮತ್ಕಾಂತ ಅರಿಕೆಯು ಸನ್ನಿಧಿಯೊಳಿಂದು । ಕ್ರಮವಾದ ವಿವರ ಲಾಲಿಪುದೆಂದು ಪೇಳ್ದಳಾ ಸುಮಗಂಧಿ ಮಮತೆಯಿಂದಾ ॥೧॥

ರಾಗ—ಕಾಂಭೋಜ—ಅಷ್ಟತಾಳ

ಲಾಲಿಸು ಪ್ರಿಯ ನೀನೂ । ಅರ್ಚನೆಗಿಂದು । ವೇಳೆಯೊಳ್ ಪುಷ್ಪವನೂ ॥ ಶೀಲ ಯಕ್ಷಿಣಿಯರು । ಕಾಲಕೊದಗದಂತೆ । ಊಳಿಗವನೆಸಗುತಲಿ ಮಾಯದ । ಜಾಲ ಪಸರಿಸಿ ಬಂದ ಧೂರ್ತನು ॥೧॥ ಅನುಕೂಲನಾಯಕನೂ । ವಂಚನೆಯಿಂದ । ಮನವನ್ನು ಕೆಡಿಸಿಹನೂ ॥ ಸನುಮತವಿಲ್ಲವು । ಘನ ದೋಷ ಕೃತ್ಯವು । ಮನದಿ ಗ್ರಹಿಸುತ ಕಳುಹು ಘಮ್ಮನೆ । ಅಣುಗೆಯುಳಸೀವುದು ವಿವೇಕವೆ ॥೨॥

ರಾಗ—ಸೌರಾಷ್ಟ್ರ—ತ್ರಿವುಡೆತಾಳ

ಕಾಮಿನಿಯ ನುಡಿ ಕೇಳಿ ರೋಷದಿ । ಭೂರಮಣ ಕಂಪಿಸುತ ಸರಿನುಡಿ । ಕಾಮಿತಾರ್ಥ ಜಿನೇಶ ಪೂಜೆಯ । ನೇಮ ಕೆಡಿಸೀ ॥೧॥ ತಾಮಸದಿ ಕೃತ್ರಿಮವನೆಸಗುತ । ಸೀಮೆಯೊಳು ವಂಚಿಸಿದ ಧೂರ್ತಗೆ । ಪ್ರೇಮದಣುಗೆಯನಿತ್ತು ಕೆಡಿಸೆನು । ಕಾಮನೆಗಳಾ ॥೨॥ ನೀನು ಕ್ಷೇಮದೊಳಿಹುದೆನುತ್ತಾ । ಕ್ಷೋಣಿಪತಿಯೋಲಗವನೇರುತ । ಭಾಸುತೇಜದೊಳೆಸೆದು ಸಭೆ

ಯೊಳು । ತಾನೆ ನುಡಿದಾ ॥೩॥ ಕರೆಸಿ ಜಿನದತ್ತಾಖ್ಯ ಕಳುಹಿದ । ಪರಮ ಛತ್ರ್ನ ಕಂಡು ಪೇಳಿದ । ಧಿರುರೆ ಒಲ್ಲಿದ ಭಂಡ ಮೂರ್ಖರ । ಕೊರಮ ಕೇಳೂ ॥೪॥ ಜಿನಪದಾರಾಧನೆಯ ಮಾಯದಿ । ಕ್ಷಣದಿ ಕೆಡಿಸಿದೆ ಪಾಪಿ ನಡೆ ನೀ । ತನಯುಳನು ಕೊಡೆ ಧೈರ್ಯವಿದ್ದರೆ । ಜನಪ ಬರಲೀ ॥೫॥ ಪೇಳು ನಿನ್ನೊಡೆಯರಿಗೆ ಶೌರ್ಯದ । ಮೇಳದಲಿ ಸಾಧಿಸಲಿ ಭುವನ ಕ । ರಾಳ ಕೌಶಲ ಬೀರಿ ವರಿಸಲಿ । ಶೀಲವತಿಯಾ ॥೬॥ ಎಂದೆನುತಲಾರ್ಭಟಿಸೆ ಧರಣಿಪ । ವಂದಿಸುತಲನುಕೂಲ ನಾಯಕ । ಚಂದವಲ್ಲಿದು ಭೂಪ ನಿಮ ಗತಿ । ಕುಂದುತಹುದೂ ॥೭॥

ಭಾಮಿನಿ

ಜೇಡನೀ ತೆರ ಗೈದು ಕಾರ್ಯಕೆ । ಮಾಡದಿರು ವಿಘ್ನವನು ಸಾರುವೆ। ರೂಢಿಪತಿ ಜಿನದತ್ತನನು ಮನ್ನಿಪುದು ಧರ್ಮವಲೇ ॥ ಆಡಬೇಡಿದ ತೊಲಗು ತೊಲಗೆನೆ । ಪಾಡ ಕಾಂಚೆಸು ಘುರದಿ ಮೆರೆಪಲಿ । ಮೋಡಿಗಳ ನೀನಾಡಿ ಫಲವಿಲ್ಲೆಂದು ಘರ್ಜಿಸಿದಾ ॥೧॥

ರಾಗ—ಸಾಂಗತ್ಯ—ರೂಪಕತಾಳ

ಮನದನುತಾಪದಿ । ಜನನಾಥನಡಿಯಿಂದ । ನನುಕೂಲ ನಾಯಕ ಬರುತಾ ॥ ಜಿನದತ್ತರಾಯನ ಸಂಧಿಸಿ ವಾರ್ತೆಯ । ನನುನಯದಿಂದ ವಿಸ್ತರಿಸೇ ॥೧॥ ಕೇಳಿ ಕೌತುಕವಾಂತು । ಜನನಿಯ ಬಳಿಗೈದಿ । ಹೇಳಿ ಕೊಂಡನು ವಿವರಗಳಾ ॥ ಶೀಲ ಸಿದ್ಧಾಂತಕೀರ್ತಿಗಳಿಂಗೆ ಪೊಡಮಟ್ಟು । ಮೇಲೇನ ಗೈವ್ರದೆಂದೆನಲೂ ॥೨॥ ಕ್ಷಿತಿಯೊಳುತ್ತಮ ಧರ್ಮ । ಚ್ಯುತಿ ಬಾರದಂತೆ ನೀ । ಕೃತಿ ಎಸಗುವುದೆ ಕರ್ತವ್ಯಾ ॥ ಮತಿವಂತನಾಗೆಂದು । ಹಿತದಿಂದ ಹರಸಲು । ವ್ರತಿಗೆ ವಂದಿಸಿ ಪೊರವಂಟಾ ॥೩॥

ಭಾಮಿನಿ

ಮಾತೆಯುಭಿಮತ ಗುರುವನುಗ್ರಹ । ಖ್ಯಾತೆ ಪದ್ಮಾವತಿಯ ಕೃಪೆ ಯಿರೆ । ಧಾತುಗೆಡಿಸುತ ಮಾವನನು ವರಿಸುವೆನು ಕನ್ನೆಯರಾ ॥ ಭೀತಿ ಗಳದೇನೆಂದು ಡಂಗುರ । ನಾತ ಸಾರುತ ಸೈನ್ಯ ಶರಧಿಯ । ಪ್ರೀತಿಯೊಳು ಸಂಘಟಿಸಿ ನಡೆಸಿದ ಮಧುರೆಗಾಕ್ಷಣದೀ ॥೧॥

ರಾಗ—ಸೌರಾಷ್ಟ—ತ್ರಿವುಡೆತಾಳ

ವೀರ ಚಿತ್ರಧ್ವಜನು ತೇಜಿಯು । ಸೇರಿ ಸೈನ್ಯ ಸಮುದ್ರ ಮಧ್ಯದಿ । ಭೂರಿ ವಿಕ್ರಮದಿಂದ ಬರುತಿರೆ । ಧಾರುಣೀಶಾ ॥೧॥ ಗಜವಡರಿ ಗಂಭೀರ ಚಿತ್ತದಿ । ತ್ರಿಜಗಮಲ್ಲನು ಭಾನು ಪ್ರಭೆಯಲಿ । ವಿಜಯ ಪೊಂದಲು ಬಯಸಿ ಬಂದರು । ರಜನಿ ಎನುತಾ ॥೨॥ ನಡೆವ ದಳಪದ ಹತಿಯು ರಭಸಕೆ । ನಡುಗಿತವನೀ ತಳವು ನಭದಲಿ । ಕಡುಮಸಗಿ ಕೆಂಧೂಳು ಪಸರಿಸುತೊಡನೆ ಪೊಳೆಯೇ ॥೩॥ ಬರಬರುತ ಪುರವರದ ಬಾಂಪ್ಯಗೆ । ಚರನ ಕರೆದುಸಿರಿ ದರು ಹೊಂಬುಜ । ಪುರದಧಿಪ ಜಿನದತ್ತ ಬಂದಿಹ । ಧುರದೊಳೆಂದೂ ॥೪॥ ಪರಮ ವಿಕ್ರಮ ಮೆರಸಿ ವಧುಗಳ । ದರದರನೆ ಎಳೆದೊಯ್ದು ವರಿಸುವ । ಧುರ ಪರಾಕ್ರಮ ತೋರಬಹುದೆಂ । ದರುಹಿ ಕಳುಹೇ ॥೫॥

ಭಾಮಿನಿ

ತರಹರಿಸಿ ಚರರಾಗ ಭರದಲಿ । ಧರಣಿಪನ ಓಲಗವ ಸೇರುತ । ಚರಣ ಕೆರಗುತಲೆಂದರಾ ಭಯ ಭರಿತ ಚಿತ್ತದಲೀ ॥ ಧುರವ ಬಯಸುತ ಬಂದ ಧೀರರ । ಪರಿಕಿಸಲು ಪೊರಡೇಳು ಏಳೆನೆ । ಮರುಳು ಭಟರ್ಕೈ ತಂದಿಹರೆ ಬೆದರದಿರಿ ನೀವೆಂದಾ ॥೧॥

ರಾಗ—ಮಾರವಿ—ಏಕತಾಳ

ಕೇಳಿರಿ ಸೇನಾ । ಜಾಲದ ಸುಭಟರೆ । ಧಾಳಿಯೊಳೈತಂದೂ ॥ ಮೇಲೆನಿಸುವ ಪರಿ । ಕಾಳಗಕೊದಗಲು । ಏಳಿರಿ ನೀವಿಂದೂ ॥೧॥ ಹೊಂಬುಜ ಪುರಪತಿ । ಅಂಬುಜ ಮುಖಿ ಪ । ದ್ಮಾಂಬೆಯ ಪದಭಕ್ತಾ ॥ ನಂಬಿದ ಬಂಟರ । ನಂಬುತ ಬಂದಿಹ । ಸಂಭ್ರಮವೇನೆಂಬೆ ॥೨॥ ಪರ ಪಲ್ಲವ ಸೋದರಿಯಳ ತನುಭವ । ಸರಿ ಸಮ ಹೊಯ್ದಾಡೀ ॥ ಧುರದಲಿ ಓಡಿಸಿ । ಧರಿಸಿರಿ ಕೀರ್ತಿಯ । ಪೊರಡಲಿ ಮಾರ್ಬಲವೂ ॥೩॥

ಭಾಮಿನಿ

ಧಾರುಣಿಪ ಹೊಯ್ಸಿದನು ಡಂಗುರ । ಕೇರಿ ಕೇರಿಯೊಳಧಿಕ ಬಿರುಸಿನ । ಭೂರಿ ಕದನ ಕಠೋರ ಪಡೆಗಳು ಸೇರುತೊಗ್ಗಿನಲೀ ॥ ವೀರ ದಳಪತಿ ಅಗ್ನಿ

ಮುಖ ಧುರ । ಧೀರ ಚಂದ್ರಾಖ್ಯನು ಸಮೇತ ಸ । ವಾರಿ ಪೊರಟ್ಟೈ ತಂದು ನಿಂದನು ನೃಪತಿ ಶೌರ್ಯದಲೀ ॥೧॥

ರಾಗ—ಶಂಕರಾಭರಣ—ಮಟ್ಟೆ ತಾಳ

ವೀರ ಪಡೆಯು ಕಂಡು ಕ್ರೋಧ । ವೇರಿ ಮುತ್ತಲದನು ಕಂಡು । ಧೀರ ಚಂದ್ರಪಾಂಡ್ಯ ನುಡಿದ । ಭೂರಿ ಕೊಬ್ಬಿದಾ ॥ ಸಾರ ಶಕ್ತಿವಂತರಾರು ತೋರಬಹುದು ಶೌರ್ಯವೆನಲು । ಚಾರು ಚಿತ್ರತೇಜ ಚಾಪ । ತೋರಿ ನುಡಿದನೂ ॥೧॥ ಧಿರುರೆ ಚಿತ್ರತೇಜ ನೀನು । ಧರಣಿಪತಿಯ ಸೇನೆಗಧಿಪ । ತರವಿದೇನೊ ಧುರವು ಬರಿದೆ । ತರುಣಿಮಣಿಯಳಾ ॥ ಕರುಣಿಸುತ್ತ ಬಂಧು ಗಳನು । ಪೊರೆವ ಯತ್ನಗಳನು ಬಿಟ್ಟು । ಮರುಳುತನವ ಗೈವ ಪರಿಯ । ನಿರದೆ ಪೇಳೆಲಾ ॥೨॥ ಭಳಿರೆ ಚಿತ್ರತೇಜ ಪಾಂಡ್ಯ । ವಲಯದಧಿಪನನುಜ ತಿಳಿಯೊ । ಛಲದಿ ಮಲ್ಲ ಚಂದ್ರಪಾಂಡ್ಯಗಳುಕೆ ನಿನಗೆಲೀ ॥ ಲಲನೆಯಾಸೆ ಬಿಟ್ಟು ಪೋಪು । ದೋಳಿತು ಧುರದಿ ಭಂಗ ಪೊಂದಿ । ಕುಲದ ಕೀರ್ತಿ ಕಳೆಯ ಲ್ಯಾಕೆ । ತಿಳಿಯೊ ಗಾಢದಿ ॥೩॥ ಬಿಟ್ಟುಪೋಪರಲ್ಲವಾವು । ಸೃಷ್ಟಿ ಗೊಡೆಯ ಚಕ್ರವರ್ತಿ । ಕುಟ್ಟಿ ರಣದಿ ನಿಮ್ಮನೆಲ್ಲ । ಥಟ್ಟನ್ವೊಯ್ವೆವೂ ॥ ದಿಟ್ಟತನವ ನುಡಿಯದಿಂತು । ಕೊಟ್ಟು ಬಿಡುವುದೊಳಿತು ಪಂಥ । ಪೆಟ್ಟು ತಿಂದು ಸಾಯಬೇಡ ಕೆಟ್ಟು ಪೋಪೆಲಾ ॥೪॥

ರಾಗ—ಭೈರವಿ—ಏಕತಾಳ

ಮೂದಲಿಸುತಿರಲಾಗಾ । ಮಧು । ರಾಧಿಪ ಪಾಂಡ್ಯನು ಬೇಗಾ ॥ ಕಾದಲು ಜಿನದತ್ತನನೂ । ತಾ । ಮೋದದಿ ಕರೆದುಸುರಿದನೂ ॥೧॥ ಮಧುರಾಧಿಪನಾಗಿಹೆನೂ । ರಿಪು । ಮದಗಜ ಕಂಠೀರವನೂ ॥ ಚದುರನೆ ಬಂದಿಹುದೇನೂ । ಧುರ । ಕೊದಗೆಲೊ ಹೊಂಬುಜ ಭಾನೂ ॥೨॥ ತರಳೆ ಯುರನು ಬೇಗಿತ್ತೂ । ಸುರ । ಚಿರ ವೈವಾಹದ ಹೊರತೂ ॥ ಧುರವೆಸಗುವ ಪರಿ ಏನೂ । ತರ । ಹರಿಪುದು ಮಾನಸವಿನ್ನೂ ॥೩॥ ಸುಲಭವೆ ಪರಿಣಯ ತರಳಾ । ಭೂ । ಲಲನೆಯು ದರ್ಪದ ಮರುಳಾ ॥ ಕೊಳುಗುಳದಲಿ ಮೆರೆಸು ವುದೂ । ಸೋ । ಲಿಸುತೆಮ್ಮನು ವರಿಸುವುದೂ ॥೪॥

ರಾಗ— ಭೈರವಿ— ಅಷ್ಟ ತಾಳ

ಛಲದಿ ಶಾಭಾಸು ಮಾವಾ । ಯಿಾ । ತೆರದಿಂದ ಬಳಲಿಪುದ್ಯಾಕ ಭಾವಾ ॥ ಛಲವಿದ್ದರಾತು । ಕೊಳ್ಳುವುದೆಂದು ಬಾಣದ । ಮಳೆಗರೆದಿರಲು ಕಂಡೂ ॥೧॥ ಜಿನದತ್ತ ಶೂರನಯ್ಯಾ । ಖಂಡಿಪೆ ನೋಡು । ಘನದತ್ತ ಸಿಡಿಯು ನ್ಯಾಯಾ ॥ ನಿನಗೊರದಪೆ ಬೇಗ । ಮನೆಗಾಗಿ ತೆರಳಯ್ಯ । ಜನುಮವ ಕೆಡಿಸ ಬೇಡಾ ॥೨॥ ಆಗದಾಗದು ಸುಮ್ಮನೇ । ನಾರಿಯು ಬಿಟ್ಟು । ಪೋಗುವನಲ್ಲ ತಾನೇ ॥ ಬೇಗನೆ ಕೊಡದಿರೆ । ಬಾಗುವನಲ್ಲ ಸ । ರಾಗದಿ ಸೋಲಿಸುವೇ ॥೩॥ ಎನಲಾಗ ಪಾಂಡ್ಯ ಭೂಪಾ । ತಾಳಿನುತಲಿ । ಅನಲಾಸ್ತ್ರ ಬಿಡಲು ಕೋಪಾ ॥ ಜಿನದತ್ತ ಜಲಧಿ ಬಾಣದಿ ಪರಿಹರಿಸುತ್ತ । ಇನಶರವೆಸೆಯೆ ಕಂಡೂ ॥೪॥ ತಿಮಿರ ಶರದಿ ಖಂಡಿಸೀ । ಹೂಂಕರಿಸುತ್ತ । ಮಮಕಾರದೊಳು ಸಹಸೀ ॥ ಸಮನ ಮಾಡುತ ಭೂಪ । ಜಿನಯಕ್ಷೆಯರ ಬೇಡಿ । ಭುವಿಗೆ ಗೋಚರಿಸಿದರೂ ॥೫॥

ಭಾಮಿನಿ

ಮಾಯ ಬೀರುತ ಯಕ್ಷಿಯರು ಬರ।ಲಾಯಿತದಕೇನೆಂದು ಹೊಂಬುಜ। ರಾಯ ಪ್ರಾರ್ಥಿಸೆ ಬಳಿಕಲಾ ಪರಿವಾರ ದೇವತೆಯೂ ॥ ನೋಯಬೇಡೆಲೆ ಭಕ್ತ ನಿನಗೆ ಸ । ಹಾಯ ಮಾಡುವೆನೆನುತ ಭೀಕರ । ಛಾಯೆಯಲಿ ಜಿನ ಯಕ್ಷೆಯರ ಮೇಲ್ವರಿಯೆ ಭೀಕರಿಸೀ ॥೧॥

ವಾರ್ಧಿಕ್ಯ

ನಭಕಡರಿ ದೇವತೆಯು ಘುಡು ಘುಡುಸೆ ಬ್ರಹ್ಮಾಂಡ । ದುಭಯ ಬಲ ಕಂಗೆಟ್ಟು ಬಾಯ್ದೆರೆದು ನಿಂದಿರಲು । ತ್ರಿಭುವನಂ ಕಂಪಿಸಲು ಉತ್ಪಾತ ತೋರಲಾ ಪ್ರಭು ಜಿನೇಶ್ವರ ಚಿತ್ತದೀ ॥ ವಿಗುವರಿವುದೈ ಕಾರ್ಯ । ಅಭಯ ಸೀಯಲು ಬೇಕು । ಸುಭಟಾಗ್ರಗಣ್ಯ ಬಾಂಧವರೈಸೆ ಯೋಚಿಸಲು । ನಭ ವಚನವನ್ನುಸುರಿ ಶಾಂತಿಯಂ ಸಾರುವೆನು ಎಂದು ಸಂಕಲ್ಪಿಸುತಲೀ ॥೧॥

"ನಭೋವಾಣಿ"

ರಾಗ—ಸಾವೇರಿ—ತ್ರಿವುಡೆತಾಳ

ಧುರವ ನಿಲಿಸಿರಿ ಶಕ್ತಿರೂಪರೆ । ಧರಣಿಗಿದು ರಂಜಿಪುದೆ ಧರ್ಮವೆ ।

ಮರುಳುತನವೇಕಿನಿತು ಹಿಂಸೆಯು । ಶರಣರಿಂಗೇ ॥೧॥ ಮರೆದು ವೈರವ ಎರಕದೊಳು ನೀ । ವಿರುವುದೇ ಕಲ್ಯಾಣವೆನುತಿರೆ । ಧರಣಿಪರು ಯೋಚಿ ಸುತ ಮನದೊಳ । ಗರಿತರಾಗಾ ॥೨॥ ವೀರಪಾಂಡ್ಯನು ಮೆಚ್ಚುತಳಿಯನ । ಪಾರ ಪೌರುಷವಂತ ಬಾರೆನು । ವಾರ ಮತದಲಿ ಮನ್ನಿಸಿದ ಪರಿ । ವಾರ ಸಹಿತಾ ॥೩॥

ಭಾಮಿನಿ

ಬಂದಿ ಶಾಸ್ತ್ರದಿ ಪರಿಕಿಸಲು ಬೇ । ಕಿಂದು ರಾಯನ ಬಂಟನಾ ಗುಣ । ಸಿಂಧುವೆನಿಪನುಕೂಲ ನಾಯಕನಧಿಕ ಪೌರುಷದೀ ॥ ಅಂದಿನಾ ದಿನ ಸಭೆ ಯೊಳರುಹಿದ । ನೊಂದು ಕೌತುಕಮಯ ಪ್ರವೀಣತೆ । ಸಿಂಧು ಕಾಂಚೆ ನೆನುತ್ತ ಕರೆ ಕಳುಹಿದನು ತ್ವರಿತವಲೀ ॥೧॥

ವಾರ್ಧಿಕ್ಯ

ಧಾರುಣಿಪ ಪಾಂಡ್ಯ ತನ್ನರಸಿಯಳ ಮತದಿಂದ । ಸೀರೆಯರ ಕರೆ ಸಿದಂ ಕುವರಿ ಪದ್ಮಿನಿಯೊಡನೆ । ಸೇರಿಸುತ ಪದಿನೈದು ಕನ್ನೆಯರ ಏಕರೂಪ ದಲಿ ಶೃಂಗಾರ ಗೈದೂ ॥ ಭೂರಿ ವೈಭವದಿಂದ ನೇರಾಗಿ ನಿಲಿಸುತ ಪ್ರ । ವೀರನನುಕೂಲ ನಾಯಕನ ಕರೆದರುಹಿದಂ । ಸೇರಿರುವ ಪದಿನಾರು ಬಾಲೆ ಯರ ಪರಿಕಿಸ್ಯೆ ಪುಡುಕಿ ವಧುವನು ಶೀಘ್ರದೀ ॥೧॥

ರಾಗ— ಮೋಹನ—ರೂಪಕತಾಳ

ಬಂದಿ ಶಾಸ್ತ್ರವ ಗೈದು ಸಂ । ಬಂಧ ದೃಢಗೈದು । ಹೊಂದಿಸು ಕನ್ನೆಯ ದೊರೆಗೇ ॥ ಇಂದು ನಿನ್ನಯ ಶಕ್ತಿ-ಯುಕ್ತಿ ಪ್ರದರ್ಶನ । ಮುಂದಿಯು ಕಾಣಲೆಂದೆನಲೂ ॥೧॥ ಪರಿಕಿಸಿಯನುಕೂಲ ನಾಯಕ ಮನದಲಿ । ಅರರೇ ಚೋದ್ಯವಿದಾಯ್ತೆ ದೊರೆಗೇ ॥ ಸರಿಯಾದ ಕನ್ನೆ ಭೂರನ್ನನ ಸುಕುಮಾರಿ । ಯಿರುವಳು ಯಿವರ ಮಧ್ಯದಲೀ ॥೨॥ ಏಕರೂಪದೊಳಿದ್ದು । ಏಕ ಶೃಂಗಾರದಿ । ಸಾಕಾರದಿಂದೆಸೆಯುವರೂ ॥ ಮೂಕನಾದೆನು ನಾನು । ಏಕಿಂತು ಘಟಿಸಿತು । ಲೋಕದಿ ನಿಂದೆಗಾಸ್ಪದವೂ ॥೩॥ ಜಾಣತನದೊ ಳಿಂದು । ಮಾನದಿಂದಲಿ ಬಂದು । ಹಾಸಿಯ ಪೊಂದುವದಾಯ್ತೋ ॥ ಕಾಣ ಲೆಂತಕಟ ನಾ । ಏಣಾಕ್ಷಿಯಳ ಗುರು । ತೇನುಂಟು ನನಗಿಂದು ಬರಿದೇ ॥೪॥

ವಾರ್ಧಿಕ್ಯ

ಮಾಡಲೇನಕಟ ಭೂರಮಣ ಜಿನದತ್ತನಂ । ರೂಢಿಯಲಿ ಪೆಸರಿತ್ತು ಕಾಪಾಡಿ ಪೊರೆದಿಹಳು । ಕಾಡ ನಾಡಾಗಿ ಬೆಳಗಿಸಿ ಜಗದಿ ಸಲಹಿರುವ ಮಾತೆಯೇ ಶರಣರನ್ನು ॥ ನೋಡಿಯಿಂದುದ್ಧರಿಸಬೇಕೆನುತ ಕೈಮುಗಿದು। ಬೇಡಿಕೊಳಲಾಕ್ಷಣದಿ ಪರಿಚಯವ ಸೂಕ್ಷ್ಮದಿಂ । ಪಾಡಿಕೊಟ್ಟಳು ದೇವಿ ಯದೃಶ್ಯ ವಾಣಿಯಿಂದನುಕೂಲ ನಾಯಕಸಿಗೇ ॥೧॥

ರಾಗ—ಕೇತಾರಗೌಳ—ಝಂಪೆತಾಳ

ಮಾಯೆಯಿಂ ತಿಳಿದನಾಗಾ । ನೆನುಕೂಲ । ನಾಯಕನು ಮುದದಿ ಬೇಗಾ ॥ ಆಯಿತ್ತೈ ಜಯುವೆನ್ನುತಾ । ಶಾಸ್ತ್ರ ವಿಧಿ । ನ್ಯಾಯದಂತೆಸಗೆ ನಗುತಾ ॥೧॥ ಬಂದಿ ಶಾಸ್ತ್ರವು ಜರಗಲೂ । ಕಾಣುತಲೀ । ಮಂದಿಗಳು ಜಯುವೆನ್ನಲೂ ॥ ಅಂದು ನೃಪ ತೋಷದಿಂದಾ । ಮನ್ನಿಸಿದ । ಯಿಂದು ನೀ ಧನ್ಯನೆಂದಾ ॥೨॥

ಭಾಮಿನಿ

ಪುರದಧಿಪನತ್ಯಧಿಕ ಹರುಷದಿ । ಮೊರೆವ ಮಂಗಲ ವಾದ್ಯ ರವದಿಂ। ಕರೆಸಿದನು ಸಹಜಾತೆಯುಳ ಪರಿವಾರ ಸಹಿತಾಗೀ ॥ ಪರಮ ಹರುಷೋತ್ಸವದಿ ವೈಭವ । ಮೆರೆದಿರಲು ಪುರವರದಿ ಬಳಿಕಾ । ತರತರದ ಶೃಂಗಾರಗಳ ರಚಿಸಿದರು ಮನವೊಲಿದೂ ॥೧॥

ವಾರ್ಧಿಕ್ಯ

ಬಳಿಕ ಪಾಂಡ್ಯನು ತನ್ನ ಕುವರಿ ಪದ್ಮಿನಿ ದೇವಿ । ಲಲನೆಯರ ಮಾಣಿಕ್ಯವೆನಿಪ ತನ್ನನುಜ ಸುತೆ । ವಿಲಸಿತಾಂಬುಜ ವದನೆಯಾ ಮನೋರಾಧಿನಿಯ ಸಹಿತ ಶೃಂಗಾರ ಗೈದೂ ॥ ಸುಲಲಿತಾಂಗಿಯರು ಬಹುದೆಸು ತಾಣತಿಯನಿತ್ತು । ಕುಲದೇವತಾರ್ಚನೆಯ ಗೈದು ವಿಧ್ಯುಕ್ತದಿಂ । ಸಲೆ ವಾದ್ಯ ರವಗಳುಂ ಮೊಳಗೆ ಮಣಿಮಂಟಪದಿ ಶಾಸ್ತ್ರವಿಧಿಗಳ ಸೂತ್ರದೀ ॥೧॥

ರಾಗ—ತೋಡಿ—ರೂಪಕತಾಳ

ವರ ಜಿನದತ್ತಗೆ ಪರಮ ಸುಂದರಿಯರ । ಸುರುಚಿರ ವೇದಿಕೆಯೊಳಗೇ॥

ಕರದೊಳು ಕರವಿಟ್ಟು ಧರಣಿಪ ಮೋದದಿ । ಗುರುಗಳ ಪುತದಿ ಧಾರೆಯನೂ ॥೧॥ ಎರೆದು ಸಂತೋಷದಿ ಸರುವರ ಮನ್ನಿಸಿ । ಸುರಪತಿಗಿಂ ಮಿಗಿಲೆನಿಸೀ॥ ಧರಣಿಯಮರರಿಗೆ ದಾನ-ಧರ್ಮಗಳಿತ್ತು । ಪರಿವಾರಗಳನು ಸತ್ಕರಿಸೀ ॥೨॥ ನೂತನ ವಧುವರರಿಂಗಿತ್ತು ಬಳುವಳಿ । ಪ್ರೀತನು ಕಳುಹೆ ಸಂತಸದೀ ॥ ಮಾತೆಯನೊಡಗೊಂಡು ಹೊಂಬುಜ ಕ್ಷೇತ್ರಕೆ । ಆತುರದಲಿ ಬಂದರೀಗಾ ॥೩॥

ರಾಗ—ಭೈರವಿ—ಝಂಪೆತಾಳ

ಓಲಗವ ಸೇರುತಲಿ । ಲೋಲಮತಿ ಜಿನದತ್ತ । ಕಾಲ ಕಳೆದನು ಸಕಲ। ಲೀಲೆಗಳ ನಡುವೇ ॥೧॥ ವನಕೇಳಿ ಶರಕೇಳಿ । ಘನ ವ್ರತಗಳಾಚರಿಸಿ । ಜಿನುಮಯೆಯ ಭಗವತಿಯ । ನೆನೆದರನುದಿನದೀ ॥೨॥ ಇರಲೊಂದು ದಿನ ಭೂಮಿ । ಶ್ವರನತುಲ ಸಾಕಾರ । ಪರಲೋಕ ಸೇರಿದುದ । ನರಿಕೆ ಗೈಯ್ಯಲಿಕೇ ॥೩॥ ಪುರ ಮಥುರೆ ಜನನಿಕರ । ಹರಿ ತರಲು ಮನ್ನಿಸುತ। ಸರುವರನು ಸತ್ಕರಿಸೆ । ದೊರೆಗೆ ಪೇಳಿದರೂ ॥೪॥

ವಾರ್ಧಿಕ್ಯ

ಜಾಲ ಕರ್ಮದ ಘೋರ ಪಾತಕಗಳಿಂ ಬೆಂದು । ಶೀಲ ತೊರೆದಮಿತ ವಿಷಯಾಂಧಕಾರದಿ ಮುಳುಗಿ । ಕೋಳುಗೊಂಡಂತ್ಯದಲಿ ರೋಗಾದಿಗಳು ಬರಲು ಅನುಭವಿಸಿ ನರಳಿ ನರಳೀ ॥ ಕಾಲವಶನಾದನಾ ಸಾಕಾರ ಪದ್ಮಿನಿಯು ಬಾಳ ತಾ ಮುಗಿಸಿದಳು ರಾಜರಿಲ್ಲೆಮಗಿಂಮು । ಪಾಲಿಸುವುದೆನುತೆರಗೆ । ಪರಿವಾರ ಪುರಜನರ ಮನ್ನಿಸಿದ ಜಿನದತ್ತನೂ ॥೧॥

ರಾಗ—ಸಾಂಗತ್ಯ—ರೂಪಕತಾಳ

ಪಾರತೆಯುರಿತಾಗ ಶ್ರೀಯಲೆ ದುಃಖದಿ । ಸೇರೆಯಾಸ್ಥಾನವ ಕಂಡೂ॥ ಚಾರು ಚರಣದಲಿ ಮಣಿಯಲು ಜಿನದತ್ತ । ವೀರನನಪ್ಪಿ ಪೇಳಿದಳೂ ॥೧॥ ಬಾಳಿದೆ ಸೌಭಾಗ್ಯ ಯೋಗದಿ ದೊರೆತನ । ಪಾಲಿಸಿದಳು ದೇವಿ ನಿನಗೇ ॥ ಮೇಲೆನಗೀ ಭೋಗ ಭಾಗ್ಯಗಳೇತಕೆ । ಪಾಲಿಸು ದೀಕ್ಷೆಗಪ್ಪಣೆಯಾ ॥೨॥ ತಾಯೆ ಪಾಲಿಸಿದಿರಿ ಬಾಳಿದೆನಿಂದಿಗೆ । ನೋಯದೆ ದೃಢಶಕ್ತಿಯಿಂದಾ ॥ ಕಾಯದ ಮಮತೆಯು ಬಾಧಿಸುತಿಹುದಿಂತು । ಹಾಯೆಂದು ಮಮ್ಮಲ ಮರುಗೇ ॥೩॥

ಭಾಮಿನಿ

ಬೇಡವೆಂದರು ಕೇಳದಿರಲಾ । ರೂಥಿಯುಧಿಸನು ಯೋಚಿಸಿದ ಸಾ । ತಾಡಿ ಫಲವಿಲ್ಲೆಂದು ಮಾತೆಗೆ ದೀಕ್ಷೆಗನುಮತಿಯಾ ॥ ನೀಡಿ ಚರಣದೊಳೆರಗೆ ಪ್ರೀತಿಯೊ । ಳಾಡಿ ಕೊಂಡಾಡಿದಳು ಸುತನನು । ನಾಡಿನೊಳು ಯಿನ್ನೇನು ಧನ್ಯನೊ ರಾಯ ಜಿನದತ್ತಾ ॥ ೧ ॥

ರಾಗ— ಪೂರ್ವಿ— ರೂಪಕತಾಳ

ವೀರ ಮಾತೆ ಶ್ರೀಯುಳೆಯು ಚಾರು ದೀಕ್ಷೆಯ । ಸೇರಿ ಮೆರೆಯೆ ಸಿದ್ಧರೆಲ್ಲ ಪಾಡೆ ಕೀರ್ತಿಯ ॥ ಧೀರನೊಂದು ದಿನದಿ ಬೇಟೆಯಾಡೆ ಶಬರರಾ । ಸೇರಿ ಮುಂದೆ ವನಕೆ ತೆರಳೆ ಬಳಿಕ ಭೂವರೀ ॥ ೧ ॥ ವರಾಹ ಸಿಂಹ ಕರಡಿ ತೋಳ ಚಿರತೆ ಮೃಗಗಳಾ । ತರಿದು ತರಿದು ಬರಲು ಮುಂದೆ ಬೇಡ ಸಂಕುಲಾ ॥ ಪುರದ ಸನಿಹ ಮೆರೆವ ಸರಸಿಯೆಡೆಗೆಯೋರ್ವನೂ । ಭರದಿ ಗಮಿಸಿ ಕಂಡ ಚೋದ್ಯ ದೊರೆಗೆ ಪೇಳ್ದನೂ ॥ ೨ ॥

ಭಾಮಿನಿ

ಬಿನ್ನಣವು ದೊರೆ ಸ್ವಾಮಿ ಸರಸಿಯೊ । ಳಿನ್ನು ಥಳಥಳಿಸುತ್ತ ಮೆರೆ ಯುವ । ರನ್ನವನು ಧಿಕ್ಕರಿಪ ಮಣಿಗಳ ನೋಡಿರೆಂದೆನಲೂ ॥ ಸನ್ನುತನು ಕೌತುಕದಿ ತರಿಸುತ । ಮನ್ನಿಸಿದ ಶಬರೇಶರೆಲ್ಲರ । ಮುನ್ನ ಕೊಂಡಾಡಿದನು ಮಣಿಗಳ ತೇಜದದ್ಭುತವಾ ॥ ೧ ॥

ರಾಗ— ಬೇಗಡೆ— ಅಷ್ಟತಾಳ

ಹೊಳೆಯುವ ಮಣಿಗಳು ಮೌಕ್ತಿಕವರರೇ । ತಿಳಿಯಲು ಧನ್ಯ ಪುಣ್ಯಾತ್ಮರು ಭಲರೇ ॥ ವಲಪಿಂದ ನೋಡಲು ಒಂದೀಗ ಮಸಕೂ । ಥಳ ಥಳಿಸುವುದೊಂದು ಭಾರಿಯು ಥಳಕೂ ॥ ೧ ॥ ಲೇಸಾಮದೆಂದು ಸಂತೋ ಷದಿ ಜನಪಾ । ಆ ಸಮಯದಿ ಬೇಡ ಸೇರಲು ದಿನಪಾ ॥ ಜೇಸರಾಮದ ರಿಂದ ಪಶ್ಚಿಮದೆಸೆಯಾ । ತಾ ಸೇರೆ ರಜನಿಯು ಮುತ್ತಿತು ತಿರೆಯಾ ॥ ೨ ॥

ಭಾಮಿನಿ

ಮರುದಿವಸದುದಯದಲಿ ಧರಣಿಪ । ಬರಿಸಿ ಶಿಲ್ಪಿಯ ಕನಕ ನಿರ್ಮಿತ।

ಮಿರುಗುತಿಹ ಮೌಕ್ತಿಕಗಳೆರಕದಿ ಜೋಡು ಮೂಗುತಿಯಾ ॥ ಕರ ಚಮತ್ಕಾರದಲಿ ನಿರ್ಮಿಸಿ । ಭರದಿ ತಾರೆಂದೆನಲು ನಮಿಸುತ । ದೊರೆಯಸುಜ್ಞೆಯ ಶಿರದೊಳಾಂತಾ ಕೆಲಸ ಪೂರಯಿಸೀ ॥೧॥

ರಾಗ—ಸಾರಂಗ—ಅಷ್ಟತಾಳ

ಜನಪತಿಗದನೀಯಲೂ । ಕಾಣುತ ಭೂಪ । ಮನದಿ ಹರ್ಷಿತನಾಗಲೂ ॥ ಮನದನ್ನೆಗುತ್ತಮ । ವೆನುತಿಟ್ಟು ಮಾಸಿದ । ಮಣಿಯ ಮೂಗುತಿಯನ್ನು । ಚಿನುಮಯೆಗೀವೆನು ॥೧॥ ಎನುತಾಗ ಯೋಚಿಸುತಾ। ಪದ್ಮಾವತಿ ಘನವಂತೆ ನಿನಗೆನ್ನುತಾ ॥ ಮನದ ವಿಕಲ್ಪದಿ । ಮಣಿಯರ್ಪಿಸಲು ದೇವಿ । ಕ್ಷಣದಲಿ ತಿಳಿದಳು । ಘನ ಲೋಭದಾಸೆಯ ॥೨॥

ಭಾಮಿನಿ

ಸತಿಗೆ ಮಂಗಲವಿರಲೆನುತ ಭೂ । ಪತಿಯು ಮಾಡಿದ ಹೇಯ ಕೃತ್ಯದೊ । ಳತಿ ಮನೋವ್ಯಥೆಯಿಂದ ಕೊರಗಿದಳಾಗ ಶ್ರೀದೇವೀ ॥ ಕ್ಷಿತಿಪತೀಶ್ವರನಿಂತು ಬಗೆದನೆ । ಮತಿ ಮರೆತು ವರ್ತಿಸಿದನಕಟಾ । ಯುಕುತವೇ ತಾನಿಹುದು ಯೋಗ್ಯವೆ ಕಾಲ ಕಲಿಯುಗವೂ ॥೧॥

ರಾಗ—ಸಾವೇರಿ—ರೂಪಕತಾಳ

ದೇವಿ ನೊಂದಾಗ ಯೋಚಿಸಿದಳು ಜಿನದತ್ತ । ಮಾಯೆಯಾವರಣದಿ ಭವದಾ ॥ ಕಾಯದ ಮೋಹ ಲೋಭಗಳಿಂದ ಕೆಟ್ಟನು । ನಾವಿಂತು ಭ್ರಮೆಗೊಳ್ಳಲೇಕೇ ॥೧॥ ತರಿಸುವೆ ರಾಣಿಯ ಮೂಗುತಿ ಮಾಯದೊ । ಳಿರಿಸುವೆಯವಳ ನಾಸಿಕಕೇ ॥ ಧರಣಿಪನರ್ಪಿಸಿ ತೆರಳಿದ ಮಾಸಿದ । ವರಮಣಿಯವರಿಗರ್ಪಿಸುವೇ ॥೨॥ ಕಾಣುವ ಸೌಭಾಗ್ಯದಾಶೆಗೆ ಮನ ಸೋತು । ಏನಾದರಾಗಲಿ ಎನುತಾ ॥ ತಾನೆ ಬಗೆದ ಭೂಪ । ಮಹಿಮೆಯನರಿಯಲಿ । ಜಾಣತನದಿ ಪರಿಹರಿಪೇ ॥೩॥ ಒಡನೆ ಮೂಗಿನೊಳಿಪ್ಪ ಮೂಗುತಿ ಬದಲಾಗೆ । ಮಡದಿಯ ನೋಡುತ್ತ ನಡುಗೀ ॥ ನಡುಗಿ ಬೇಗುದಿಗೊಂಡು ಬೆಂಡಾಗಿ ಕಂಗೆಟ್ಟು । ನುಡಿದನು ಧರಣಿಪನಾಗಾ ॥೪॥

ರಾಗ—ಧನಶ್ರೀ—ಅಷ್ಟತಾಳ

ಲಾಲಿಸೂ । ಕಾಂತೆ । ಲಾಲಿಸೂ ॥ ಮೂಲೋಕದೊಡತಿಯ । ಮಹಿಮಾತಿಶಯಳ ॥ ಅಪ॥ ಮಾಸಿದ ಮೂಗುತಿ ಮಾಯದಿ ಬದಲಿಸಿ । ಆಶೆಯ ಪಾಶವ ಛೇದಿಸುತಾ । ವಿಶ್ವ । ರಾಶಿಗೆ ತೇಜವ ತೋರಿಸುತಾ । ದಿವ್ಯ । ಭೂಷಿತಳಾದಳು ದೇವಿಯು ತಾ ॥ ಯೋಚಿಪುದೇನೆ । ಧರ್ಮ. ಪರೆತೇನೇ ॥ ರಾಜ್ಯದಾಶೆ ವೈಭವವೆಲ್ಲ ಕನಸಾಯ್ತೂ । ರೂಪ । ರಾಶಿ ದೇವಿಯ ಕೋಪಕೆಡೆಯಾಯ್ತೂ ॥೧॥ ನಾರಿಯ ಮೇಲಣ ಮೋಹದಿ ನೀವಿಂದು । ಕಾರಿಯ ಕೆಡಿಸಿದಿರಕಟೆಂಬೆ । ನಮ್ಮ । ದಾರಿಯೆ ಸ್ವಾರ್ಥದ ಮಡುವೆಂಬೆ ॥ ಆಹಾ । ಭೂರಿ ಕೃಪಾಕರೆ ಜಯತೆಂಬೆ । ದಯೆದೋರವ್ವ । ಕೃಪೆ ಬೀರವ್ವ । ದಿವ್ಯ । ದಾರಿಯ ತೋರಿ ಕಾಪಾಡೆಯಾ । ಪದ್ಮ । ಧಾರಿಣಿ ಪ್ರಭುವಿನ ನೋಡೆಯಾ ॥೨॥

ಭಾಮಿನಿ

ಯೋಚಿಸುವುದೇಕಿಂತು ಮಾಯದಿ । ಸೂಚಿಸಿಹಳನುಚಿತದ ಕೃತ್ಯವ । ಯಾಚಿಸುವ್ರದೇ ಸನ್ನಿಧಿಯೊಳಿಂದೀಗ ಬಾರೆನುತಾ ॥ ಆಚೆಯೊಳಗಿಹ ದೇವಿ ಬಳಿ ಬಂ । ದಾ ಚತುರ್ದಶ ಭುವನ ಖ್ಯಾತೆಯ । ನಾಚುತಲಿ ಮನ ಮರುಗಿ ಚರಣದೊಳೆರಗಿ ದೈನ್ಯದಲೀ ॥೧॥

ರಾಗ—ಯಮುನಾಕಲ್ಯಾಣಿ—ಝಂಪೆತಾಳ

ಪಾಳಿಸಗಿದೆನು ಮಾತೆ । ಬಾಳುವೆಗೆ ಬಹು ವಿಧದಿ । ಮೂಲಕಾರಣ ಳಾದೆ । ಪೇಳಿ ಫಲವೇನೂ ॥ ಶೀಲೆ ತಪ್ಪೆಸಗಿದುವ । ಬಾಲನಪರಾಧವಂ । ದಾಲಸ್ಯ ಗೈಯ್ಯದೆಲೆ । ಪಾಲಿಪುದು ಜನನೀ ॥೧॥ ಎಂದೆರಗಿ ನುತಿಸುತಿರೆ ಮಂದಬುದ್ಧಿಯ ಕಂಡು । ಸಿಂಧುಗಂಭೀರೆ ಖತಿಯಿಂದ ನೈದೋರೀ ॥ ಚಂದವಾದುದು ಕೃತ್ಯ । ಯಿಂದೇಕೆ ಕ್ಷಮಿಸುವ್ರದು । ಸುಂದರಾಂಗಿಯ ಸೇರಿ । ಮುಂದೆ ಸುಖವಿರಲೀ ॥೨॥

ರಾಗ—ಶಂಕರಾಭರಣ—ಮಟ್ಟಿತಾಳ

ಲೇಸು ಕಾರ್ಯಗೈದೆ ಭಕ್ತ ಭೂಪಕೋವಿದ । ಆಸೆಯಿಂದ ಲೋಭ

ದೃಷ್ಟಿಯಿಂದ ಗೈದುದ | ದಾಸನೆಂದು | ನಿನ್ನ ಸಕಲ | ಪೋಷಣೆಯ | ಭಾರ ವಹಿಸಿ | ತೋಷಗೊಳಿಸಿ | ದುದಕೆ ಈಸು | ಭೂಷಣಗಳ | ತೊಡಿಸಿದೆಯಾ ||೧|| ಮಾನ ಕಳೆವರಿಲ್ಲರಸ್ಯರ್ತಾನೆ ತನ್ನಯಾ | ಹೀನ ತನದಿ | ಗೈದುಕೊಂಬುದಿದುವೆ ನಿರ್ಣಯಾ || ಕಾನನವನು | ಕಡಿಸಿ ಪುರವ | ಭಾನು ತೇಜದಂತೆ ಹೊಳೆವ | ಶ್ರೀನಿವಾಸವಿದನು ನಿನಗೆ | ಶ್ಯಾನೆ ವಿತ್ತರಾರು ಪೇಳು ||೨|| ಆಗಲದಕೇ ನಿಂದು ಕಲಿಯು ಕಾಲ ಹಬ್ಬಿದೇ | ಬೇಗ ಮರೆಯ ಪಡಿಸಲಿರುವ ಪರುಷ ಒಗ್ಗದೇ || ಕ್ಷೋಣಿಯನ್ನು ಪಾಲಿಸುತಲಿ | ಜಾಣೆಯೊಡತಿಯೊಡನೆ ಬಾಳು | ಕಾಣೆ ಮುಂದೆ ನೆಲಸಲಾರೆ | ಏನ ಮಾಡಲಿದಕೆ ನಾನು ||೩||

ಭಾಮಿನಿ

ಪರುಷವಡಗಿಪೆನೆನಲು ತಾಪದಿ | ಧರಣಿಪತಿ ದುಃಖಿಸುತ ಮಾತೆಯ | ಪೊರೆಯುವಾಕೆಯು ನೀನೆ ಕೊಲುವಳು ನೀನೆ ಹೊರತಿಹರೇ || ಎರಗಿ ನುತಿಸುತ ಮರುಕ ಪಡುತಿಹ | ಪರಮ ಭಕ್ತನ ಕಂಡು ಕರಗುತ | ಕೊರಗ ಬೇಡೆಲೆ ಬಾಲ ಪೇಳಿದ ವಚನಕಳುಕಿಲ್ಲಾ ||೧|| ಆದರಾಗಲಿ ನಾನು ನೆಲಸಿದ | ಮೇದಿನಿಯೊಳಿಹ ಲಕ್ಕಿ ತರುವಿದು | ಮೋದಮಯವಿರುವನಿತು ವರೆಗಾ ಭಕ್ತ ಜಾಲವನೂ || ಆದರಿಸಿ ಭಕ್ತಿಯೊಳು ಪೂಜಿಪ | ಸಾಧುಗಳ ಸಂತತಿಯ ಪಾಲಿಪೆ | ಭೇದವಿಲ್ಲೆನೆ ಭೂಪ ಕೇಳಿದು ಅಭಯವೀ ಜಗಕೇ ||

ರಾಗ—ಸಾವೇರಿ—ತ್ರಿವುಡೆತಾಳ

ನುಡಿ ಎರಡಿಲ್ಲವೈ | ನಡೆ ನೀನು ಬೇಸರ | ಪಡಬೇಡ | ವೆನಲಡಗುತಲೀ || ಸಡಗರದಿಂದಲಿ | ಪರುಷವ ರಸನಿಧಿ | ಗೊಡನಿಳಿಸಲು ಕಂಡು ಜನಪಾ ||೧|| ಕಾಲ ಕರ್ಮಗಳಿಂಗೆ | ಲೀಲೆಯಾಂತಳು ದೇವಿ | ಮೂಲವೆ ಲೋಭವೆಮ್ಮಿಂದಾ || ಶೀಲ ಸದ್ಗುಣಗಳ | ಹಾಳುಗೊಳಿಸುವಂಥ | ಬಾಳುವೆ ಬೇಡಿನ್ನು ನಮಗೇ ||೨|| ಕಾಮ ಮೋಹಗಳೆಂಬ | ಕಾಮಿನಿ ಕಾಂಚನ | ತಾಮಸ ಪೂರ್ಣ ಜೀವನವಾ || ಸೀಮೆಯೊಳೆಲ್ಲರು | ತ್ಯಾಗದಿ ತ್ಯಜಿಸಿ ಸು | ಪ್ರೇಮದಿ ದೇವಿಯರ್ಚನೆಯಾ ||೩|| ನೇಮ ನಿಷ್ಠೆಗಳಿಂದ | ಗೈದು ಭವಾಂತರ | ಸೀಮೆಯ ದಾಂಟಿ ಶಾಶ್ವತದಾ || ಕಾಮನೆಗಳ ಹೊಂದಿ | ಸಿದ್ಧಿಯ ಪಡೆವುದೆ | ಪ್ರೇಮ ಸಾಮ್ರಾಜ್ಯ ನಿಶ್ಚಯವೂ ||೪||

ಭಾಮಿನಿ

ದೇವಿಯರ್ಚನೆ ಗೈದು ಧರಣಿಪ । ಭಾವಶುದ್ಧಿಯೊಳಿರ್ದ ನಿತ್ಯದಿ । ಕಾವುದೈ ಚಿನುಮಯೆಯೆ ಸರ್ವೇಶ್ವರಿಯೆ ಭಕ್ತರನೂ ॥ ಭಾವಪೂರ್ಣದಿ ಸತ್ಯಧರ್ಮದಿ । ಸಾವನಕ ಕಾಪಿಡುತ ನಡೆಸೈ । ಕೋವಿದೆಯೆ ಸರ್ವಾರ್ಥ ಸಿದ್ಧಿಯನಿತ್ತು ಪೊರೆಯುವುದೂ ॥೧॥ ಧರೆಯೊಳೆಸದಿಹ ಕಡಿರು ಉದ್ಯಾ । ವರದ ಹೇಡ್ಯದ ಸ್ಥಳದಿ ವಾಸಿಪ । ಪರಮ ಪಾವನವಾದ ಕೌಂಡಿನ್ಯದ ಸುಗೋತ್ರದಲೀ ॥ ಧರೆಯಮರ ಶ್ರೀ ದಾಸನಾಯಕ । ವರ ಸುಪುತ್ರನು ವಾಸುದೇವನು । ವೊರೆದನಿದ ಚಾರಿತ್ರ್ಯರೂಪಕ ಯಕ್ಷಗಾನದಲೀ ॥೨॥ ಕರುಣಿಪುದು ಸುಜ್ಞಾನ ಸಂತರು । ವಿರಿಸುವುದು ಸಂಪ್ರೀತಿ ಶರಣನ । ಪೊರೆಯಬೇಹುದು ಸಕಲ ಸಜ್ಜನರಿಂದು ಹರಸುತಲೀ ॥ ನಿರತದಲಿ ಶರಣೆಂಬೆ ದೇವಿಯ । ಚರಣದಲಿ ಪೊಡಮಡುವೆ ತಪ್ಪನು । ಪರಿಹರಿಸಿ ಮೆರೆಸುವುದು ಕೃತಿಯನು ಭುವನ ಮೂರರಲೀ ॥೩॥

ಮಂಗಲಪದ

ಉದಯರಾಗ— ಏಕತಾಳ

ಹೊಂಬುಜ ಪುರ ಜಗದಾಂಬಿಕೆಗೇ ಜಯ । ನಂಬಿದ ಭಕ್ತರ ಪೊರೆವಳಿಗೇ ॥ ಕುಂಭಿನಿ ಭಾರವನಿಳುಹುತ ಭಕ್ತ ಕ । ದಂಬವಿನುತೆ ಪದುಮಾವತಿಗೇ ॥೧॥ ಜಿನದತ್ತಾಖ್ಯನಿಗೊಲಿದಳಿಗೇ ! ಜಯ । ಕನಕ ವರ್ಷವನು ಕರೆದಳಿಗೇ । ಜಿನಪದರಾಧಕ ವೃಂದರುದ್ಧಾರೆಗೆ । ಘನ ಮಹಿಮಾನ್ವಿತ ಚರಿತಳಿಗೇ ॥೨॥ ಆದಿಜಿನೇಶಗೆ । ಮೇದಿನಿ ತೋಷಗೆ । ಸಾಧುಗಳರಸಗೆ ಶ್ರೀ ಶಿವಗೇ ॥ ಭೇದರಹಿತ ಗುಹ । ಮೋದಕ ಪ್ರಿಯನಿಗೆ । ಮಾಧವ ವಿಧಿ ಸುರಪಾಲರಿಗೇ ॥೩॥ ಕಮಲಜ ರಾಣಿಗೆ । ಕಮಲಜೆ ದೇವಿಗೆ । ನವಗ್ರಹ ಮನು ಮುನಿ ಸಿದ್ಧರಿಗೇ ॥ ಭುವಿಯೊಳು ರಂಜಿಸಿ । ರವಿಯಂತಿರುತಿಹ । ಕವಿ ಕುಲ ಗುರು ಹಿರಿಯರ ಪದಕೇ ॥೪॥

ಮಂಗಳಮಸ್ತು

— ಸಂಪೂರ್ಣಂ —

ಇದೇ ಲೇಖಕರ

ಶ್ರೀ ಶಬರಿಮಲೈ ಅಯ್ಯಪ್ಪನ್ ಚರಿತೆ
ಯಕ್ಷಗಾನ ಪ್ರಸಂಗ

ಮತ್ತು

ಶ್ರೀ ಕನ್ಯಾಕುಮಾರಿ ಕ್ಷೇತ್ರ ಮಹಾತ್ಮ್ಯೆ

ಬೇಗನೆ ಅಚ್ಚಾಗಲಿದೆ.

ಸರ್ವರೂ ಪ್ರೋತ್ಸಾಹಿಸಬೇಕಾಗಿ ಹಾರ್ದಿಕ ವಿನಂತಿ.

ಮುದ್ರಕರು:- ಶ್ರೀ ಪದ್ಮಾಂಬಾ ಪ್ರಿಂಟರ್ಸ್, ಮೂಡುಬಿದಿರೆ, ದ. ಕ.